


ಕಲ್ಯಾಣ ಕಿರಣ



ಆಗಸ್ಟ್-2008 ಬೆಲೆ-10.00





... ಅವರಿಂದ



[illegible] ಪಂಚಮಿಯಂದು ಮುಂಬೈನ ರಾಷ್ಟ್ರೀಯ ಬಸವ ದಳದ ಆರ್. ಜಿ. ಹೆಬ್ಬಳ್ಳಿಯವರಿಗೆ ಪೂಜ್ಯ ಮಾತಾಜಿ ನೆನಪಿನ ಕಾಣಿಕೆ ನೀಡುತ್ತಿರುವುದು.









ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿಯವರು ಜಿ. ಗುರುಪ್ರಸಾದರವರಿಗೆ ಶಾಲು ಹೊದಿಸಿ ಆಶೀರ್ವದಿಸಿದರು.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-38 | ಬಸವ ಶಕೆ-875 | ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-7 | ಆಗಸ್ಟ್ 2008 | ವಾರ್ಷಿಕ ಚಂದಾ 100/- ರೂ.

ಸೂತ್ರಧಾರಿ - ರಕ್ಷಕ

ಬಸವ ನಿನ್ನ ಒಲುಮೆಯನ್ನು ಹೇಗೆ ನಾನು ಸ್ಮರಿಸಲಿ?
ಯಶದಿಂದ ಮರುಜನ್ಮವೆಮಗೆ ನೀನು ಇತ್ತೆಯೌ || ಪ ||

ಬಿರುಗಾಳಿ ಬೀಸುತಿರಲು, ಮುಸಲಧಾರೆ ಸುರಿಯುತಿರಲು
ಬರಸಿಡಿಲು ಎರಗಿ ಬರಲು ಪಾರು ಮಾಡಿ ಉಳಿಸುತ
ಕರುಣ ಕವಚ ನಿರುತ ಹೊದಿಸಿ ಎಮ್ಮ ಕಾಯ್ದು ರಕ್ಷಿಸಿದ
ಕರುಣೆ ನಿನ್ನ ಪ್ರೇಮವನ್ನು ಹೇಗೆ ನಾನು ಸ್ಮರಿಸಲಿ? || 1 ||

ರೆಪ್ಪೆ ಆಲಿಯ ರಕ್ಷಿಸುವ್ರೋಲ್ ಚಿಪ್ಪು ಮೆದುಳ ಕಾಯುವವ್ರೊಲು
ಎದೆಯ ಗೂಡು ಹೃದಯ ಕಾಯ್ವ ತೆರದಿ ಎಮ್ಮ ರಕ್ಷಿಪೆ
ಎಡರು ಎನಿತು ಬಂದರೂ, ತೊಡರು ಎನಿತು ಸಂದರೂ
ತಾಯ ಗರ್ಭದಲ್ಲಿ ಶಿಶುವ ಇಟ್ಟು ಕಾಯುವಂತೆ ಕಾಯ್ವೆ || 2 ||

ಕೋಲ ತುದಿಯ ಕೋಡಗದೋಲ್ ನೇಣ ತುದಿಯ ಬೊಂಬೆಯವ್ರೋಲ್
ಒಲವಿನಿಂದ ನೀನು ಕುಣಿಸೆ ಕುಣಿವ ಬೊಂಬೆಯಂತೆ ನಾವು
ವೀಣೆ ಹಿಡಿದ ವೈಣಿಕ ನೀ, ನಿನ್ನ ಕೈಯ ವೀಣೆಯಾವು
ಜ್ಞಾನ ನಾದಯೋಗಿ ನೀನು ನುಡಿಪ ಹೊಣೆಯು ನಿನ್ನದೈ || 4 ||

ವಿಶ್ವದ ಬಾನಿನಲ್ಲಿ ಬಾಳ ಗಾಳೀ ಪಟವ ಬಿಟ್ಟು
ವಿಶ್ವಾಸದ ಬಾಲಗೋಸಿ ಪವನಪಟಕೆ ಸೇರಿಸಿಟ್ಟು
ಕರುಣೆಯಿಂದ ಸೂತ್ರವನ್ನು ಭದ್ರವಾಗಿ ಕೈಯಲ್ಲಿಟ್ಟು
ನಿರುತ ಕಾವ ಗುರುವು ನೀನು ಸಚ್ಚಿದಾನಂದ ರೂಪನೆ || 5 ||

- ಮಾತಾಜಿ

ಅಕ್ಟೋಬರ್ 12, 13, 14ರಂದು ಬಸವ ಕಲ್ಯಾಣದಲ್ಲಿ ಏಳನೆಯ ಕಲ್ಯಾಣ ಪರ್ವ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಮೇ 1, 2 ಮತ್ತು 3ರಂದು ಕಲ್ಯಾಣ ಪರ್ವ ಎಂಬ ಧಾರ್ಮಿಕ ಉತ್ಸವವನ್ನು 2002ರಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತಷ್ಟೆ. ಏಳನೆಯ ಕಲ್ಯಾಣ ಪರ್ವವು 2008ರ ಮೇ 1, 2,3ರಂದು ನಡೆಯಬೇಕಿತ್ತು. ಆದರೆ ಎರಡೂ ವರ್ಷ ಮಳೆ ಮತ್ತು ಭಯಂಕರ ಗಾಳಿಯಿಂದ ಪೆಂಡಾಲ್ ಕಿತ್ತು ಹೋಯಿತು. ತಗಡುಗಳು ಗಾಳಿಗೆ ಹಾರಿಹೋದವು. ಅದು ತೀವ್ರವಾದ ಬಿಸಿಲಿನ ಪ್ರದೇಶವಾದ್ದರಿಂದ ಕೆಲವು ಭಾಗಗಳವರು ಬರಲು ಹಿಂಜರಿಯುತ್ತಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕಲ್ಯಾಣ ಪರ್ವದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ.

ಅಶ್ವಯುಜ ಪೌರ್ಣಿಮೆಯನ್ನು ವೀರ ಮಾತೆ ಅಕ್ಕನಾಗಲಾಂಬಿಕೆಯ ಹೆಸರಿನಲ್ಲಿ ಆಚರಿಸುತ್ತಿದ್ದೇವೆ. ಇದಕ್ಕೆ ಹೊಂದಿಕೊಂಡು ಕಲ್ಯಾಣ ಪರ್ವವನ್ನು 2008ರ ಅಕ್ಟೋಬರ್ 12, 13, 14ರಂದು ಆಚರಿಸಲಾಗುವುದು (ಸಂಸ್ಥೆಯ ಕ್ಯಾಲೆಂಡರಿನಲ್ಲಿ ಅಕ್ಟೋಬರ್ 7, 8, 9ರಂದು ಎಂದು ಮುದ್ರಿಸಲಾಗಿದೆ. ಅದು ದಸರಾದ ದಿನಗಳಾದ್ದರಿಂದ ಜನರಿಗೆ ಅನಾನುಕೂಲವಾಗುತ್ತದೆ ಎಂದು ಬಹಳ ಜನರು ಅಭಿಪ್ರಾಯಪಟ್ಟುದರಿಂದ ವಿಜಯ ದಶಮಿ (ದಿ.9) ಮುಗಿದ ಎರಡು ದಿನಗಳ ಮೇಲೆ ಇಡಲಾಗಿದೆ.)

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಸೆಪ್ಟೆಂಬರ್ ತಿಂಗಳಲ್ಲಿ ಬರುವ ಹಬ್ಬ - ಹುಣ್ಣಿಮೆಗಳು

1. ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 77ನೇ ಜಯಂತಿ	- ಸೆಪ್ಟೆಂಬರ್	03
2. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	,,	,,
3. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 50ನೆಯ ವರ್ಧಂತಿ	,,	,,
4. ಶ್ರಾವಣ ಮಾಸ - ಬಸವ ಜ್ಯೋತಿಯ ಸಮಾರೋಪ ಸಮಾರಂಭ	,,	,,
5. ಮಾಚಿದೇವ ಪೌರ್ಣಿಮೆ	- ಸೆಪ್ಟೆಂಬರ್	15
ಕಲ್ಯಾಣ ಕ್ರಾಂತಿ ಸಂಸ್ಮರಣೆ	,,	,,
6. ವಚನ ಲೇಖನ ವ್ರತ ಮತ್ತು ಶರಣರ ಚರಿತ್ರೆ ಪಾರಾಯಣ ಪ್ರಾರಂಭ	,,	30

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035. 20th Main, 2nd Block, Rajajinagar, Bangalore-10.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ : - ಮಾತಾಜಿ

ಬಸವಣ್ಣನ ಲೀಲೆ ಲೀಲೆ ಹೋ

ಬಸವನ ಮಾತೆ ಮಾತು ಬಸವಣ್ಣನ ಭಕ್ತಿಯು ಬಿಜಯೋಜೆ ಕೇಳ್
ಬಸವನ ಬುದ್ಧಿ ಬುದ್ಧಿ ಬಸವಣ್ಣನ ಪ್ರಾಣ್ಯದ ಲೀಲೆ ಲೀಲೆ ಹೋ

ಬಸವಣ್ಣನ ಲೀಲೆಯೇ ಲೀಲೆ ಎನ್ನುತ್ತಾನೆ ಭಕ್ತಿ ಕವಿ ಹರಿಹರ. ಅಂದು 6-8-08. ಬೆಂಗಳೂರಿನ ಸರ್.ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಧರ್ಮಪಿತ ಬಸವಣ್ಣನವರ 813ನೆಯ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮ. ಎರಡು ತಿಂಗಳಿನಿಂದ ಸಿದ್ಧತೆ ನಡೆಸಿದ್ದೆವು. ಹಾಲ್ ಬುಕ್ ಮಾಡಿದ್ದೇ ಅಲ್ಲದೆ ವ್ಯಾಪಕ ಪ್ರಚಾರವನ್ನು ಮಾಡಲಾಗಿತ್ತು. ಬಹಳಷ್ಟು ಗಣ್ಯರನ್ನು ಆಹ್ವಾನಿಸಲಾಗಿತ್ತು. ಅವರಲ್ಲಿ ಮುಖ್ಯರೆಂದರೆ ಮುಖ್ಯಮಂತ್ರಿಗಳು ಮತ್ತು ಸಚಿವರಾದ ರಾಮಚಂದ್ರಗೌಡ, ಸುರೇಶ್ ಕುಮಾರ್, ಕೆ.ಎಸ್. ಈಶ್ವರಪ್ಪನವರು, ನೈಸ್ ಕಂಪನಿಯ ಮುಖ್ಯಸ್ಥರಾದ ಅಶೋಕ್ ಖೇಣಿ, ಕೆಲವಾರು ಶಾಸಕರು, ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷ ಭೀಮಣ್ಣ ಖಂಡ್ರೆ, ಉಪಾಧ್ಯಕ್ಷ ಶಾಸಕ ಚಂದ್ರಕಾಂತ ಬೆಲ್ಲದ ಮತ್ತಿತರ ಶಾಸಕರು.

ಈ ಕಾರ್ಯಕ್ರಮಕ್ಕೆ ಭಂಗ ತರಬೇಕು, ನಡೆಯದಂತೆ ಮಾಡಬೇಕು, ಗಣ್ಯರು ಬರಲಾರದಂತೆ ಮಾಡಬೇಕೆಂದು ವೀರಶೈವ ಪ್ರಮುಖರು ಯೋಜನೆ ರೂಪಿಸಿದರು. ಅನು ದೇವಾ ಹೊರಗಣವನು ಪುಸ್ತಕದ ಹೋರಾಟದ ಸಮಯದಲ್ಲಿ ಶರಣ. ಭೀಮಣ್ಣ ಖಂಡ್ರೆಯವರು ಹೆಚ್ಚು ಹತ್ತಿರವಾದರು; ಹಿಂದಿನ ವಿರಸ ಕರಗಿತ್ತು. ಬಸವ ಮಂಟಪಕ್ಕೆ ಬಂದು ಹೋಗಿದ್ದರು. ಅವರ ಮಗ ಶರಣ. ಈಶ್ವರ ಖಂಡ್ರೆಯವರು ಚುನಾವಣೆಯಲ್ಲಿ ಗೆದ್ದ ತಕ್ಷಣ ಭೀಮಣ್ಣ ಖಂಡ್ರೆ ಫೋನ್ ಮಾಡಿದ್ದರು. ಗೆದ್ದ ಮೇಲೆ ಈಶ್ವರ ಖಂಡ್ರೆಯವರು ಬೆಂಗಳೂರಿಗೆ ಬಂದ ತಕ್ಷಣ ದರ್ಶನಕ್ಕೆ ಬಂದು ಪುಷ್ಪಗುಚ್ಛ, ಫಲಗಳನ್ನು ನೀಡಿ ಆಶೀರ್ವಾದ ಪಡೆದರು. ಇದೆಲ್ಲವೂ ಕೆಲವರಿಗೆ ಸಹಿಸಲಾರದ ಸಂಗತಿ. ವೀರಶೈವ ಮಹಾಸಭಾ ಮತ್ತು ಬಸವ ಧರ್ಮ ಪೀಠ ಸಾಮಾಜಿಕವಾಗಿ ಒಂದುಗೂಡಿ (ತಾತ್ವಿಕವಾಗಿಯಂತೂ ಒಂದು ಗೂಡುವುದಿಲ್ಲ) ಕೆಲಸ ಮಾಡುವುದು ಕೆಲವರಿಗೆ ಸಹಿಸಲಾಗದ ಅಸೂಯೆಗೆ ಕಾರಣವಾಗುತ್ತದೆ. ಹೀಗಾಗಿ ನಮ್ಮ ದಿ.6-8-2008ರ ಕಾರ್ಯಕ್ರಮಕ್ಕೆ ಭಂಗತರಲು ಯೋಜಿಸಿದರು. ಬಹುಶಃ ಆಹ್ವಾನ ಪತ್ರಿಕೆಯಲ್ಲಿ ಹೆಸರಿದ್ದ ಗಣ್ಯರಿಗೆಲ್ಲ ಗಲಾಟೆಯಾಗುತ್ತದೆ ಎಂಬ ಸುದ್ದಿಯನ್ನು ರವಾನಿಸಿರಲೂ ಸಾಕು.

ಪ್ರತಿಭಟನೆಗೆ ಬಂದವರೆಲ್ಲ ಬಹಳ ದೊಡ್ಡವರೆ! ಡಾ|| ಚಿದಾನಂದ ಮೂರ್ತಿ, ಪ್ರೊ|| ಡಾ. ಮರುಳು ಸಿದ್ದಯ್ಯ, ಲೀಲಾವತಿ ಪ್ರಸಾದ, ಪ್ರಮೀಳಾ ನೇಸರ್ಗಿ, ಉಮಾದೇವಿ ಚಂದ್ರಶೇಖರ್, ಕೇಶವ್ ಕುಮಾರ್ ಮತ್ತು ಅವರ ಸಂಗಡ 10- 15 ಜನರು ಹೆಚ್ಚು ಪರಿಚಯ ಸಮಾಜಕ್ಕೆ ಇರದವರು. ಹೆಚ್ಚಿನ ಬೆಂಬಲಿಗರಿಲ್ಲದೆ ಅವರು ಮಾಡಿದ ಪ್ರದರ್ಶನ ಅತ್ಯಂತ ಕಳಪೆ ಎನ್ನಿಸಿತು. ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡಂತೆ ಆಗಿತ್ತು. ಸುಮಾರು 10 ಗಂಟೆಯಿಂದ 11 ಗಂಟೆಯವರೆಗೆ ಟೌನ್ ಹಾಲ್ ಮುಂಭಾಗದ ಮುಂದೆ ಕುಳಿತಿದ್ದರು. ಬಸವ ಪಂಚಮಿ ಕಾರ್ಯಕ್ರಮಕ್ಕೆಂದು ಬಂದ ಹಿರಿಯ ಶರಣರಾದ ಪುಟ್ಟರುದ್ರಪ್ಪ ಬಂದವರೇ ಪ್ರತಿಭಟನಕಾರರನ್ನು ಭೇಟಿಯಾಗಿದ್ದಾರೆ. ಶರಣ. ಪುಟ್ಟರುದ್ರಪ್ಪ ಲಿಂಗಾಯತ ಧರ್ಮ ಮಹಾ ಸಭಾದ ಅಧ್ಯಕ್ಷರು, ವಯೋವೃದ್ಧರು, ತತ್ವ ನಿಷ್ಠರು. ಅವರನ್ನು ನೋಡಿ ಕೆಲವರು ಅಧೀರರಾಗಿದ್ದಾರೆ. ಪ್ರತಿಭಟನಕಾರರನ್ನು ಉದ್ದೇಶಿಸಿ ಶರಣ. ಪುಟ್ಟರುದ್ರಪ್ಪ ಹೀಗೆ ಹೇಳಿದ್ದಾರೆ. ``ಅನೇಕ ಲಿಂಗಾಯತ ಸ್ವಾಮಿಗಳು ಅನ್ಯ ದೇವತೆಗಳ ಪೂಜೆ ಮಾಡುವರು. ಅವುಗಳ ಗುಡಿಗಳ ಉದ್ಘಾಟನೆಗೆ ಹೋಗುವರು. ಗಣಪತಿ, ನವಗ್ರಹ ಮುಂತಾಗಿ ಪೂಜಿಸುವರು. ಮೊದಲು ಅದನ್ನು ಪ್ರತಿಭಟಿಸಿ ನಿಲ್ಲಿಸಿರಿ, ನಂತರ ಲಿಂಗದೇವ ವಿಷಯಕ್ಕೆ ಬನ್ನಿರಿ.'' ಆಗ ಒಬ್ಬ ಮಹಿಳೆ ಹೇಳಿದಳಂತೆ, ``.ಅವೆಲ್ಲ ಹಿಂದಿನಿಂದ ನಡೆದು ಬಂದಿವೆ. ಇವರು ಈಗ ಬದಲು ಮಾಡಿದ್ದಾರೆ.'' ``ಅದಕ್ಕಾಗಿಯೇ ಮೊದಲು ಅವನ್ನು ನಿಲ್ಲಿಸಿರಿ. ನಂತರ ಮಾತಾಜಿಗೆ ವಾಪಸ್ಸು ತಕ್ಕೊಳ್ಳಲು ಹೇಳೋಣ. ಏಕಲಿಂಗ ನಿಷ್ಠೆ, ಏಕಗುರು ನಿಷ್ಠೆ ಕಲಿಸಲಿಕ್ಕೆಂದೇ ಮಾತಾಜಿ ಈ ಬದಲಾವಣೆ ಮಾಡಿರುವುದು.'' ಆಗ ಎಲ್ಲರೂ ಮೌನವಾಗಿ ಕುಳಿತರಂತೆ.

ಕಾರ್ಯಕ್ರಮಕ್ಕೆಂದು ಬರುತ್ತಿದ್ದ ಶರಣರು ಮೆಟ್ಟಿಲ ಮೇಲೆ ಕುಳಿತ ಪ್ರತಿಭಟನಕಾರರತ್ತ ನಿರ್ಲಕ್ಷ್ಯ ತೋರಿ ಗುಂಪು ಗುಂಪಾಗಿ ಒಳಗೆ ಹೋಗಲು ತೊಡಗಿದರು. ನಮಗೆ ಮೊದಲೇ ಸುಳಿವು ಸಿಕ್ಕಿದ್ದರಿಂದ ಪೋಲೀಸ್ ಇಲಾಖೆಯ ವರಿಷ್ಠರಾದ ಮಹಾನಿರ್ದೇಶಕರಿಗೇ ತಿಳಿಸಲಾಗಿದ್ದು ಅವರು ಬಹಳಷ್ಟು ಭದ್ರತೆ ಮಾಡಿದ್ದರು. ಎರಡು ನಾಯಿಗಳನ್ನು ಕಳಿಸಿ ಎಲ್ಲ ಸೀಟುಗಳ ಕೆಳಗೆ, ಮೂಲೆಗಳನ್ನು

ಹುಡುಕಿಸಿದರು. ಎಲ್ಲರೂ ಮೆಟಲ್ ಡಿಟೆಕ್ಟರ್ ಮೂಲಕವೇ ಹಾಯ್ದು ಒಳಗೆ ಹೋಗುವಂತೆ ಮಾಡಿದ್ದರು. ಮಫ್ತಿಯಲ್ಲಿದ್ದ ಪೋಲೀಸರು ಸಂದೇಹ ಬಂದ ಹತ್ತು ಹನ್ನೆರಡು ಜನರನ್ನು ಸಭಾಗೃಹದಿಂದ ಹೊರಗೆ ಕಳಿಸಿದ್ದರು.

ಒಂದು ಗಂಟೆ ಕಾಲ ನೀರಸ ಪ್ರತಿಭಟನೆ ನಡೆಯಿತು. ನಂತರ ಪೋಲೀಸ್ ಅಧಿಕಾರಿಗಳು ಅವರಿಗೆ ತಾಕೀತು ಮಾಡಿದರು. ``ಕಾರ್ಯಕ್ರಮ ಮಾಡಲು ಮೊದಲೇ ಹಣ ಕಟ್ಟಿ ಅವರು ಅನುಮತಿ ಪಡೆದಿದ್ದಾರೆ. ನೀವು ಇಲಾಖೆಗೂ ಮೊದಲೇ ಸೂಚನೆ ನೀಡದೆ ಪರವಾನಗಿ ಇಲ್ಲದೆ ಕುಳಿತಿದ್ದೀರಿ. ನಿಮ್ಮನ್ನು ಎಬ್ಬಿಸಬೇಕಾಗುತ್ತದೆ. ಇಲ್ಲವೇ ಅರೆಸ್ಟ್ ಮಾಡಬೇಕಾಗುತ್ತದೆ.'' ಎಂದು ಪೋಲೀಸ್ ಅಧಿಕಾರಿಗಳು ಹೇಳುತ್ತಲೇ ಪ್ರತಿಭಟನಕಾರರು ಒಬ್ಬೊಬ್ಬರೇ ಎದ್ದು ಹೊರಟರು.

ತಾವು ಮೊದಲು ಹೋಗುವುದಾಗಿಯೂ, ನಂತರ ಅವರು ಫೋನ್ ಮಾಡಿದಾಗ ನಾನು ಹೊರಡಬೇಕೆಂದು ಆಗ್ರಹಿಸಿ ನಮ್ಮ ಅನುಯಾಯಿಗಳು ನನಗೆ ಬರಲು ಗಾಡಿ ಸಹ ಇಲ್ಲದಂತೆ ಮಾಡಿದ್ದರು. ನಂತರ ನನಗೆ ಗಾಡಿ ಕಳಿಸಿ ಫೋನ್ ಮಾಡಿದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಹತ್ತೂವರೆಗೆ ಸರಿಯಾಗಿ ಹೋಗಿ ಪೂಜೆ -ಪ್ರಾರ್ಥನೆಗಳನ್ನು ಸಮಯಕ್ಕೆ ಸರಿಯಾಗಿ ಆರಂಭಿಸಿ, ಕಾರ್ಯಕ್ರಮ ನಡೆಸುತ್ತಿದ್ದರು. ನನಗೆ ಭಕ್ತಿ ಪೂರಿತ ವೈಭವದ ಸ್ವಾಗತ ನೀಡಿದರು. ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿಯೊಡನೆ ಸ್ವಾಗತಿಸಿದರು. ಪತ್ರಿಕೆ ಮತ್ತು ಟಿ.ವಿ.ಮಾಧ್ಯಮದವರು ಕುತೂಹಲದಿಂದ ಕಾಯುತ್ತಿದ್ದರು. ಪತ್ರಿಕೆಗಳಲ್ಲಿ ಬರುತ್ತಿದ್ದ ಬಗೆ ಬಗೆಯ ಹೇಳಿಕೆಗಳಿಂದ ವಿಚಲಿತರಾದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುವರೋ ಇಲ್ಲವೋ ಎಂಬ ಕಳವಳ ಕಾಡುತ್ತಿತ್ತು. ಕಾರ್ಯಕ್ರಮ ಇದ್ದುದು ಚನ್ನ(ಬುಧ)ವಾರ ಬೇರೆ, ಅದು ಕೆಲಸದ ದಿವಸ. ನಮ್ಮ ಶರಣರ ನಿಷ್ಠೆ ಬಹು ಅಚಲ. ಪುರಭವನ ಪೂರ್ತಿ ತುಂಬಿತ್ತು. ಎಲ್ಲ ಆಸನಗಳೂ ಭರ್ತಿಯಾಗಿ ಮೇಲಿನ ಅಂತಸ್ತಿನಲ್ಲೂ ಜನ ಕುಳಿತಿದ್ದರು. ಯಾವ ಬೆದರಿಕೆಗೂ ಮಣಿಯುವವರು ನಾವಲ್ಲ ಎಂಬ ಅಚಲ ನಿಷ್ಠೆ ಪ್ರದರ್ಶಿಸಿದ್ದರು. ನೋಡಿ, ಸಂತೋಷವಾಗಿ ನನಗೆ ಹೃದಯವು ತುಂಬಿ ಬಂದಿತು. ಗುರು ಬಸವಣ್ಣನವರಿಗೆ ಪುಷ್ಪಾರ್ಪಣೆ, ಆರತಿ ಮಾಡಿ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ. ಮಾಧ್ಯಮದವರು ಅವಸರ ಮಾಡುತ್ತಿದ್ದುದರಿಂದ ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಹೇಳಿದೆ.

1. ಬಸವ ಲಿಂಗೈಕ್ಯ ದಿನ.

ಇಂದು 813ನೆಯ ಬಸವ ಲಿಂಗೈಕ್ಯ ದಿನದ ಸಂಸ್ಮರಣೆಯನ್ನು ಮಾಡಲಾಗುತ್ತಿದೆ. ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಧರ್ಮಪಿತ ಬಸವಣ್ಣನವರು ಉರಿಯುಂಡ ಕರ್ಪೂರದಂತೆ ದೇವರಲ್ಲಿ ಒಂದಾದರು. ಅವರ ಲಿಂಗೈಕ್ಯದ ಬಗ್ಗೆ ಅನೇಕರು ತಪ್ಪು ತಿಳಿದಿದ್ದಾರೆ, ಬರೆದಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಂಡರೆಂದು ಕೆಲವರು, ವಧೆಯಾದರೆಂದು ಮತ್ತೆ ಕೆಲವರು ಪ್ರತಿಪಾದಿಸುತ್ತಾರೆ. ಜೀವನ್ಮುಕ್ತರು ಗೂಡಿನ ಪಕ್ಷಿಯಂತೆ, ಯಾವಾಗ ಬೇಕಾದರೂ ಆತ್ಮವನ್ನು ದೇಹದಿಂದ ಬಿಡಿಸಿ ದೇವನಲ್ಲಿ ವಿಲೀನ ಮಾಡಬಲ್ಲರು. ಬಸವಣ್ಣನವರು ಕೇವಲ ಸಮಾಜ ಸುಧಾರಕರಷ್ಟೆ ಅಲ್ಲ, ಅಪ್ರತಿಮ ಯೋಗಿಗಳು. ಇಚ್ಛಾಮರಣಿಯಾಗಿ ಲಿಂಗದೇವನಲ್ಲಿ ಬೆರೆದಿದ್ದಾರೆ.

2. ಕೆಲವರು ಹೊರಗಡೆ ಪ್ರತಿಭಟನೆ ಮಾಡಿ ಹೋಗಿದ್ದಾರೆ

ಇವರಾರಿಗೂ ಬಸವಣ್ಣನವರಲ್ಲಿ ಭಕ್ತಿಯಾಗಲಿ, ನಿಷ್ಠೆಯಾಗಲಿ ಇಲ್ಲ. ಇಂದು ಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆ ಮಾಡುವ ಅತ್ಯಂತ ಪವಿತ್ರ ದಿನ; ಶ್ರದ್ಧಾಂಜಲಿ ಸಲ್ಲಿಸುವ ಬದಲು ಈ ಕಾರ್ಯಕ್ರಮವನ್ನು ಕೆಡಿಸುವ ದುರುದ್ದೇಶ ಹೊಂದಿರುವುದು ಇವರ ಬಸವ ಭಕ್ತಿ ಹೇಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗೊ.ರು.ಚನ್ನಬಸಪ್ಪನವರು ನಡೆಸುವ ಶರಣ ಸಾಹಿತ್ಯ ಪರಿಷತ್ ಸಮ್ಮೇಳನಗಳ ವೇದಿಕೆಯ ಮೇಲೆ ಒಂದು ಬಸವ ಭಾವಚಿತ್ರ ಇಡಲು ಬಿಡುವುದಿಲ್ಲ, ಬಸವ ಮಂತ್ರವನ್ನು ಹಾಕಗೊಡುವುದಿಲ್ಲ. ಚಿದಾನಂದ ಮೂರ್ತಿಯವರ ಕೊರಳಲ್ಲಿ ಇಷ್ಟಲಿಂಗವೇ ಇರುವುದಿಲ್ಲ. ಇಂಥವರಿಗೆ ಲಿಂಗದೇವನ ಬಗ್ಗೆ, ಲಿಂಗಾಯತ ಧರ್ಮದ ಬಗ್ಗೆ ಮಾತನಾಡಲು ಯಾವ ನೈತಿಕ ಹಕ್ಕು ಇದೆ?

3. ಲಿಂಗದೇವ ವಚನಾಂಕಿತ ಬಗ್ಗೆ ಇವರು ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಪದದ ಮಹತ್ವವನ್ನೇ ಇವರು ಅರಿತಿಲ್ಲ. ಇಂಗ್ಲೀಷ್‌ನಲ್ಲಿ God ಎಂಬ ಪದವಿದೆ. G ಅಂದರೆ ಯಾವುದು ಈ ಜಗತ್ತನ್ನು ಉತ್ಪತ್ತಿ (Generates) ಮಾಡುತ್ತದೆಯೋ, O ಅಂದರೆ ಯಾವುದು ಈ ಜಗತ್ತನ್ನು ನಿಯಂತ್ರಿಸುತ್ತದೆಯೋ (Operates) D ಅಂದರೆ ಯಾವುದು ಇದನ್ನು ಲಯ ಮಾಡುತ್ತದೆಯೋ (Dissolves) ಲಯ ಎಂದರೆ ನಾಶವಲ್ಲ ರೂಪಾಂತರ ಮಾತ್ರ, ಆ ಶಕ್ತಿಯೇ

ದೇವರು. ಈ ಆಂಗ್ಲರ ಪದಕ್ಕೆ ತತ್ಸಮಾನವಾದ ಒಂದು ಭಾರತೀಯ ಪದವೆಂದರೆ ಲಿಂಗ; ಲೀಯತೆ ಗಮ್ಯತೆ ಯತ್ರಯೇನ ಸರ್ವಂ ಸಚರಾಚರಂ, ತದತಲ್ಲಿಂಗ ಮಿತ್ಯುಲಿಂಗ ತತ್ವ ಪರಾಯಣೈ:.

``ಯಾವುದರಿಂದ ಸಮಸ್ತ ಸಚರಾಚರ ಸೃಷ್ಟಿ ಎಲ್ಲವೂ ಹೊಮ್ಮಿ, ಎಲ್ಲಿ ಲೀಲೆಯಾಡಿ, ಯಾವುದರ ಗರ್ಭವನ್ನು ಹೊಗುತ್ತದೆಯೊ ಆ ಮೂಲ ಚೈತನ್ಯವೇ ಲಿಂಗ.

ಧರ್ಮಗುರು ಬಸವಣ್ಣನವರು ನಿರಾಕಾರ ದೇವನನ್ನು ಲಿಂಗದೇವನೆಂದು ಕರೆದು ಸೃಷ್ಟಿಕರ್ತ ಲಿಂಗದೇವನಿಗೆ ಗೋಳಾಕಾರದ ರೂಪವನ್ನು ಇಷ್ಟಲಿಂಗವೆಂದು ಕರೆದು ರೂಪಿಸಿದರು; ಲಿಂಗಾಯತ ಎಂಬ ಹೊಸ ಧರ್ಮದ ಪ್ರಷ್ಟಾರರಾದರು. ಲಿಂಗಾಯತ ಧರ್ಮದ ದೇವರು ಲಿಂಗದೇವರು. ನಾವು ಕಟ್ಟಿಕೊಳ್ಳುವುದು, ಪೂಜಿಸುವುದು ಲಿಂಗದೇವರನ್ನೆ!

ಇನ್ನು ಅಕ್ಕಮಹಾದೇವಿಯ ಜೀವನದಲ್ಲಿ 2 ಘಟ್ಟಗಳು ಬರುತ್ತವೆ. 1. ಸಗುಣೋಪಾಸನೆ, 2. ನಿರ್ಗುಣೋಪಾಸನೆ. ಬಾಲ್ಯದಿಂದಲೂ ಹೊಳೆವ ಕೆಂಜೆಡೆಗಳ, ಸುಲಿಪಲ್ಲ ಗೊರವನಾದ ಶಿವನ ಆರಾಧನೆ ಮಾಡುತ್ತಿದ್ದ ಅಕ್ಕ ನಂತರ ನಿರ್ಗುಣೋಪಾಸನೆಗೆ ಏರಿದರು.

ಅಕ್ಕ ಕೇಳವ್ವಾ ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ತೆಂಗಿನಕಾಯಿ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಬಂದುದ ಕಂಡೆನವ್ವಾ !

ಇಂಥ ವಚನಗಳಲ್ಲಿ ಚನ್ನಮಲ್ಲಿಕಾರ್ಜುನ ಎಂಬ ಮೂಲ ಮುದ್ರಿಕೆಯನ್ನು ಹಾಗೆಯೇ ಉಳಿಸಿದ್ದೇನೆ. ನಿರ್ಗುಣೋಪಾಸನೆಗೆ ಬಂದಾಗ,

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ

ಎನ್ನುತ್ತಾರೆ ಅಕ್ಕನವರು. ಮೊದಲ ಹಂತದಲ್ಲಿ ರೂಪ ಉಳ್ಳ ಕೈಲಾಸಪತಿ ಶಿವನನ್ನು ಆರಾಧಿಸಿದರೆ, ಎರಡನೆಯ ಹಂತದಲ್ಲಿ ರೂಪವಿಲ್ಲದ ನಿರಾಕಾರ ಚೆಲುವ ಲಿಂಗದೇವನನ್ನು ಆರಾಧಿಸುತ್ತಾಳೆ. ಎರಡನೆಯ ಘಟ್ಟದ ವಚನಗಳಲ್ಲಿ ಚನ್ನಮಲ್ಲಿಕಾರ್ಜುನ ಎಂಬ ವಚನಾಂಕಿತ ಹಾಗೆಯೇ ಇಟ್ಟುಕೊಂಡು -ಅದು ನಿರ್ದೇಶಿಸುವ ವಸ್ತು ನಿರಾಕಾರ ದೇವರು ಎಂಬುದನ್ನು ಸ್ಪಷ್ಟಪಡಿಸಲೋಸುಗ ಚನ್ನಮಲ್ಲಿಕಾರ್ಜುನಾ - ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂಬ ವಿವರಣೆ ನೀಡಿದ್ದೇನೆ. ನಾನು ವಚನಗಳನ್ನೂ ತಿರುಚಿಲ್ಲ, ವಚನಾಂಕಿತವನ್ನೂ ಬದಲಾಯಿಸಿಲ್ಲ. ಅದಕ್ಕೆ ವಿವರಣೆ ನೀಡಿದ್ದೇನೆ. ಅಪಪ್ರಚಾರ ಮಾಡಬೇಕೆಂಬ ಲೀಲಾದೇವಿ ಪ್ರಸಾದರಂಥವರು, ಚನ್ನಮಲ್ಲಿಕಾರ್ಜುನಾ ತೆಗೆದಿದ್ದೇನೆಂದು, ಮಹಾದೇವಿ ಪ್ರಿಯ ಲಿಂಗದೇವ ಮಾತ್ರ ಇಟ್ಟಿದ್ದೇನೆಂದು ಹೇಳುತ್ತಿದ್ದಾರೆ ಅಷ್ಟೆ.

ಧರ್ಮಪಿತ ಬಸವಣ್ಣನವರಿಗಾಗಲೀ, ವಚನ ಸಾಹಿತ್ಯಕ್ಕಾಗಲಿ ಅಪಚಾರ ಮಾಡಬೇಕೆಂಬುವವರು ನಾವಲ್ಲ. ಧರ್ಮಪಿತ ಬಸವಣ್ಣನವರು ನಮ್ಮ ಪ್ರಾಣ, ವಚನ ಸಾಹಿತ್ಯ ನಮ್ಮ ಆತ್ಮ. ಇವರ ತತ್ವ ಪ್ರಚಾರವೇ ನಮ್ಮ ಧ್ಯೇಯ. ಲಿಂಗಾಯತ ಧರ್ಮ ರಾಷ್ಟ್ರ ಧರ್ಮ, ವಿಶ್ವ ಧರ್ಮ ಎಂಬುದನ್ನು ತೋರಿಸಲಿಕ್ಕೇ ನಾವು ಬದುಕಿರುವುದು.

813ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ನವ ದೆಹಲಿಯ ಮಹಾವೀರ್ ಎನ್‌ಕ್ಲೇವ್ ವಾಸಿ, ಬಿ.ಎಸ್.ಪಿ. ಮುಖಂಡ ಮದನ ಮೋಹನ್ ದಾಸ್ ಉದ್ಘಾಟಿಸಿದರು. ಮುಂಬಯಿಯ ಬಿಲ್ಡರ್ಸ್ ಆದ ಆರ್.ಬಿ.ಹೆಬ್ಬಳ್ಳಿ ಧ್ವಜಾರೋಹಣ ಮಾಡಿದರು. ಲಿಂಗಾಯತ ಧರ್ಮ ಮಹಾ ಸಭಾಧ್ಯಕ್ಷ ಎನ್.ಪುಟ್ಟರುದ್ರ ಸ್ವಾಗತಿಸಿದರು. ಉದ್ಘಾಟಕ - ಮದನ ಮೋಹನ್‌ದಾಸ್, ಧ್ವಜಾರೋಹಣ ಮಾಡಿದ ಆರ್.ಬಿ.ಹೆಬ್ಬಳ್ಳಿ ಕರ್ನಾಟಕ ಲೋಕಸೇವಾ ಆಯೋಗದ ಚೇರ್ಮನ್ನರಾದ ಭೀಮಪ್ಪ ಗೋನಾಳ, ಯು.ಎಸ್.ಎಯ ಪಿಟ್ಸ್‌ಬರ್ಗಿನ ಕೆ.ಆರ್.ಚನ್ನರಸಪ್ಪ, ಬಸವ ಪಂಚಮಿ ಪ್ರಸಾದ ದಾಸೋಹ ಮಾಡಿದ ಶರಣೆ. ಸರ್ವಮಂಗಳಾ ಮತ್ತು ಶರಣ. ಗುಂಡಪ್ಪ, ನೀಲಮ್ಮ ಷಷ್ಠಿಯ ಪ್ರಸಾದ ದಾಸೋಹಿಗಳಾದ ಶರಣೆ. ಗಾಯಿತ್ರಿ ದೇವಿ ಮತ್ತು ಶರಣ.ಬಿ.ಗುರುಪ್ರಸಾದ್, ಚೀಫ್ ಇಂಜಿನಿಯರ್, ನೊಳಂಬ ವೀರಶೈವ ಸಂಘದ ಅಧ್ಯಕ್ಷ ಶರಣ.ವೀರಭದ್ರಪ್ಪ, ಉದ್ದಿಮೆದಾರರಾದ ಶರಣ. ಮೈಸೂರಪ್ಪ ಅವರನ್ನು ಸತ್ಕರಿಸಲಾಯಿತು.

ಅಪ್ರತಿಮ ಸೇವೆಗಾಗಿ ಶರಣ. ಶ್ರೀಕಂಠಮೂರ್ತಿ, ಜಗನ್ನಾಥ ಭೂತಪುರ ಇವರನ್ನು ಸನ್ಮಾನಿಸಲಾಯಿತು. ಶರಣೆ. ಚಂದ್ರಮ್ಮನವರು ಸಭಾ ನಿರ್ವಹಣೆ ಮಾಡಿದರು. ಕುಮಾರಿ ಮಾನಸ ಮತ್ತು ಸಂಗಡಿಗ ಪುಟಾಣಿಗಳಿಂದ ಕಲ್ಯಾಣ ಕರೆದಿದೆ ಕಲ್ಯಾಣ ಎಂಬ ನೃತ್ಯ, ಕುಮಾರಿ ನಿಸರ್ಗಳಿಂದ

ಶರಣು ಶರಣು ಗುರುವೆ ಎಂಬ ನೃತ್ಯ, ಕುಮಾರಿ ಸ್ವಾತಿಯಿಂದ ಹೇಗೆ ಬಣ್ಣಿಸಲಿ ಬಸವಾ ಎಂಬ ನೃತ್ಯ, ಬಸವ ಗಂಗೋತ್ರಿ ಅನಾಥಾಲಯದ ಮಕ್ಕಳಿಂದ ಕೋಲಾಟ, ಧಾರವಾಡದ ಅಕ್ಕಮಹಾದೇವಿ ಅನಾಥಾಲಯದ ಮಕ್ಕಳಿಂದ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ನೃತ್ಯ ರೂಪಕ ಜರುಗಿದವು.

ನಂತರ ಬಸವ ಭಾವ ಚಿತ್ರ ಮೆರವಣಿಗೆ, ಶರಣ ಶರಣೆಯರಿಂದ ಪಾದಯಾತ್ರೆ ಜರುಗಿತು. ಬಸವೇಶ್ವರ ಸರ್ಕಲದಲ್ಲಿ ಗುರು ಬಸವಣ್ಣನವರಿಗೆ ಮಾಲಾರ್ಪಣೆ ಮಾಡಿ, ನೆನಹು ಮಾಡಿ, ಮಂಗಲ ಘೋಷ ಮಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಉದಯ ಚಾನಲ್‌ದಲ್ಲಿ ಆದ ಸಂವಾದ

ಪೂಜ್ಯ ಮಾತಾಜಿಯವರಲ್ಲಿ

ಶರಣು ಶರಣಾರ್ಥಿಗಳು.

ದಿ.31-07-2008ರ ರಾತ್ರಿ 9-30 ಗಂಟೆಗೆ ಉದಯ ವಾರ್ತೆ ಚಾನೆಲ್‌ನಲ್ಲಿ ಪ್ರಸಾರವಾದ ಲಿಂಗದೇವ ಕುರಿತು ನಡೆದ ಚರ್ಚಾಗೋಷ್ಠಿಯನ್ನು ನಾವೆಲ್ಲರೂ ವೀಕ್ಷಿಸಿದೆವು. ಲಿಂಗದೇವ ವಚನಾಂಕಿತದ ಬಗ್ಗೆ ತಾವುಗಳು ಸಮರ್ಥವಾಗಿ ವಿವರಣೆ ನೀಡುವುದರೊಂದಿಗೆ ಅನೇಕರಲ್ಲಿದ್ದ ಗೊಂದಲವನ್ನು ನಿವಾರಣೆ ಮಾಡಿದ್ದೀರಿ. ನಾವು ಅನೇಕ ಸಲ ಮತ್ತು ಹಲವಾರು ಸಂದರ್ಭಗಳಲ್ಲಿ ಅದರ ಬಗ್ಗೆ ತಿಳಿ ಹೇಳಿದರೂ ಕೂಡ ಆ ತುಕ್ಕು ಹಿಡಿದ ತಲೆಗಳಿಗೆ ಯಾವ ವಿಷಯಗಳೂ ತಿಳಿಯದೆ ನಮಗೆ ನಾವೇ ವ್ಯಥೆಪಟ್ಟಿದ್ದೇವೆ. ಅದರ ಬಗ್ಗೆ ತಮ್ಮಿಂದಲೇ ಅಂಥವರಿಗೆ ಉತ್ತರ ಸಿಕ್ಕಿದ್ದರಿಂದ ವಚನಾಂಕಿತ ಲಿಂಗಾನಂದದೇವ ಆಗದೆ ಲಿಂಗದೇವ ಎಂದು ನೀಡಿದ ಸ್ಪಷ್ಟೀಕರಣ ಹಾಗೂ ವಿವರಣೆ ಸಕಾಲಿಕ ಮತ್ತು ಸಮಂಜಸವಾಗಿದೆ.

ಮಹಾನುಭಾವಿ ಹರ್ಡೇಕರ್ ಮಂಜಪ್ಪನವರು ತಮ್ಮ ಬಸವ ಬೋಧಾಮೃತದಲ್ಲಿ ಕೂಡಲ ಸಂಗಮನೆಂಬುದು ಲಿಂಗವೆಂದು ಭಾವಿಸಿದಂತೆ ಇದೆ. ಅವರು ಅಲ್ಲಿ ಶಿವ, ಪರಮಾತ್ಮ ಇತ್ಯಾದಿ ಶೈವ ಸಂಪ್ರದಾಯ ಪದಗಳನ್ನು ಬಳಸಿಲ್ಲ, ಕೂಡಲ ಸಂಗಮದ ಬದಲಿಗೆ ಲಿಂಗದೇವ ಎಂದು ಬಳಸಿಲ್ಲವಾದರೂ ಮೂಲ ವಚನದಲ್ಲಿ ಕೂಡಲ ಸಂಗಮದೇವ ಎಂದಿದ್ದಲ್ಲಿ ವ್ಯಾಖ್ಯಾನ ಮಾಡುವಾಗ ಲಿಂಗದೇವ ಎಂದು ಬಳಸಿ ನಮ್ಮ ಗಮನ ಸೆಳೆಯುತ್ತಾರೆ.

ಇತೀ ತಮ್ಮ
ಜಗನ್ನಾಥಪ್ಪ ಪನಸಾಳೆ,
ವಾಸ್ತವ್ಯ - ಉಡುಪಿ

ವಚನ ಪುಷ್ಪ

ಹೂಗಳ ಅಧಿಪತಿ ಗುಲಾಬಿ,
ಪ್ರಾಣಿಗಳ ಅಧಿಪತಿ ಸಿಂಹ,
ಪಕ್ಷಿಗಳ ಅಧಿಪತಿ ಗರುಡ,
ನಮ್ಮ ನಿರಾಕಾರ ಪ್ರಭು ಲಿಂಗದೇವನ ಶರಣರಿಗೆ
ಅಧಿಪತಿ ನಮ್ಮ ಸಂಗನ ಬಸವಣ್ಣನು ಕಾಣಾ

ವಸಂತ ಕಾಲದಲ್ಲಿ ಚಿಗುರೊಡೆಯುವಂತೆ
ಸೂರ್ಯನ ಕಿರಣಕ್ಕೆ ಮೊಗ್ಗರಳುವಂತೆ,
ನಮ್ಮ ನಿರಾಕಾರ ಪ್ರಭು ಲಿಂಗದೇವನ
ಶರಣ ಬಸವಣ್ಣನಿಂದ ಲಿಂಗಾಯತ ಧರ್ಮವರಳಿತು.

- ಸಿ. ಅರುಣ್ ಕುಮಾರ್
8ನೇ ತರಗತಿ ವಿದ್ಯಾರ್ಥಿ, ಬೆಂಗಳೂರು

ಕಲ್ಯಾಣ ಕಿರಣಕ್ಕೆ ನಮನ

ಓ ಕಲ್ಯಾಣ ಕಿರಣವೇ
ಸಾಧಕರಿಗೆ ನೀ ಜ್ಞಾನದ ಕಣಿ
ನಿನ್ನ ಕಿರಣದಿಂದ ನಮಗಾಗಿದೆ ಕಲ್ಯಾಣ
ನೀಡುತಿರುವೆ ಹೊಸ ಅನುಭವಗಳ ಕ್ಷಣ ಕ್ಷಣ

ಪ್ರತಿ ತಿಂಗಳು ಓದದಿದ್ದರೆ
ಮನಸ್ಸಿಗೆ ಭಣ ಭಣ
ಇದೋ ನಿನಗೆ ನಮ್ಮಯ
ಹೃತ್ಪೂರ್ವಕ ನಮನ

- ನಾಗರಾಜ ಪಾರ್ಶಿ

ದಶಹರ ಹಬ್ಬದಲ್ಲಿ ಶರಣರ ಚರಿತ್ರೆ ಪಠಣ

ಶರಣ ಬಂಧುಗಳೇ,

ಸತ್ತವರ ಕಥೆ, ಕೊಂದವರ ಕಥೆಗಳನ್ನು ಓದದೆ ಲೋಕವನ್ನು ಉಳಿಸಿದ ಶರಣರ ಕಥೆ ಓದುವ ಪರಿಪಾಠ ಬೆಳೆಸಿಕೊಂಡು, ನವರಾತ್ರಿಯಲ್ಲಿ 9 ಶರಣರ ಚರಿತ್ರೆ ಓದಬೇಕೆಂದು ತಮ್ಮಲ್ಲಿ ಬಿನ್ನೈಸಲಾಗಿತ್ತು. ಅನೇಕರು ನಮಗೆ ಸಂಕ್ಷಿಪ್ತವಾಗಿ ಕಥೆಗಳನ್ನು ಕೊಡಿರಿ ಎಂದು ಕೋರಿ ಕೊಂಡಿದ್ದರು. ಅದಕ್ಕಾಗಿ 2008ರ ಸೆಪ್ಟಂಬರ್ 30ರಿಂದ ಆರಂಭವಾಗುವ ದಸರಾ (ನವರಾತ್ರಿ) ಕಾರ್ಯಕ್ರಮದಲ್ಲಿ ಕೆಳಕಂಡಂತೆ ಶರಣರ ಚರಿತ್ರೆ ಪಾರಾಯಣ ಮಾಡಬೇಕು.

1. ದಿ. 30-09-2008 - ವಿಶ್ವಗುರು ಬಸವಣ್ಣನವರು (ಪ್ರತಿಪದೆ)
2. ದಿ. 01-10-2008 - ಚಿನ್ಮಯಜ್ಞಾನಿ ಚನ್ನಬಸವಣ್ಣ
3. ದಿ. 02-10-2008 - ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು
4. ದಿ. 03-10-2008 - ಲಿಂಗಾಂಗಯೋಗಿ ಸಿದ್ಧರಾಮೇಶ್ವರ
5. ದಿ. 04-10-2008 - ವೀರ ವಿರಾಗಿಣಿ ಅಕ್ಕಮಹಾದೇವಿ
6. ದಿ. 05-10-2008 - ವೀರ ಮಾತೆ ಅಕ್ಕನಾಗಲಾಂಬಿಕೆ
7. ದಿ. 06-10-2008 - ವೀರ ಗಣಾಚಾರಿ ಮಡಿವಾಳ ಮಾಚಿದೇವರು
8. ದಿ. 07-10-2008 - ಹುತಾತ್ಮರಾದ ಹರಳಯ್ಯ - ಮಧುವಯ್ಯ
9. ದಿ. 08-10-2008 - ಕಲ್ಯಾಣ ಕ್ರಾಂತಿ
10. ದಿ. 09-10-2008 - ಬಸವ ಧರ್ಮ ವಿಜಯೋತ್ಸವ

ದಿ.9-10-2008ರಂದು ವಿಶೇಷ ಕಾರ್ಯಕ್ರಮ, ಗಣ ದಾಸೋಹ ಮಾಡಬೇಕು. ಶರಣರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ - ಕಲ್ಯಾಣ ಕಿರಣಗಳಲ್ಲಿ ಕೊಡಲಾಗುವುದು. ತನ್ನಿಮಿತ್ತ ಈ ಸಲ ಅಕ್ಕಮಹಾದೇವಿ ಮತ್ತು ಅಕ್ಕನಾಗಲಾಂಬಿಕೆಯ ಚರಿತ್ರೆ ಕೊಡಲಾಗುವುದು.

5. ವೀರ ವಿರಾಗಿಣಿ ಅಕ್ಕಮಹಾದೇವಿಯವರ ಜೀವನ ಚರಿತ್ರೆ
(ಪಾರಾಯಣಕ್ಕೆ ಮೊದಲು ಪೂಜೆ)

ಅಕ್ಕನ ಅವತಾರ ಸ್ತ್ರೀಕುಲ ಸ್ಫೂರ್ತಿಯ ವಿಸ್ತಾರ ॥ಪ॥
ಮಹಿಳಾ ಕುಲಕೆ ಮಾರ್ಗವ ತೋರಲು
ಬಂದಿಹ ಸಾಕಾರ ॥ಅ.ಪ॥

ಕನ್ನಡ ಬನದಲ್ಲಿ ಕೋಗಿಲೆಯಾಗಿ
ವಚನದ ಗಾನವ ಹಾಡಿದ ತ್ಯಾಗಿ।
ಚನ್ನನಿಗೊಲಿದ ವೀರ ವಿರಾಗಿಣಿ
ಚಿನ್ಮಯ ನಿಲುವಿನ ಮಹಾ ಶಿವಯೋಗಿಣಿ ॥1॥

ಹೆಣ್ಣಿಗೆ ಮಾಯೆಯ ಪಟ್ಟವ ಕಟ್ಟಿ
ಹೆಣ್ಣನು ಶೋಷಿಸೆ ಶಾಸ್ತ್ರವ ರಚಿಸೆ
ಕಣ್ಣಿನ ಕಸದೊಲು ಕಂಡವರನ್ನು
ಘನ ನಿಲು ಹೊಂದಿ ಬೆರಗಾಗಿಸಿದೆ ॥2॥

ಗುರು ಬಸವಣ್ಣನ ಮೋಹನ ಮಗಳೆ
ಶರಣರ ಬಳಗದ ಪ್ರೇಮದ ಪುತ್ಥಳಿ
ಬಸವ ತತ್ವದ ಚಿನ್ಮಯ ಚಂದ್ರಿಕೆ
ಯಶದಿಂ ನಡೆದ ಜ್ಞಾನ ತರಂಗಿಣಿ ॥3॥

ಭಕ್ತಿ - ವಿರಕ್ತಿಯ ಅರಿವಿನ ಸಂಗಮ
ಆತ್ಮಾನುಭೂತಿಯ ಆದರ್ಶ ಚೇತನ
ಸ್ತ್ರೀಕುಲ ಸರಸಿಯ ಅನುಪಮ ಅಂಬುಜೆ
ಸಚ್ಚಿದಾನಂದನ ವರ[illegible]ಯಾದ ॥4॥

5. ವೀರ ವಿರಾಗಿಣಿ ಅಕ್ಕಮಹಾದೇವಿಯವರ ಜೀವನ ಚರಿತ್ರೆ

ಕನ್ನಡ ಸಾಹಿತ್ಯ ಬನದಲ್ಲಿ ಕವಿ ಕೋಗಿಲೆಯಾಗಿ ಹಾಡಿ, ಪಾರಮಾರ್ಥ ಸರಸಿಯಲ್ಲಿ ಅರಸಂಚೆಯಾಗಿ ತೇಲಿ, ದಾರ್ಶನಿಕ ಕಾನನದಲ್ಲಿ ಭಕ್ತಿಯ ನವಿಲಾಗಿ ನರ್ತಿಸಿದ ವೀರ ವಿರಾಗಿಣಿ, ಶ್ರೇಷ್ಠ ತತ್ವಜ್ಞಾನಿ 12ನೆಯ ಶತಮಾನದ ವಚನಕಾರ್ತಿ ಅಕ್ಕಮಹಾದೇವಿ. ಇವರ ಒಂದೊಂದು ವಚನವೂ ತತ್ವಜ್ಞಾನದ ಮಹಾನ್ ಸೂತ್ರಗಳಂತಿವೆ. ಸ್ತ್ರೀಯು ಅಬಲೆ, ಪುರುಷನ ಅಡಿಯಾಳಾಗಿಯೇ ಕೆಲಸ ಮಾಡಬೇಕು, ವಿವಾಹ ಬಂಧನದ ಹೊರತು ಸ್ತ್ರೀಗೆ ಅನ್ಯ ಬದುಕಿಲ್ಲ ಎಂಬ ಪಾರತಂತ್ರ್ಯದ ಪ್ರವಾಹದ ವಿರುದ್ಧ ಸೆಣಸಿ ದಡ ಸೇರಿದ ಧೀಮಂತ ಮಹಿಳೆ ಅಕ್ಕಮಹಾದೇವಿ.

ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೋಕಿನ ಉಡುತಡಿ ಎಂಬ ಪಟ್ಟಣದ ಪ್ರಮುಖ ವ್ಯಾಪಾರಿ ಓಂಕಾರ ಶೆಟ್ಟಿ, ಆತನ ಧರ್ಮಪತ್ನಿ ಲಿಂಗಮ್ಮ. ವಿವಾಹವಾಗಿ ಹಲವಾರು ವರ್ಷ ಕಳೆದರೂ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಇದೇ ಕೊರಗಿನಲ್ಲೇ ಖಿನ್ನಳಾದ ಲಿಂಗಮ್ಮ ಪತಿ ಓಂಕಾರ ಶೆಟ್ಟಿಯನ್ನು, ತಮಗೊಂದು ಮಗುವನ್ನು ಕರುಣಿಸುವಂತೆ ಗುರುಗಳು ಸಂಕಲ್ಪ ಮಾಡಿ ತಮಗಾಗಿ ಪೂಜೆ ಮಾಡುವಂತೆ ಬೇಡಿಕೊಳ್ಳಬೇಕೆಂದು ಒತ್ತಾಯಿಸಿದಳು. ಅದೇ ರೀತಿ ಗುರುಗಳು ಇಷ್ಟಲಿಂಗಾರ್ಚನೆ ಮಾಡಿ ದಂಪತಿಗಳಿಗೆ ಆಶೀರ್ವಾದ ಪೂರ್ವಕವಾಗಿ ಕರುಣ ಪ್ರಸಾದವನ್ನು ನೀಡಿದರು. ಲಿಂಗಮ್ಮ ತಾಯಿಯು ಪೂಜೆ - ತಪಸ್ಸು - ವ್ರತಾಚರಣೆ ಮಾಡತೊಡಗಿದಳು. ಕಾಲಾ ನಂತರದಲ್ಲಿ ಗರ್ಭವತಿಯಾಗಿ ಚೈತ್ರ ಪೌರ್ಣಮೆಯಂದು ಸುಂದರವಾದ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಮಗುವಿಗೆ ಇಷ್ಟಲಿಂಗ ಧಾರಣೆ ಮಾಡಿ ಲಿಂಗಾಯತ ಧರ್ಮದ ಅನುಯಾಯಿಯನ್ನಾಗಿ ಮಾಡಿ ಶ್ರೀಗುರುಲಿಂಗದೇವರು ಶಿಶುವಿಗೆ ಮಹಾದೇವಿ ಎಂದು ಹೆಸರನ್ನಿಟ್ಟರು. ಸ್ವತಃ ಅಕ್ಕಮಹಾದೇವಿ ತಮ್ಮೊಂದು ವಚನದಲ್ಲಿ ಹೀಗೆ ಹೇಳುತ್ತಾರೆ:

ಗುರುವಿನ ಕರುಣದಿಂದ ಲಿಂಗವ ಕಂಡೆ
ಜಂಗಮವ ಕಂಡೆ, ಪಾದೋದಕ ಪ್ರಸಾದವ ಕಂಡೆ
ಸಜ್ಜನ ಸದ್ಭಕ್ತರ ಸದ್ಗೋಷ್ಠಿಯ ಕಂಡೆ
ಚನ್ನಮಲ್ಲಿಕಾರ್ಜುನ ದೇವಯ್ಯ(ಮಹಾದೇವಿಯಕ್ಕ ಪ್ರಿಯ ಲಿಂಗದೇವ)
ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ ಸದ್ಗುರು ಸ್ವಾಮಿ
ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು ॥

ಮಹಾದೇವಿ ಬಿದಿಗೆಯ ಚಂದಿರನಂತೆ ವೃದ್ಧಿಯಾದಳು. ಶ್ರೀಗುರುಲಿಂಗದೇವರು ದೀಕ್ಷಾ ಗುರುವಾದಂತೆ ಶಿಕ್ಷಾ ಗುರುವೂ ಆಗಿ ವಿದ್ಯೆಯನ್ನು ಕಲಿಸಿದರು ಮತ್ತು ಜ್ಞಾನವನ್ನೂ ನೀಡಿದರು. ಅಕ್ಕಮಹಾದೇವಿಯ ಚೆಲುವಿನೊಡನೆ ವ್ಯಕ್ತಿತ್ವವೂ ವಿಕಾಸವಾಯಿತು. ಲಿಂಗಾಯತ ಧರ್ಮದ ಆಚರಣೆಯಂತೆ ಬಾಲಕಿ ಪುಷ್ಪವತಿಯಾದಾಗ ಇಷ್ಟಲಿಂಗ ದೀಕ್ಷಾನುಗ್ರಹವನ್ನು ಕೊಡಿಸಲಾಯಿತು. ಮಗುವಿಗೆ ಲಿಂಗಧಾರಣೆ ನಿಶ್ಚಯ ಕಾರ್ಯದಂತೆ ಆದರೆ ಬಾಲ್ಯ ಕಳೆದು ಯೌವನಾವಸ್ಥೆ ಕಾಲಿಡುವಾಗ ಮಾಡಿಸುವ ಲಿಂಗದೀಕ್ಷೆಯು ಲಗ್ನ ಕಾರ್ಯದಂತೆ. ಲಿಂಗವೇ ಪತಿ ಶರಣನು ಸತಿ; ಈ ಭಾವದಿಂದ ಇಷ್ಟಲಿಂಗ ಪೂಜೆ - ಅನುಸಂಧಾನ ಮಾಡಬೇಕು ಎಂಬ ಗುರುಗಳ ಆದೇಶವು ಮಹಾದೇವಿಯ ಮನದ ಮೇಲೆ ಅಪಾರ ಪರಿಣಾಮ ಬೀರಿತು. ಆಕೆ ನಿಜವಾಗಿಯೂ ಲಿಂಗದೇವನನ್ನು ಪತಿ ಎಂದು ಭಾವಿಸಿ ಆರಾಧಿಸುತ್ತ ಲೌಕಿಕ ಮದುವೆಯನ್ನು ಒಪ್ಪಿಕೊಳ್ಳಲಿಲ್ಲ. ತಾಯಿ ತಂದೆಯರಿಗೆ ಹೇಳಿದಳು:

ಇನ್ನೇತಕೆನ್ನ ಮದುವೆಯ ಚಿಂತೆ ನಮಗೆ
ಚನ್ನಶ್ರೀ ಗುರುರಾಯ ಲಿಂಗವ ಕೊಟ್ಟ ಬಳಿಕ! ॥ ಪ ॥

ಪಂಚಕಳಶವು ಪಂಚನದಿ ಪಂಚತಳಿರಿಂದ
ಪಂಚಾಭಿಷೇಕವನು ಮಸ್ತಕದಲ್ಲಿ ಹಸ್ತವನೋರಂತೆ
ಪಂಚಮುಖದೊಡೆಯನ ಕಳೆಯೇರಿ ಗುರು ಪ್ರಣಮ
ಪಂಚಾಕ್ಷರಿಯ ಶಿಕ್ಷೆಯನೆನಗಿಟ್ಟ ಬಳಿಕ! ॥ 1 ॥

ಶರಣಸತಿ - ಲಿಂಗಪತಿಯೆಂಬ ಭಸಿತವನಿಟ್ಟು
ಕರೆದು ನಾಲ್ವರ ಮುಂದೆ ಸಾಕ್ಷಿಯನು ಕೊಟ್ಟು
ಶರಣುಗಂಟಕ್ಕಿ ಕರವಿಡಿದು ಕಂಕಣ ಕಟ್ಟಿ ಸ್ತ್ರೀ-
ಪುರುಷರೆಂದು ಸೇಸೆಯನಿಟ್ಟ ಬಳಿಕ ॥ 2 ॥

ಸತ್ತು ಹುಟ್ಟುವರಿಂಗೆ ಸೆರಗು ಹಾಕುವಳಲ್ಲ
ಮುತ್ತೈದೆತನವ ಮೆಚ್ಚುವಳಲ್ಲವ್ವೆ
ಕರ್ತೃ ಶ್ರೀಶೈಲದ ಚೆನ್ನಮಲ್ಲಿಕಾರ್ಜುನ
ನಿಂತು ಕರಸ್ಥಳದಲ್ಲಿ ನೆಲೆಗೊಂಡ ಬಳಿಕ ॥ 3 ॥

ಓಂಕಾರ ಶೆಟ್ಟಿ - ಲಿಂಗಮ್ಮರಿಗೆ ಗಾಬರಿಯಾಯಿತು. ಅಪ್ರತಿಮ ಸುಂದರಿಯಾದ ಮಗಳು ವಿವಾಹವಿಲ್ಲದೆ ಮನೆಯಲ್ಲಿ ಉಳಿಯುವುದು ಸರಿಯೆ? ತಾಯಿ ಲಿಂಗಮ್ಮ "ನೀನು ಯಾರನ್ನಾದರೂ ಮನಸ್ಸಿನಲ್ಲಿ ಇಷ್ಟಪಟ್ಟಿದ್ದರೆ ತಿಳಿಸು, ಅವರಿಗೇ ಮದುವೆ ಮಾಡಿಕೊಡಲಾಗುವುದು" ಎಂದು ತಿಳಿಸಿದಳು. ಅದನ್ನು ಕೇಳಿ ನಸುನಕ್ಕ ಮಹಾದೇವಿ "ನನ್ನ ಪತಿಯನ್ನು ಕರೆತರುವ ಸಾಮರ್ಥ್ಯವಿದ್ದರೆ ಒಪ್ಪಿಗೆ ಕೊಡುತ್ತೇನೆ. ಅವನ ಲಕ್ಷಣಗಳು ಹೀಗಿವೆ." ಎಂದು ಬಣ್ಣಿಸಿದಳು.

ಸಾವಿಲ್ಲದ ಕೇಡಿಲ್ಲದ ರೂಪಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆಯಿಲ್ಲದ ಕಡೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗಾನೊಲಿದೆ
ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಇದು ಕಾರಣ, ಚೆನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ
ಲಿಂಗದೇವ)ನೆನಗೆ ಚೆಲುವ ಗಂಡ
ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ !

ತಾಯಿ ಲಿಂಗಮ್ಮ ಆಶ್ಚರ್ಯ ಚಕಿತಳಾದಳು. ಆಕೆಯ ಆಸೆ ಕಮರಿತು. ದೃಢಗೊಂಡ ಮಹಾದೇವಿಯ ಮನಸ್ಥಿತಿಯನ್ನರಿತು ಲೋಕಾಪವಾದವೇನೇ ಬರಲಿ ತಮ್ಮ ಮಗಳು ಗಂಡು ಮಗನೆಂದೇ ಭಾವಿಸೋಣ. ಮನೆಯಲ್ಲಿ ಸುಖವಾಗಿರಲಿ ಎಂದು ಲಿಂಗಮ್ಮ - ಓಂಕಾರ ಶೆಟ್ಟಿ ನಿರ್ಧರಿಸಿದರು. ಮಹಾದೇವಿಯ ಬದುಕು ಅಲ್ಲಿಂದ ಮುಂದೆ ಶಾಂತ ಸರೋವರದಂತಾಯಿತು. ಪೂಜೆ-ಧ್ಯಾನ- ಅಧ್ಯಯನದಲ್ಲಿ ಕಾಲ ಕಳೆಯತೊಡಗಿದಳು.

ಒಂದು ದಿವಸ, ರಾಜ ಕೌಶಿಕನು ವೈಹಾಳಿಯಿಂದ ಹಿಂತಿರುಗುತ್ತಿದ್ದನು. ವೈಹಾಳಿ ಎಂದರೆ ಹೊಸ ಜಾತಿ ಕುದುರೆಗಳನ್ನು ವಿಶಾಲವಾದ ಬಯಲಿನಲ್ಲಿ ಪಳಗಿಸಿ ಅವುಗಳಿಗೆ ಕಡಿವಾಣ ಹಾಕಿ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು. ಈ ಸಾಹಸ ಕಾರ್ಯದಲ್ಲಿ ಜಯಶೀಲನಾದ ಕೌಶಿಕನನ್ನು ನಗರದ ಪ್ರಮುಖ ಸ್ಥಳಗಳಲ್ಲಿ ಸ್ವಾಗತಿಸಿ, ಗೌರವಿಸಿ, ಕಾಣಿಕೆಗಳನ್ನು ಊರ ಪ್ರಮುಖರು ಸಮರ್ಪಿಸುತ್ತಿದ್ದರು. ಅಂಥ ಒಂದು ವೇದಿಕೆ ಪ್ರಮುಖ ವ್ಯಾಪಾರಿ ಓಂಕಾರ ಶೆಟ್ಟರ ಮನೆಯ ಮುಂದೆ ಸಿದ್ಧವಾಗಿತ್ತು. ಮಹಾದೇವಿಯ ಗೆಳತಿಯರು ಸದಾ ಪೂಜೆ - ಧ್ಯಾನಾದಿಗಳಲ್ಲಿ ಅಂತರ್ಮುಖಿಯಾಗಿ ಇರುತ್ತಿದ್ದ ಆಕೆಯನ್ನು ಒತ್ತಾಯದಿಂದ ಮಾಳಿಗೆಯ ಮೇಲೆ ಕರೆತಂದರು. ಕೆಳಗಡೆ ಗಣ್ಯರು ಮಾಲೆ, ಕಾಣಿಕೆ ಸಮರ್ಪಿಸುತ್ತಿದ್ದರು. ಮಹಡಿಯ ಮೇಲೆ ಹುಡುಗಿಯರ ಕಿಲಕಿಲ ನಡೆದಿತ್ತು, ಕೌಶಿಕನ ದೃಷ್ಟಿ ಅತ್ತ ಹರಿಯಿತು. ಬಾತುಕೋಳಿಗಳ ಮಧ್ಯೆ ಹಂಸ ಪಕ್ಷಿಯು ವಿಭಿನ್ನವಾಗಿ ಕಾಣುವಂತೆ, ಆಗಸದ ತಾರೆಗಳ ಮಧ್ಯೆ ಪೂರ್ಣಚಂದಿರನು ವಿಶೇಷವಾಗಿ ಕಾಣುವಂತೆ ಅಪ್ರತಿಮ ಚೆಲುವೆಯಾದ ಮಹಾದೇವಿಯ ಸಾತ್ವಿಕ ಗಂಭೀರ ಮುಖ ಕೌಶಿಕನನ್ನು ಆಕರ್ಷಿಸಿತು. ಅವನ ದೃಷ್ಟಿ ಅಲ್ಲೇ ನಿಂತಿತು. "ಲೇ, ರಾಜರು ನಿನ್ನನ್ನೇ ನೋಡುತ್ತಿದ್ದಾರೆ" ಎಂದು ಗೆಳತಿಯೋರ್ವಳು ಪಿಸುಗುಟ್ಟಿದಾಗ ಮಹಾದೇವಿ ಹಾವು ತುಳಿದವಳಂತೆ ಬೆಚ್ಚಿ ಸರ್ರನೆ ಮನೆಯೊಳಕ್ಕೆ ಹೋದಳು. ಮನದಲ್ಲಿ ದುಗುಡವು ತುಂಬಿತು.

ಅರಮನೆ ಸೇರಿದ ಕೌಶಿಕನು ಆ ಅಪ್ರತಿಮ ಚೆಲುವೆ ಯಾರು? ಎಂದು ಕುತೂಹಲಿತನಾಗಿ ವಿವರಗಳನ್ನು ತಿಳಿಯಲು ಚಾರರನ್ನು ಅಟ್ಟಿದ. ಓಂಕಾರಶೆಟ್ಟರ ಏಕೈಕ ಪುತ್ರಿ ಎಂಬುದು ತಿಳಿದು ವಸಂತಕನೆಂಬ ವಿದೂಷಕನನ್ನು ತನ್ನ ಪ್ರತಿನಿಧಿಯನ್ನಾಗಿ ಬಟ್ಟೆ ಬರೆ, ಆಭರಣ ಮುಂತಾದವುಗಳೊಡನೆ ಮದುವೆಯ ಬೇಡಿಕೆಯೊಡನೆ ಓಂಕಾರ ಶೆಟ್ಟರ ಮನೆಗೆ ಕಳುಹಿಸಿದ. "ನಮ್ಮ ಮಗಳು ಪರಮಾತ್ಮನನ್ನೇ ಪತಿ ಎಂದು ಭಾವಿಸಿ ವೈರಾಗ್ಯ ಮೂರ್ತಿಯಾಗಿರುವಳು. ಲೋಕದ ಯಾವ ಪುರುಷನನ್ನು ವರಿಸಲೂ ಬಯಸುವುದಿಲ್ಲ." ಎಂಬ ಉತ್ತರವನ್ನು ಕಳುಹಿಸಲಾಯಿತು. ಆದರೆ ಕಾಮಾಂಧನಾದ ಕೌಶಿಕನು ಓಂಕಾರಶೆಟ್ಟಿ - ಲಿಂಗಮ್ಮರನ್ನು ಬಂಧಿಸಿ ಕಾರಾಗೃಹದಲ್ಲಿಟ್ಟು ಒತ್ತಾಯ ಪೂರ್ವಕವಾಗಿ ಮಹಾದೇವಿಯನ್ನು ಅರಮನೆಗೆ ಕರೆತರಲು ಭಟರನ್ನು ಕಳಿಸಿದ. ಅವರ ಮನೆಗೆ ಕಾವಲು ಹಾಕಲಾಯಿತು. ಮಹಾದೇವಿ ಪರಿಸ್ಥಿತಿಯ ಗಂಭೀರತೆಯನ್ನರಿತಳು. ಭವಿ ಕೌಶಿಕನನ್ನು ವಿವಾಹವಾಗಲು

ಸಿದ್ಧಳಿರಲಿಲ್ಲ; ತಾಯಿ -ತಂದೆಯರನ್ನು ಕಾರಾಗೃಹಕ್ಕೆ ದೂಡಲೂ ಮನ ಒಪ್ಪಲಿಲ್ಲ. ದೇವನ ಮೇಲೆ ಭಾರ ಹಾಕಿ ಸಮಸ್ಯೆಯನ್ನು ತಾನೇ ಎದುರಿಸಲು ನಿರ್ಧರಿಸಿದಳು. ತಾನೊಂದು ವ್ರತವನ್ನು ಕೈಗೊಂಡಿರುವುದಾಗಿಯೂ, ಅದು ಪೂರೈಸದ ಹೊರತು ವಿವಾಹವಾಗಲು ಬರದೆಂದು, ಅರಮನೆಯಲ್ಲಿದ್ದೇ ಆ ವ್ರತವನ್ನು ಪೂರೈಸುವುದಕ್ಕೆ ಸಿದ್ಧವೆಂದು; ಆದರೆ ಆ ವ್ರತಕ್ಕೆ ಯಾವುದೇ ಭಂಗ ತರಬಾರದೆಂದು, ವ್ರತದ ಅವಧಿಯಲ್ಲಿ ಗುರು -ಲಿಂಗ -ಜಂಗಮ ಪೂಜೆಗೆ ಅನುಕೂಲತೆ ಕಲ್ಪಿಸಿಕೊಡಬೇಕೆಂದು, ಒಂದು ವೇಳೆ ಕೌಶಿಕನು ವ್ರತಕ್ಕೆ ಭಂಗತರುವ 3 ತಪ್ಪುಗಳನ್ನು ಮಾಡಿದರೆ ಆಗ ಅರಮನೆಗೂ ತನಗೂ ಯಾವ ಸಂಬಂಧವೂ ಇರದು ಎಂದು ಕರಾರು ಹಾಕಿದಳು. ಅರಮನೆಯಲ್ಲಿದ್ದರೂ ಒಡನಾಟ, ಸಾಮೀಪ ಸಾಧ್ಯವಿಲ್ಲದಿದ್ದರೂ ಕಡೆಗೆ ಕಣ್ಣಿನ ದೃಷ್ಟಿಗಾದರೂ ಲಭ್ಯವಾಗುವಳೆಂದು ಭಾವಿಸಿ ಕೌಶಿಕನು ಮಹಾದೇವಿಯ ಎಲ್ಲ ಕರಾರುಗಳಿಗೆ ಒಪ್ಪಿದನು. ಮಗಳ ಆಂತರ್ಯವನ್ನರಿಯದ ತಾಯಿ ತಂದೆಯರು ಮಹಾದೇವಿಯ ನಿರ್ಧಾರದಿಂದ ದಿಗ್ಭ್ರಾಂತರಾದರು. ದುಃಖದಿಂದ ಮಗಳನ್ನು ಬೀಳ್ಕೊಟ್ಟರು.

ಹಗಲು ನಾಲ್ಕು ಜಾವ, ಇರುಳು ನಾಲ್ಕು ಜಾವ ಪೂಜೆ ಧ್ಯಾನಾದಿಗಳಲ್ಲೇ ಮಹಾದೇವಿಯು ತಲ್ಲೀನಳಾದಳು. ಅದೊಂದು ದಿವಸ, ಗುರುಲಿಂಗದೇವರು ತಮ್ಮ ಶಿಷ್ಯಳ ಮನಸ್ಥಿತಿ, ಪರಿಸ್ಥಿತಿ ಅರಿಯಲು ಬಯಸಿ ಅರಮನೆಗೆ ಬಂದರು. ಮಹಾದೇವಿಯ ಆನಂದ ಮೇರೆವರಿಯಿತು. ತಲೆಬಾಗಿಲಲ್ಲಿ ಗುರುಗಳನ್ನು ಸ್ವಾಗತಿಸಲು ಸಂಭ್ರಮದಿಂದ ನಡೆದಳು. ಪಾದಪೂಜೆ ಮಾಡಿದಳು, ಹಾಡಿ ಆನಂದಿಸಿದಳು.

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು
ಮುಕ್ತಿಯೆನ್ನ ಮನೆಗೆ ನಡೆದು ಬಂದಿತ್ತು !
ಜಯ ಜಯ ಗುರುವೇ ನಮೋ
ಪರಮ ಗುರುವೆ ನಮೋ ನಮೋ
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ
ಲಿಂಗದೇವ) ನ ತಂದೆನಗೆ ತೋರಿ ಕೊಟ್ಟ
ಗುರುವೆ ನಮೋ ನಮೋ !

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯ್ತು ನೋಡಾ
ಇಂದೆನಗೆ ಇಹದ ಸುಖ, ಪರದ ಗತಿ ನಡೆದು ಬಂದಂತಾಯಿತ್ತು ನೋಡಾ !
ಚನ್ನಮಲ್ಲಿಕಾರ್ಜುನಯ್ಯ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)
ಗುರುಪಾದವ ಕಂಡು ಧನ್ಯಳಾದೆನು ನೋಡಾ !

ಗುರುಗಳು ಒಳಗೆ ಬಂದು ತಮಗಾಗಿ ನೀಡಿದ ಪೀಠದಲ್ಲಿ ಕುಳಿತು ಉಪದೇಶ ಮಾಡತೊಡಗಿದರು. ಉಪವಾಸಾದಿಗಳಿಂದ ಶರೀರವು ಕೃಶವಾಗಿ ಕಂಡರೂ ಮಹಾದೇವಿಯ ಕಣ್ಣಲ್ಲಿ ಆತ್ಮವಿಶ್ವಾಸ ಮಿಂಚುತ್ತಿತ್ತು. ಮುಖವು ಸಾತ್ವಿಕ ತೇಜಸ್ಸಿನಿಂದ ಪ್ರಫುಲ್ಲಿತವಾಗಿತ್ತು. ಗುರುಗಳಿಗೆ ಸಮಾಧಾನವಾಯಿತು. ಜೀವನದ ನಶ್ವರತೆ ಕುರಿತು ಬೋಧಿಸಿದ ಗುರುಗಳು ಮಾನವ ಕೇವಲ ಸುಖ ಭೋಗಗಳಲ್ಲೇ ಕಾಲ ಕಳೆಯದೆ ಆತ್ಮನ ಸುಖಕ್ಕೂ ಯತ್ನಿಸಬೇಕು. ಪ್ರತಿಯೊಬ್ಬರೂ ದೀಕ್ಷೆ ಪಡೆದು ಭಕ್ತಿ ಮಾರ್ಗದಲ್ಲಿ ನಡೆಯಬೇಕು. ಎಂದು ತಿಳಿಸಿದರು. ಅದನ್ನು ಚಿತ್ತವಿಟ್ಟು ಆಲಿಸಿದ ಅರಮನೆಯ ಸೇವಕಿಯರು ತಾವೂ ದೀಕ್ಷೆಯನ್ನು ಹೊಂದಬಹುದೆ ಎಂದು ಗುರುಗಳನ್ನು ಕೇಳಿದಾಗ ಅವರು, ಅಹುದು, ಎಲ್ಲರೂ ಪಡೆಯಬಹುದು. ಅನ್ನ ಅರಿವೆಗಳಷ್ಟೆ ಧರ್ಮಾಚರಣೆಯೂ ಜೀವನಾಗತ್ಯ ಎಂದು ಹೇಳಿದರು. ಈ ಮಾತುಗಳಿಂದ ಪ್ರಭಾವಿತರಾದ ಸೇವಕಿಯರು ದೀಕ್ಷೆ ಕುರಿತು ಆಸಕ್ತಿ ತೋರಿದಾಗ ಇದೆಲ್ಲವನ್ನು ನೆಟ್ಟ ನೋಟದಿಂದ ವೀಕ್ಷಿಸುತ್ತಿದ್ದ ಕೌಶಿಕನು ಕೋಪೋದ್ರಿಕ್ತನಾಗಿ, ''ಇದೇನೂ ಮಠವಲ್ಲ, ವೈರಾಗ್ಯ ಬೋಧನೆ ಮಾಡಲು; ನಾಟಕ ಮಾಡುತ್ತಿದ್ದೀರಾ? ಇಂಥ ಬೂಟಾಟಿಕೆಯ ಸ್ವಾಮಿಗಳನ್ನು ನಾನು ಬಹಳಷ್ಟು ಕಂಡಿದ್ದೇನೆ. ಇಲ್ಲಿಂದ ತೊಲಗಿರಿ.'' ಎಂದು ಗುಡುಗಿದ. ಅವಮಾನಿತರಾದ ಗುರುಗಳು ಎದ್ದು ನಿಂತು, ''ಮಹಾರಾಜ ಈ ಜೀವನವೇ ಒಂದು ನಾಟಕ. ನಾನೂ ಪಾತ್ರಧಾರಿ, ನೀನೂ ಪಾತ್ರಧಾರಿ. ಗುರು ಹಿರಿಯರೆನ್ನದೆ ಉದ್ಧಟನಾಗಿ ವರ್ತಿಸುತ್ತಿದ್ದೀಯೆ. ದೇವನ ಸತಿಯಾದ ಮಹಾದೇವಿಯನ್ನು ಬಂಧನದಲ್ಲಿಟ್ಟಿದ್ದೀಯೆ. ಇದಕ್ಕೆ ತಕ್ಕ ಶಿಕ್ಷೆ ನಿನಗಾಗುವುದು.'' ಎಂದು ಹೊರಟರು. ''ಬೇಡಿ ಗುರುಗಳೇ, ತಮಗೆ ಅವಮಾನ ಮಾಡಿ ಕಳಿಸಲು ನನಗಿಷ್ಟವಿಲ್ಲ. ದಯಮಾಡಿ ಆತಿಥ್ಯ ಸ್ವೀಕರಿಸಿರಿ'' ಎಂದು

ಮಹಾದೇವಿ ಪಾದ ಹಿಡಿದು ಗೋಗರೆದಳು.'' ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಪಾಪದ ಪಾತ್ರೆ ತುಂಬಿ ಕೊಳ್ಳುತ್ತಿರುವ ಈ ರಾಜನದೇ ತಪ್ಪು, ಅವಮಾನವಾದಲ್ಲಿ ಆತಿಥ್ಯ ಬೇಡ.'' ಎಂದು ಗುರುಗಳು ಶಿಷ್ಯ ಬಳಗದೊಡನೆ ಹೊರನಡೆದರು. ಮಹಾದೇವಿ ದುಃಖಿತಳಾಗಿ ''ನನ್ನ ವ್ರತಕ್ಕೆ ಅಡ್ಡಿಮಾಡುವುದಿಲ್ಲ ಎಂದು ಒಪ್ಪಿಕೊಂಡು ಸಹ ಗುರುಗಳಿಗೆ ಅವಮಾನ ಮಾಡಿದೆ. ಮೊದಲನೆಯ ತಪ್ಪು ಘಟಿಸಿತು.'' ಎಂದು ನುಡಿದು ಮಹಾದೇವಿ ತನ್ನ ಕೋಣೆಯೊಳಕ್ಕೆ ಹೋದಾಗ ಕೌಶಿಕನ ಉನ್ಮಾದವಿಳಿದು ಖಿನ್ನನಾಗಿ ನಿಂತ.

ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದಾ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯಾ
ಚನ್ನಮಲ್ಲಿಕಾರ್ಜುನಾ (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಹಿಂಡನಗಲಿದ ಆನೆ ತನ್ನ ಹಿಂಡಿಗಾಗಿ ಪರಿತಪಿಸುವಂತೆ, ಬಂಧನದಲ್ಲಿ ಸಿಕ್ಕಿ ಬಿದ್ದ ಗಿಳಿ ಬಂಧನ ಬಿಡುಗಡೆಗಾಗಿ ಹಂಬಲಿಸುವಂತೆ ಮಹಾದೇವಿ ಚಟಪಟಿಸುತ್ತಿದ್ದಾಳೆ. ಒಂದು ದಿನ ಅರಮನೆಯ ಸನಿಹದ ಕೈ ತೋಟದಲ್ಲಿ ಆನಂದದಿಂದ ಇಷ್ಟಲಿಂಗಾರ್ಚನೆ -ತ್ರಾಟಕವನ್ನು ಮಾಡುತ್ತ ಮೈಮರೆತಿದ್ದಾಳೆ. ಈ ಬಂಧನದ ಬಿಡುಗಡೆ ಎಂದಿಗೆ ಎಂದು ಮೊರೆ ಇಡುತ್ತಿದ್ದಾಳೆ. ಕೌಶಿಕ ಹಿಂದಿನಿಂದ ಬಂದು ಆಕೆಯ ಸೆರಗಿನ ತುದಿಯನ್ನು ಹಿಡಿದಿದ್ದಾನೆ. ಎಚ್ಚರಗೊಂಡು ಬಹಿರ್ಮುಖಳಾದ ಮಹಾದೇವಿಗೆ ಕೋಪ ಮತ್ತು ದುಃಖ ಒತ್ತರಿಸಿ ಬಂದವು.

''ಎಮ್ಮೆಗೊಂದು ಚಿಂತೆ; ಸಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ; ಕರ್ಮಿಗೊಂದು ಚಿಂತೆ !
ಎನಗೆ ಎನ್ನ ಚಿಂತೆ; ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು, ಸೆರಗ ಬಿಡು ಮರುಳೆ;
ಎನಗೆ ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ
ಲಿಂಗದೇವರು) ಒಲಿವನೋ ಒಲಿಯನೋ ಎಂಬ ಚಿಂತೆ !

ದೇವನ ಅನುಗ್ರಹ ಪಡೆವ ಚಿಂತೆ ನನ್ನದಾದರೆ ಸದಾ ಕಾಮದ ಚಿಂತೆಯಲ್ಲಿರುವ ವ್ಯಕ್ತಿ ನೀನು. ಲಿಂಗಪೂಜೆಗೆ ಭಂಗ ತಂದು ಎರಡನೆಯ ತಪ್ಪನ್ನು ಎಸಗಿದ್ದೀಯೆ.'' ಎಂದು ಆವೇಶದಿಂದ ನುಡಿದು ಮಹಾದೇವಿ ಅರಮನೆಯೊಳಕ್ಕೆ ನಡೆದಳು.

''ನಾನು ಕೈಗೊಂಡ ವ್ರತವು ಸಾಂಗವಾಗಿ ನಡೆದಿದೆ. ಇದು ಪೂರ್ಣಗೊಳ್ಳಬೇಕಾದರೆ ಜಂಗಮಾರಾಧನೆ, ಗಣದಾಸೋಹ ನೆರವೇರಬೇಕು.'' ಎಂಬ ಬೇಡಿಕೆಯನ್ನು ಮಹಾದೇವಿ ಅರಸನ ಮುಂದಿಟ್ಟಳು. ಸಂತೋಷದಿಂದಲೇ ಒಪ್ಪಿಗೆ ನೀಡಿದ. ಕಲ್ಯಾಣದ ಕಡೆಯಿಂದ ಅನೇಕ ಧರ್ಮಪ್ರಸಾರಕ ಜಂಗಮರು ಬಂದು ಶ್ರೀಗುರು ಲಿಂಗದೇವರ ಮಠದಲ್ಲಿ ಬೀಡುಬಿಟ್ಟ ಸಂಗತಿ ತಿಳಿದಿದ್ದ ಮಹಾದೇವಿ ಧರ್ಮಗುರು ಬಸವಣ್ಣ ಹಾಗೂ ಕಲ್ಯಾಣದ ಬಗ್ಗೆ ತಿಳಿಯಲು ಉತ್ಸುಕಳಾಗಿದ್ದಳು. ಅರಮನೆಯ ದೂತರಿಂದ ಆಹ್ವಾನವು ಮಠಕ್ಕೆ ಹೋಯಿತು. ಜಂಗಮರು ನಿತ್ಯವೂ ಅರಮನೆಗೆ ಬಂದು ಅನುಭವ ಗೋಷ್ಠಿಯನ್ನು ನಡೆಸಿ, ಪೂಜೆ -ಪ್ರಸಾದ ಪೂರೈಸಿ ಹೋಗುತ್ತಿದ್ದರು. ಅವರ ಮೂಲಕ ಕಲ್ಯಾಣ ಪಟ್ಟಣದಲ್ಲಿ ಗುರು ಬಸವಣ್ಣನವರು ನೆಲೆಸಿದ್ದು, ಅನುಭವ ಮಂಟಪ ಕಟ್ಟಿ ಎಲ್ಲರನ್ನೂ ಬರಮಾಡಿ ಕೊಂಡಿದ್ದು, ನಿತ್ಯವೂ ನಡೆಯುವ ಅನುಭವ ಗೋಷ್ಠಿ -ಮುಂತಾದುವನ್ನು ತಿಳಿದು ಹರ್ಷಿಸುತ್ತಿದ್ದಳು. ಧರ್ಮಗುರು ಬಸವಣ್ಣನವರು ಮತ್ತು ಅನುಭವ ಮಂಟಪದ ಇತರ ಶರಣರ ವಚನಗಳು ಲಭ್ಯವಾಗಿ ದೊಡ್ಡ ನಿಧಿಯೇ ಸಿಕ್ಕಂತಾಗಿತ್ತು.

ಅಂದು ಜಂಗಮರ ಬರವಿಗಾಗಿ ಕಾಯುತ್ತಿದ್ದ ಮಹಾದೇವಿಗೆ ಬರಸಿಡಿಲಿನಂತೆ ಸುದ್ದಿಯು ಅಪ್ಪಳಿಸಿತು. ಅದೇನೆಂದರೆ ಜಂಗಮರನ್ನು ಅರಮನೆಯೊಳಕ್ಕೆ ಬರಗೊಡಬಾರದೆಂದು ತಲೆ ಬಾಗಿಲಿನಿಂದ ಆಚೆಗೆ ಕಳಿಸಬೇಕೆಂದು ರಾಜನ ಅಪ್ಪಣೆಯಾಗಿದೆ ಎಂಬ ವಿಷಯ. ಬಂದ ಜಂಗಮರನ್ನು ಬಾಗಿಲಲ್ಲಿಂದಲೇ ಸೇವಕರು ಕಳಿಸುವ ದೃಶ್ಯ ಕಂಡು ಮಹಾದೇವಿ ಅವರ ಬಳಿ ಧಾವಿಸಿ, ಒಳಗೆ ಬನ್ನಿರಿ ಎಂದು ಆಹ್ವಾನಿಸಿದಳು.

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ !
ಜಂಗಮವೆನ್ನ ನಿಧಿನಿಧಾನ !
ಜಂಗಮವೆನ್ನ ಹರುಷದ ಮೇರೆ !
ಚನ್ನಮಲ್ಲಿಕಾರ್ಜುನ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)
ಜಂಗಮದ ತಿಂಥಿಣಿಯಲ್ಲಿ ಓಲಾಡುವೆ

ಮಹಾತ್ಮರೇ ನಿಮ್ಮ ಜ್ಞಾನಗೋಷ್ಠಿಯೇ ನನಗೆ ಸಂಜೀವಿನಿ. ನೀವು ಮುನಿಸಿಕೊಂಡರೆ ನಾನೆಂತು ತಾಳುವೆ. ಒಳಗೆ ದಯಮಾಡಿಸಿ.'' ಎಂದು ಮಹಾದೇವಿ ವಿನಂತಿಸಿದಳು.

``ತಾಯಿ, ರಾಜರ ಅಪ್ಪಣೆಯಾಗಿದೆ. ಅಂದಾಗ ಬಂದು ಅವಮಾನಿತರಾಗೋಣವೆ?'' ಹಿರಿಯ ಜಂಗಮರೆಂದರು.

``ಸಾಧ್ಯವಿಲ್ಲ; ಈ ಜಂಗಮ ಗೋಷ್ಠಿಗೆ ಮಹಾರಾಜರೇ ಒಪ್ಪಿಗೆ ನೀಡಿದ್ದಾರೆ. ಈ ನಿರಾಕರಣೆ ಯಾರೋ ಬಾಗಿಲು ಕಾಯುವವರ ಕೆಲಸ.'' ಮಹಾದೇವಿ ನುಡಿದಳು.

``ಅಹುದು. ನಾನೇ ಈ ಭಿಕಾರಿಗಳನ್ನು ಒಳಗೆ ಬಿಡಬಾರದೆಂದು ದ್ವಾರಪಾಲಕರಿಗೆ ಹೇಳಿದ್ದೇನೆ.'' ಮಹಾದೇವಿಯ ಹಿಂದೆ ಬಂದು ನಿಂತಿದ್ದ ಕೌಶಿಕ ಗರ್ಜಿಸಿದ.

``ಶಿವ ಶಿವಾ, ಇವರು ಭಿಕಾರಿಗಳೇ, ಇವರು ತ್ಯಾಗಿಗಳು ಯೋಗಿಗಳು.......ಅಪ್ಪನವರು ಹೇಳಿಲ್ಲವೆ,

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರನು
ತಿರುಕರೆನ್ನದಿರಿ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬವರ ಬೇಹು
ನೋಡಬಂದ ಕಾಣಾ, ಲಿಂಗದೇವ

``ಸುಮ್ಮನೆ ಒಳಗೆ ಬಾ....... ಇವರ್‍ಯಾರು ಒಳಗೆ ಬರುವಂತಿಲ್ಲ.''
ಜಂಗಮರು ವಾಪಸ್ಸು ಹೊರಟರು.

ದೇವಾ, ಶಿವಲಾಂಛನವನೇರಿಸಿಕೊಂಡು
ಮನೆಗೆ ಬಂದವರ ಕಡೆಗಣಿಸೆ
ಎಂತು ನೋಡುತಿಪ್ಪೆ ?
ಅವರಿಗೆ ಸತ್ಕಾರವ ಮಾಡಲಿಲ್ಲದಿರ್ದೊಡೆ
ಎನ್ನ ನೀ ಧರೆಯ ಮೇಲಿರಿಸುವ ಕಾರಣವೇನು
ಚನ್ನಮಲ್ಲಿಕಾರ್ಜುನಾ (ಮಹಾದೇವಿಯಕ್ಕ ಪ್ರಿಯ ಲಿಂಗದೇವ).

ಅವರ ಹಿಂದೆಯೇ ಮಹಾದೇವಿ ಮುನ್ನಡೆದಳು. ಕೌಶಿಕನು ಕೋಪಗೊಂಡು ಮಹಾದೇವಿಯ ಸೀರೆಯ ಸೆರಗನ್ನು ಹಿಡಿದು, ಅರಮನೆಯೊಳಕ್ಕೆ ಬಾ ಎಂದು ಎಳೆದ. ಆವೇಶದಿಂದ ತಿರುಗಿ ನೋಡಿದ ಮಹಾದೇವಿ ನುಡಿದಳು :

ಅಮೇಧ್ಯದ ಮಡಕೆ, ಮೂತ್ರದ ಕುಡಿಕೆ
ಎಲುವಿನ ತಡಿಕೆ, ಕೀವಿನ ಹಡಿಕೆ !
ಸುಡಲೀ ದೇಹವ !
ಒಡಲುವಿಡಿದು ಕೆಡದಿರು
ಚನ್ನಮಲ್ಲಿಕಾರ್ಜುನನರಿ ಮರುಳೇ !

ಕೈಸಿರಿಯ ದಂಡವ ಕೊಳ್ಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟಂತಹ ಉಡಿಗೆತೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ,
ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೇ ?
ಚನ್ನಮಲ್ಲಿಕಾರ್ಜುನ ಲಿಂಗದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡಿಗೆತೊಡಿಗೆಯ ಹಂಗೇಕೋ ಮರುಳೇ

ಈ ನಶ್ವರವಾದ ಶರೀರದ ಸುಖಕ್ಕಾಗಿ ಮಾಡಬಾರದ ಪಾಪಗಳನ್ನು ಮಾಡುತ್ತಿರುವೆ. ಗುರು - ಲಿಂಗ - ಜಂಗಮ ಪೂಜೆಗೆ ಚ್ಯುತಿ ತಂದು 3 ತಪ್ಪುಗಳನ್ನು ಎಸಗಿರುವೆ. ಕೊಟ್ಟ ಮಾತಿಗೆ ತಪ್ಪಿರುವೆ. ಅರಮನೆಯ ಋಣ ತೀರಿತು. ಇನ್ನಾದರೂ ಜೀವನವನ್ನು ಉದಾತ್ತೀಕರಿಸಿಕೊ.'' ಎಂದು ಹೇಳಿ ತಾನು ಉಟ್ಟಿದ್ದ, ಕೌಶಿಕ ಹಿಡಿದಿದ್ದ ಸೀರೆಯನ್ನು ಬಿಚ್ಚಿ ಬಿಸಾಡಿದಳು. ಸ್ತಂಭೀಭೂತನಾಗಿ ನಿಂತ ಕೌಶಿಕ ಮಾತನಾಡಲಾರದಾಗಿದ್ದ.

ಉಟ್ಟ ಸೀರೆಯ ಸೀಳಿ ತೊಟ್ಟ ತೊಡುಗೆಯ ಮುರಿದು
ಬಿಟ್ಟಹೆನು ನಾನು ಬಿಡುಮುಡಿಯ ಎಲೆ ಮೃಡನೆ
ಕೊಟ್ಟಹೆನು ಎನ್ನ ತನುಮನವ ।

ಎಂದು ಹಾಡುತ್ತ ದಟ್ಟವಾಗಿ ಬೆಳೆದಿದ್ದ ಕೂದಲನ್ನೇ ತನ್ನ ಮೈಮೇಲೆ ಹರಡಿಕೊಂಡು ಗುರುಗಳ ಆಶೀರ್ವಾದವನ್ನು ಪಡೆಯಲು ಶ್ರೀಗುರು ಲಿಂಗದೇವರ ಮಠಕ್ಕೆ ನಡೆದಳು. ಗುರುಗಳ ಆಶೀರ್ವಾದ ಪಡೆದು ಶರಣರ ಸಂಗವನ್ನು ಹೊಂದಲು ಕಲ್ಯಾಣದತ್ತ ಮುನ್ನಡೆದಳು. ಕಾಡುಮೇಡುಗಳನ್ನಲೆಯುತ್ತ ಕಷ್ಟ ಕಾರ್ಪಣ್ಯಗಳ ಸರಮಾಲೆಯನ್ನು ಎದುರಿಸುತ್ತ ಏಕಾಂಗಿಯಾಗಿ ಸಾಗಿದಳು.

ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು !
ತೃಷೆಯಾದರೆ ಕೆರೆ -ಬಾವಿ-ಹಳ್ಳಂಗಳುಂಟು !
ಶಯನಕ್ಕೆ ಹಾಳುದೇಗುಲವುಂಟು !
ಚನ್ನಮಲ್ಲಿಕಾರ್ಜುನಯ್ಯ(ಮಹಾದೇವಿಯಕ್ಕ ಪ್ರಿಯ ಲಿಂಗದೇವಯ್ಯ)
ಆತ್ಮ ಸಂಗಾತಕ್ಕೆ ನೀನೆನಗುಂಟು !

ಉಪವಾಸ ವನವಾಸಗಳಿಂದ ಬಳಲಿದರೂ ಎದೆಗೆಡಲಿಲ್ಲ.

ಮನೆಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ !
ಬೇಡಿದರೆ ಇಕ್ಕದಂತೆ ಮಾಡಯ್ಯ !
ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯ !
ನೆಲಕ್ಕೆ ಬಿದ್ದರೆ ನಾನೆತ್ತಿಕೊಂಬುದಕ್ಕೆ ಮುನ್ನವೇ
ಶುನಿ ಎತ್ತಿಕೊಂಬಂತೆ ಮಾಡಾ,
ಚನ್ನಮಲ್ಲಿಕಾರ್ಜುನಯ್ಯ(ಮಹಾದೇವಿಯಕ್ಕ ಪ್ರಿಯ ಲಿಂಗದೇವ) !

ಮಳೆಗಾಳಿ, ಗುಡುಗು ಸಿಡಿಲು ಮುಂತಾದ ಪ್ರಾಕೃತಿಕ ಸಂಕಷ್ಟಗಳನ್ನೂ ಅಷ್ಟೇ ಆತ್ಮಸ್ಥೈರ್ಯದಿಂದ ಎದುರಿಸಿದಳು.

ಕಿಡಿ ಕಿಡಿ ಕೆದರಿದರೆ ಎನಗೆ ಹಸಿವು ತೃಷೆ ಅಡಗಿತ್ತೆಂಬೆನು !
ಮುಗಿಲು ಹರಿದು ಬಿದ್ದರೆ ಎನಗೆ ಮಜ್ಜನಕ್ಕೆರೆದರೆಂಬೆನು !
ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು !
ಚನ್ನಮಲ್ಲಿಕಾರ್ಜುನಯ್ಯ,(ಮಹಾದೇವಿಯಕ್ಕ ಪ್ರಿಯ ಲಿಂಗದೇವಯ್ಯ)
ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು

ಕಷ್ಟ ಕಾರ್ಪಣ್ಯಗಳ ಸರಮಾಲೆ ಎದುರಿಸುತ್ತ ದಾರಿ ಸವೆಸಿ ಅಂತೂ ಕಲ್ಯಾಣದ ಸಮೀಪ ಬರ ತೊಡಗಿದಂತೆ ಹೃದಯವು ನವಿಲಿನಂತೆ ನರ್ತಿಸತೊಡಗಿತ್ತು.

ಕಲ್ಯಾಣ ಕೈಲಾಸವೆಂಬ ನುಡಿ ಹುಸನಾಯಿತ್ತು !
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ !
ಇದರಂತುವನಾರು ಬಲ್ಲರಯ್ಯ ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯ !
ನಿಮ್ಮ ಶರಣ ಬಸವಣ್ಣ ಕಾಂಬೆನೆಂಬ ತವಕವೆನಗಾಯಿತ್ತು ಕೇಳಾ
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಕಲ್ಯಾಣದ ಹೊರವಲಯದಲ್ಲಿದ್ದ ಬಂದವರ ಓಣಿಯಲ್ಲಿದ್ದ ತಿಳಿನೀರಿನ ಝರಿಯಲ್ಲಿ ಮಿಂದಾಗ ದಣಿವು ಮಾಯವಾಯಿತು. ಅದಕ್ಕೆ ಹೊಂದಿಕೊಂಡಿದ್ದ ಗವಿಯಲ್ಲಿ ಆಶ್ರಯ ಪಡೆದಳು. ಮರುದಿವಸ ಸುಪ್ರಭಾತದಲ್ಲಿ ಮಿಂದು, ಪೂಜೆಯ ನಂತರ ಅನುಭವ ಮಂಟಪಕ್ಕೆ ಹೋಗಬೇಕು ಎಂದು ಕೊಳ್ಳುವವರಲ್ಲಿ ಅಪ್ತಾವರಣಧಾರಿಯಾದ ಓರ್ವ ವ್ಯಕ್ತಿ ಬಂದು ಮಾತಿಗೆಳೆದ. ``ಎಂಥಾ ಅಪ್ರತಿಮ

ಸುಂದರಿ ! ನಾನೂ ಶರಣನೆ. ನನ್ನ ಅಧ್ಯಾತ್ಮಿಕ ಅಭಿರುಚಿಗೆ ತಕ್ಕ ಹೆಣ್ಣು ಸಿಕ್ಕಿಲ್ಲ ಎಂದು ನಾನು, ನಿನ್ನ ಅಭಿರುಚಿಗೆ ತಕ್ಕ ಹುಡುಗ ಸಿಕ್ಕಿಲ್ಲ ಎಂದು ನೀನು ವಿವಾಹವಾಗಿಲ್ಲ. ಈಗ ಇಬ್ಬರದೂ ಸಮಾನ ಅಭಿರುಚಿ.'' ಮಹಾದೇವಿ ಮನದಲ್ಲೇ ನಕ್ಕಳು, ''ಮಾಯೆ, ನೀನು ಯಾವ ಯಾವ ರೂಪದಲ್ಲಿ ಬರುವೆಯೋ ತಿಳಿಯದು. ಅಲ್ಲಿ ಲೌಕಿಕಾಸಕ್ತ ಕೌಶಿಕನ ರೂಪದಲ್ಲಿ ಬಂದೆ. ಇಲ್ಲಿ ಶರಣನ ವೇಷವನ್ನೇ ತೊಟ್ಟು ಬಂದಿರುವೆ ! ನಿನ್ನ ಈ ಆಟಕ್ಕೆ ಹೆದರುವವಳೂ ಅಲ್ಲ, ಮರುಳಾಗುವವಳೂ ಅಲ್ಲ ಎಂದು ಕೊಂಡಳು.

ಯೋಗಿಗೆ ಯೋಗಿಣಿಯಾಗಿಹಳು ಮಾಯೆ !
ಜೋಗಿಗೆ ಜೋಗಿಣಿಯಾಗಿಹಳು ಮಾಯೆ !
ಶ್ರವಣಗೆ ಕಂತಿಯಾದಳು ಮಾಯೆ !
ಯತಿಗೆ ಪರಾರ್ಥವಾದಳು ಮಾಯೆ !
ಹೆಣ್ಣಗೆ ಗಂಡು ಮಾಯೆ ! ಗಂಡಿಗೆ ಹೆಣ್ಣು ಮಾಯೆ !
ನಿಮ್ಮ ಮಾಯೆಗೆ ನಾನಂಜುವವಳಲ್ಲ
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಹೀಗ ಬಂದ ಕಿನ್ನರಿ ಬ್ರಹ್ಮಣ್ಣನೆಂಬ ಶರಣ - ಮಹಾದೇವಿಯ ವೈರಾಗ್ಯ ಪರೀಕ್ಷೆಗಾಗಿ ಪ್ರಭುದೇವರಿಂದ ಆಜ್ಞಪ್ತನಾಗಿ ಬಂದ ವ್ಯಕ್ತಿ. ಅನುಭವ ಮಂಟಪವು ಮಹಾದೇವಿಯ ಬರುವಿಗೆ ಕುತೂಹಲದಿಂದ ಕಾಯುತ್ತಿತ್ತು. ನಾಗಲಾಂಬಿಕೆ, ನೀಲಾಂಬಿಕೆ ಆರತಿ ಬೆಳಗಲು, ಚನ್ನಬಸವಣ್ಣನವರು ಸ್ವಾಗತಿಸಲು, ಮಡಿವಾಳ ಮಾಚಿದೇವರು ನಡೆಮಡಿ ಹಾಸಲು ಉತ್ಸುಕರಾಗಿದ್ದರು. ಸ್ವಾಗತ ಪಡೆದು ಒಳಗೆ ಬಂದು ಮಹಾದೇವಿಯು ಎಲ್ಲ ಶರಣರಿಗೆ ಶರಣಾರ್ಥಿ ಸಲ್ಲಿಸಿದಳು. ಅಧ್ಯಕ್ಷ ಪೀಠದಲ್ಲಿದ್ದ ಅಲ್ಲಮಪ್ರಭುದೇವರು ಗಂಭೀರ ಧ್ವನಿಯಲ್ಲಿ ''ತುಂಬು ಜವ್ವನೆಯಾದ ನೀನು ಈ ಅನುಭವ ಮಂಟಪಕ್ಕೆ ಬಂದ ಕಾರಣವೇನು ?'' ಎಂದು ಕೇಳಿದಾಗ ಶರಣ ಸಮೂಹ ದಿಗ್ಭ್ರಾಂತವಾಯಿತು.

''ಇದು ಬಂದವರನ್ನು ಸ್ವಾಗತಿಸುವ ಶಿಷ್ಟಾಚಾರವೆ ?'' ಎಂದು ಕೆಲವರು ಗುಸುಗುಸು ಮಾಡಿದರು. ಮಹಾದೇವಿ ಅಧೀರಳಾಗಲಿಲ್ಲ.

ಅ: ''ಆಡುವುದು, ಪಾಡುವುದು, ಹೇಳುವುದು, ಕೇಳುವುದು; ನಡೆವುದು ನುಡಿವುದು. ಸರಸ ಸಮ್ಮೇಳನವಾಗಿ ಇಪ್ಪುದಯ್ಯ. ದೇವರು ಕೊಟ್ಟ ಆಯುಷ್ಯವಿರುವವರೆಗೆ ಶರಣರ ಒಡನಾಟದಲ್ಲಿರಲು ಬಂದಿದ್ದೇನೆ.'' ಎಂದು ನುಡಿದಳು.

ಪ್ರ: ''ಅದೇನೋ ಸರಿ; ಇಲ್ಲಿ ವಿವಾಹಿತ ಗೃಹಸ್ಥರಿಗೆ ಮಾತ್ರ ಪ್ರವೇಶ. ನಿನ್ನ ಪತಿ ಯಾರು?''

ಅ: ''ಸಾವಿಲ್ಲದ ಕೇಡಿಲ್ಲದ ರೂಪುಯಿಲ್ಲದ ಚೆಲುವ ಚನ್ನಮಲ್ಲಿಕಾರ್ಜುನ, ಅವನೇ ನನ್ನ ಪತಿ ನಾನವನ ಸತಿ.

ಪ್ರ: ''ಆದರೆ ಯಾರ ಮೇಲೆಯೋ ತಪ್ಪು ಹೊರಿಸಿ ಬಂದಿದ್ದೀಯೆ ಎಂಬ ಸುದ್ದಿ ಇದೆಯಲ್ಲ''

ಅ: ''ಹರನೆ ನನಗೆ ಗಂಡನಾಗಬೇಕೆಂದು ಹಲವು ಕಾಲ ಹಂಬಲಿಸಿದ್ದೆ. ಯೌವನಕ್ಕೆ ಬಂದಾಗ ಗುರುವು ಲಿಂಗದೇವನೊಡನೆ ಈ ಶರಣ ಸತಿಯ ವಿವಾಹ ಮಾಡಿದರು. ಹೀಗಾಗಿ ದೇವನೆ ನನ್ನ ಪತಿ. ಲೋಕದ ಪುರುಷರು ನನಗೆ ಸಂಬಂಧವೇ ಇಲ್ಲ.''

ಪ್ರ: ''ದಿಗಂಬರೆಯಾಗಿ ನೀನು ಸೀರೆಯನ್ನು ತೊರೆದು ವೈರಾಗ್ಯ ಮೂರ್ತಿ ಎಂಬುದನ್ನು ತೋರಿಸಿ ಕೊಂಡಿರುವೆ; ಆದರೆ ದೇಹದ ಕೆಲವು ಭಾಗಗಳನ್ನು ಕೂದಲಿನಿಂದ ಏಕೆ ಮರೆ ಮಾಡಿ ಕೊಂಡಿರುವೆ?

ಅ: ''ಒಂದು ಹಣ್ಣು ಪಕ್ವವಾದಲ್ಲದೆ ಅದರ ಸಿಪ್ಪೆಯನ್ನು ಕಳಚಲು ಬರದು ; ಸೀರೆ ಎಂಬ ಸಿಪ್ಪೆ ಕಳಚಿದೆ ಎಂದರೆ ಅಂತರಂಗವು ವೈರಾಗ್ಯದಿಂದ ಪಕ್ವವಾಗಿದೆ ಎಂದಲ್ಲವೆ ?''

ಪ್ರ: ''ಸಿಪ್ಪೆಯಿಂದ ಹಣ್ಣಿಗೆ ರಕ್ಷಣೆ. ಸೀರೆಯಿಂದ ಶೀಲ ರಕ್ಷಣೆ. ನೀನು ಅವನ್ನೇ ಕಳಚಿದ್ದೀಯ ಎಂದರೆ ಹೇಗೆ ನಿನ್ನ ಪಾವಿತ್ರ್ಯತೆಯನ್ನು ನಂಬುವುದು?''

ಅ: ''ಸಿಪ್ಪೆ ಕಳಚಿ ಹೊರಗಿಟ್ಟರೆ ಹಣ್ಣಗೆ ಇರುವೆ, ನೊಣ ಮುತ್ತಬಹುದು. ಹಣ್ಣನ್ನು ತಿಂದುಬಿಟ್ಟರೆ ? ಅದು ಕಲಂಕಿತವಾಗದಷ್ಟೆ. ಹಾಗೆ ಸೀರೆ ಎಂಬ ಸಿಪ್ಪೆ ಕಳಚಿ ಈ ಶರೀರದ ಹಣ್ಣನ್ನು ಲೌಕಿಕರ ಮಧ್ಯೆ ಇಟ್ಟಿದ್ದರೆ ಅದು ತನ್ನ ಪ ವಿತ್ರ್ಯವನ್ನು ಕಳೆದುಕೊಳ್ಳಲು ಸಾಧ್ಯವಿತ್ತು. ಚನ್ನಮಲ್ಲಿಕಾರ್ಜುನನೆಂಬ ಲಿಂಗ ದೇವನಿಗೆ ಇದನ್ನು ಸಮರ್ಪಣೆ ಮಾಡಿದ್ದೇನೆ. ಪ್ರಸಾದ ಕಾಯವಾದ ಕಾರಣ ಇಲ್ಲಿ ವಿಕೃತಿ ಇಲ್ಲ.''

ಪ್ರ: ''ಭಲೆ, ನೀನು ಮಾತಿನಲ್ಲಿ ಚತುರೆ. ನಾನು ಸತ್ತಿದ್ದೇನೆ ಎಂದು ಹೆಣವು ಹೇಗೆ ಹೇಳುವುದಿಲ್ಲವೋ,

ಹೆಪ್ಪು ಹಾಕಿದ ಹಾಲು ಸಿಹಿಯಾಗಿರುವುದಿಲ್ಲವೋ ಹಾಗೆ ಜ್ಞಾನಿಯಾದವನು ಶಬ್ದ ಮುಗ್ಧನಾಗಿ ಉಳಿಯುವನೇ ವಿನಾ ಮಾತನಾಡುವುದಿಲ್ಲ. ನೀನು ಮಾತನಾಡುತ್ತಿರುವುದೇ ಅಪಕ್ವತೆಯ ಲಕ್ಷಣ.

ಅ: ''ಸತ್ತಿದ್ದೇನೆ ಎಂದು ಹೆಣ ಹೇಳುವುದುಂಟು; ಹೆಪ್ಪಿಟ್ಟ ಹಾಲು ಸಿಹಿಯಾದುದುಂಟು.''

ಪ್ರ: ''ಇದು ಬಲೇ ಸೋಜಿಗದ ಸಂಗತಿ. ಹೇಗೆ ಸಾಧ್ಯ ಹೇಳು ?''

ಅ: ''ನಿದ್ರೆಯನ್ನು ಅರ್ಧಸಾವು ಎನ್ನುವರು. ನಿದ್ರೆಯಲ್ಲಿ ತಾನು ಸತ್ತಂತೆ ಕನಸು ಕಾಣುವನು; ಎಚ್ಚರ ಗೊಂಡಾಗ ನಾನು (ಕನಸಿನಲ್ಲಿ) ಸತ್ತಿದ್ದೆ ಎಂದು ಹೇಳುವನು. ಹೆಪ್ಪು ಹಾಕಿದಾಗ ಹಾಲು ಮೊಸರಾದಾಗ ಹುಳಿಯಾಗಿದ್ದರೂ, ನಂತರ ತುಪ್ಪವಾದಾಗ ಸಿಹಿಯಾಗುವುದು. ಹಾಗೆ ಸಾಧಕ ಮೊದಲು ಮಾತನಾಡುವನು, ಜ್ಞಾನಿಯಾದಾಗ ಶಬ್ದ ಮುಗ್ಧನಾಗುವನು, ತಾನು ಗಳಿಸಿದ ಜ್ಞಾನ - ಅನುಭಾವವನ್ನು ಇತರರಿಗೆ ನೀಡಲು ಮಾತನಾಡುವನಷ್ಟೇ? ನೀವು ಕೇಳುತ್ತಿದ್ದೀರಿ ಎಂದು ನಾನು ಮಾತನಾಡುತ್ತಿದ್ದೇನೆ ಅಷ್ಟೆ, ನನಗಾಗಿಯಲ್ಲ.'' ಅಲ್ಲಮ ಪ್ರಭುದೇವರ ಮುಖದ ಮೇಲೆ ಆನಂದದ ಹೊನಲು ಹರಿಯಿತು. ಎದ್ದು ನಿಂತು ಸಂಭ್ರಮದಿಂದ ಹೇಳಿದರು,

ಅಂಗ ಅಂಗನೆಯ ರೂಪವಲ್ಲದೆ
ಮನ ವಸ್ತು ಭಾವದಲ್ಲಿ ಬೆಚ್ಚಂತಿರ್ಪುದು
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲ
ಗುಹೇಶ್ವರ ಲಿಂಗದಲ್ಲಿ ಉಭಯನಾಮವಳಿದ ಎನ್ನಕ್ಕ !

ಅಲ್ಲಿಯವರೆಗೂ ಮಹಾದೇವಿ ಎಂಬ ಜನ್ಮನಾಮ ಹೊಂದಿದ್ದ ಆ ವೈರಾಗ್ಯನಿಧಿ ಅಕ್ಕ ಎಂಬ ಬಿರುದನ್ನು ಹೊಂದಿ ಅಕ್ಕಮಹಾದೇವಿ ಎಂಬ ಖ್ಯಾತಿ ಪಡೆದಳು. ಗುರು ಬಸವಣ್ಣನವರು ಮನತುಂಬಿ ಅಕ್ಕನ ಔನ್ನತ್ಯವನ್ನು ಕೊಂಡಾಡಿದರು.

ಎನ್ನ ಭಕ್ತಿಯ ಶಕ್ತಿಯೂ ನೀನೆ, ಎನ್ನ ಯುಕ್ತಿಯ ಶಕ್ತಿಯೂ ನೀನೆ
ಎನ್ನ ಮುಕ್ತಿಯ ಶಕ್ತಿಯೂ ನೀನೆ, ಮಹಾಘನದ
ನಿಲುವಿನ ಪ್ರಭೆಯನ್ನುಟ್ಟು ತಳುವಳಗಾದ ಸ್ವಯಂಜ್ಞಾನಿ,
ಲಿಂಗದೇವಯ್ಯನಲ್ಲಿ ಮಹಾದೇವಿಯಕ್ಕಗಳ ನಿಲವ
ಮಡಿವಾಳನಿಂದರಿದು ಬದುಕಿದೆನಯ್ಯಾ ಪ್ರಭುವೇ.

ಹಲವು ವರ್ಷಗಳ ಕಾಲ ಗುರು ಬಸವಣ್ಣನವರ ಸನ್ನಿಧಿಯಲ್ಲಿದ್ದು ಮಾರ್ಗದರ್ಶನ ಪಡೆದು ಅಕ್ಕಮಹಾದೇವಿ ಪ್ರಾಣಲಿಂಗ - ಭಾವಲಿಂಗ ಸಾಕ್ಷಾತ್ಕಾರದ ಅನುಭವ ಪಡೆದಳು. ಯೋಗದಲ್ಲಿ ಅತ್ಯುನ್ನತ ಸ್ಥಿತಿಗೆ ಏರಿ ಆಗಿತ್ತು. ಇನ್ನು ಇಚ್ಛಾಮರಣೆಯಾಗಿ ದೇಹವನ್ನು ಬಿಡುವ ಪ್ರಯೋಗ ಬಾಕಿ ಇತ್ತು. ಇದಕ್ಕೆ ಜನ ಸಂಚಾರವಿಲ್ಲದ ಅರಣ್ಯ ಬೇಕಾಗಿತ್ತು. ಅಂಥ ಸ್ಥಳ ಯಾವುದು? ಮತ್ತು ಇಚ್ಛಾಮರಣೆಯಾಗಿ ದೇಹ ಬಿಡುವುದು ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರ ನೀಡಿ ಅಲ್ಲಮಪ್ರಭುದೇವರು ಅಂಥ ಸ್ಥಳದ ನಿರ್ದೇಶನ ಮಾಡಿದರು. ಶ್ರೀಶೈಲದ ಆಚೆಗೆ ದುರ್ಗಮ ಅರಣ್ಯದಲ್ಲಿರುವ ಕದಳಿ ಬನದ ಗುಹೆಯೇ ಈ ಪ್ರಯೋಗಕ್ಕೆ ಸೂಕ್ತ ಸ್ಥಳ ಎಂಬುದನ್ನು ತಿಳಿಸಿದಾಗ ಅಕ್ಕಮಹಾದೇವಿ ಕದಳಿ ಬನಕ್ಕೆ ಹೊರಟು ನಿಂತಳು. ಆಗ ಅಕ್ಕ ಕೊಟ್ಟ ಒಂದು ದಿವ್ಯ ಸಂದೇಶ ಹೀಗಿದೆ.

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು; ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ
ಸಕ್ಕರೆಯನ್ನಿಕ್ಕಿದರು ನೋಡಾ ! ಇಂತಪ್ಪ ತ್ರಿವಿಧಾಮೃತವನು
ದಣಿಯಲೆರೆದು ಸಲಹಿದರೆನ್ನ, ವಿವಾಹ ಮಾಡಿದಿರಿ
ಸಯವಪ್ಪ ಗಂಡಂಗೆ ಕೊಟ್ಟರಿ, ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ, ಬಸವಣ್ಣ ಮೆಚ್ಚಲು
ಒಗೆತನವ ಮಾಡುವೆ. ಚನ್ನಮಲ್ಲಿಕಾರ್ಜುನನ (ಮಹಾದೇವಿಯಕ್ಕ ಪ್ರಿಯ
ಲಿಂಗದೇವನ) ಕೈವಿಡಿದು
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲು ತಾರೆನವಧರಿಸಿ,
ಮರಳಿ ಬಿಜಯಂಗೆಯ್ವುದು ನಿಮ್ಮೆಲ್ಲರಡಿಗಳಿಗೆ ಶರಣು ಶರಣಾರ್ಥಿ

ಶರಣರು ಭಾರವಾದ ಹೃದಯದಿಂದ ಅಕ್ಕಮಹಾದೇವಿಯನ್ನು ಬೀಳ್ಕೊಟ್ಟರು.

ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜವಣಿ
ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತ ಕ್ಷೇತ್ರ
ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪರುಷಮೃಗ
ಎಡಹುವ ಹರಳೆಲ್ಲ ಚಿಂತಾಮಣಿ, ಚನ್ನಮಲ್ಲಿಕಾರ್ಜುನಯ್ಯನ
ಮೆಚ್ಚಿನ ಗಿರಿಯ ಸುತ್ತಿ ನೋಡುತ್ತಾ ಬಂದು
ಕದಳಿಯ ಬನವ ಕಂಡೆ ನಾನು !

ಕಾಲ್ನಡಿಗೆಯಿಂದ ಪ್ರಯಾಣ ಮಾಡುತ್ತ ಧರ್ಮ ಬೋಧೆ ಮಾಡುತ್ತ, ಶ್ರೀಶೈಲವನ್ನು ದಾಟಿ ಕದಳಿಯ ವನವನ್ನು ಸೇರಿ ತಪಸ್ಸಿಗೆ ಅಕ್ಕಮಹಾದೇವಿ ಕುಳಿತಳು. ಆರಂಭದಲ್ಲಿ ಫಲಾಹಾರ ಮಾಡಿದರೂ ನಂತರ ಅದನ್ನೂ ತೊರೆದು ನಿರಾಹಾರ ವ್ರತ ಸ್ವೀಕರಿಸಿದಳು.

ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು ;
ಗಿಡಗಿಡದಪ್ಪದೆ ಬೇಡಿದೆನೆನ್ನಂಗಕ್ಕೆಂದು
ಅವು ನೀಡಿದವು ತಮ್ಮ ಲಿಂಗಕ್ಕೆಂದು
ಆನು ಬೇಡಿ ಭವಿಯಾದೆನು,
ಅವು ನೀಡಿ ಭಕ್ತರಾದೆವು, ಇನ್ನು ಬೇಡಿದೆನಾದರೆ
ಚನ್ನಮಲ್ಲಿಕಾರ್ಜುನಯ್ಯಾ(ಮಹಾದೇವಿಯಕ್ಕ ಪ್ರಿಯ ಲಿಂಗದೇವಯ್ಯ) ನಿಮ್ಮಾಣೆ.

ಕದಳಿ ಎಂಬುದು ತನು, ಕದಳಿಯೆಂಬುದು ಮನ
ಕದಳಿಯೆಂಬುದು ವಿಷಯಂಗಳು, ಕದಳಿಯೆಂಬುದು ಭವ ಘೋರಾರಣ್ಯ !
ಕದಳಿಯೆಂಬುದು ಗೆದ್ದು ತವೆಬದುಕಿ ಬಂದು, ಕದಳಿಯ ಬನದಲ್ಲಿ
ಭವಹರನ ಕಂಡೆನು. ಭವಗೆಟ್ಟು ಬಂದ ಮಗಳೆಂದು ಕರುಣದಿಂ
ತೆಗೆದು ಬಿಗಿದಪ್ಪಿದರೆ ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ
ಲಿಂಗದೇವಯ್ಯ)ನ ಹೃದಯ ಕಮಲದಲ್ಲಿ ಅಡಗಿದೆನು.

ಲಿಂಗವೆನ್ನೆ ಲಿಂಗೈಕ್ಯವೆನ್ನೆ ; ಸಂಗವೆನ್ನೆ, ನಿಸ್ಸಂಗವೆನ್ನೆ
ಆಯಿತೆನ್ನೆ, ಆಗದೆನ್ನೆ ; ನೀನೆನ್ನೆ, ನಾನೆನ್ನೆ
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗದೇವಯ್ಯ)ಲಿಂಗದಲ್ಲಿ
ಘನಲಿಂಗೈಕ್ಯವಾದ ಬಳಿಕ
ಮತ್ತೇನೂ ಎನಲೊಲ್ಲದೆ ಇದ್ದೆನು.

ಕುಂಡಲಿನಿ ಶಕ್ತಿಯನ್ನು ಮೇಲ್ಮುಖವಾಗಿ ಏರಿಸುತ್ತ ಹೋದಂತೆ ಅದು ಆಧಾರ, ಸ್ವಾಧಿಷ್ಠಾನ, ಮಣಿಪೂರಕಗಳನ್ನು ದಾಟಿ ಅನಾಹತದಲ್ಲಿ ನಿಂತಾಗ ಅಪಾರ ಆನಂದ ಪ್ರಾಪ್ತಿಯಾಯಿತು. ಮತ್ತೆ ಕುಂಡಲಿನಿಯು ವಿಶುದ್ಧಿಯನ್ನು ದಾಟಿದಾಗ ಮಾತು ಮೌನವಾಗಿ, ಆಜ್ಞಾ ಚಕ್ರದಲ್ಲಿ ನಿಂತಾಗ ಅದ್ಭುತ ಬೆಳಕು ಆವರಿಸಿತು. ಸಹಸ್ರಾರು, ಶಿಖಾ ಚಕ್ರಗಳನ್ನು ದಾಟಿ ಪಶ್ಚಿಮ ಚಕ್ರದಲ್ಲಿ ಪ್ರಾಣವಾಯು ವಿಸರ್ಜನೆ ಗೊಂಡಿತು. ಅಕ್ಕಮಹಾದೇವಿ ಉರಿಯುಂಡ ಕರ್ಪುರದಂತೆ ಬಯಲಲ್ಲಿ ಬಯಲಾದಳು, ಸಮುದ್ರವನ್ನು ಬೆರೆದ ನದಿಯಂತಾದಳು.

ಅಕ್ಕಮಹಾದೇವಿ ಸ್ತ್ರೀಕುಲದ ಆಶಾ ಜ್ಯೋತಿ. ಮಾಯೆ ಎಂದು ಮಹಿಳೆಗೆ ಹಣೆಪಟ್ಟಿ ಅಂಟಿಸಿದ್ದಾಗ ದುರ್ಬಲ ಮನಸ್ಸಿನ ಪುರುಷನಿಗೆ ಸ್ತ್ರೀಯು ಮಾಯೆಯಾದರೆ, ದುರ್ಬಲ ಮನಸ್ಸಿನ ಸ್ತ್ರೀಗೆ ಪುರುಷನೂ ಮಾಯೆಯೇ ಎಂದು ಘೋಷಿಸಿದಳು. ಸ್ತ್ರೀಗೆ ಮದುವೆ, ಸಂಸಾರ ಇವಿಷ್ಟೆ ಅನಿವಾರ್ಯ ಬಂಧನಗಳಲ್ಲ ದೃಢ ಸಂಕಲ್ಪದಿಂದ ಸಾಗಿದರೆ ವೈರಾಗ್ಯ ಪಥದಲ್ಲಿ ಯಶಸ್ವಿಯಾಗಿ ಸಾಗಬಹುದು ಎಂಬುದನ್ನು ಸಾಧಿಸಿ ತೋರಿಸಿದಳು. ನೊಂದ ಮನಸ್ಸಿಗೆ ಧ್ವನಿ ನೀಡುವಂತೆ ಬಸವಣ್ಣನವರು ಮಹಿಳೆಯರ ಪರವಾಗಿ ಸವಾಲು ಸ್ವೀಕರಿಸಿದಾಗ ಅವರ ಕನಸುಗಳನ್ನು ನನಸು ಮಾಡಿದ ವೀರ ವಿರಾಗಿಣಿ ಅಕ್ಕಮಹಾದೇವಿ.

ಜಗತ್ತಿನಲ್ಲಿ ಯಾವ ಧರ್ಮವೂ ಆಚಾರ್ಯ ಸ್ಥಾನವನ್ನು ಮಹಿಳೆಗೆ ಕೊಟ್ಟಿಲ್ಲ. ಬಸವ ಗುರುವಿನ ಸಂವಿಧಾನವು ಅಕ್ಕಮಹಾದೇವಿಗೆ ಆಚಾರ್ಯ ಸ್ಥಾನವನ್ನು ಕೊಟ್ಟಿದೆ. ಅಕ್ಕನ ವಚನಗಳು ಧರ್ಮ ಸೂತ್ರವಾಗಿವೆ ಎಂದರೆ ಉತ್ಪ್ರೇಕ್ಷೆಯಲ್ಲ. ಹೀಗಾಗಿಯೇ ಸಪ್ತಗಣಾಧೀಶರ ಸಾಲಿನಲ್ಲಿ ಅಕ್ಕಮಹಾದೇವಿ ಸೇರ್ಪಡೆಯಾಗಿದ್ದಾಳೆ. ಅಕ್ಕನ ಜೀವನ ಮತ್ತು ಸಾಧನೆ ಮಹಿಳೆಯರಿಗೆ ಕೈದೀವಿಗೆ ಮಾತ್ರವಲ್ಲ ಇಡೀ ಮಾನವ ಕುಲಕ್ಕೆ ಮಾರ್ಗದರ್ಶನ ಮಾಡುವ ಸೂತ್ರಗಳಾಗಿವೆ.

ಮಂಗಲ ಗೀತೆ

ಜಯತು ಜಯತು ಮಹಾದೇವಿ ಜಗನ್ಮಾತೆ ಪಾಹಿಮಾಂ
ಜಯತು ಜಯತು ಶಿವಭಾಮೆ ಜ್ಞಾನನಿಧಿ ರಕ್ಷಮಾಂ ॥ ಪ ॥

ಮನುಕುಲಕೆ ಮುಕುಟಮಣಿ ಆದೆ ನೀನು ತಾಯಿಯೆ
ಹೆಣ್ಣು ಕುಲಕೆ ಮುಮ್ಮಾರ್ಗವ ದಿಟ್ಟತನದಿ ತೋರ್ದೆಯೆ
ಜ್ಯೋತಿಮಯಿ ನೀತಿವಿದೆ ಖ್ಯಾತಿಪೂರ್ಣ ಮೂರ್ತಿಯೆ
ಮಾತೃಭಾವಿ ಪ್ರೀತಿನಿಧಿ ಕವಿಕೋಗಿಲೆ ಜ್ಞಾನಿಯೆ ॥ 1 ॥

ಉಡುತಡಿಯಲಿ ತೊರೆಯಾಗಿ ಉಗಮಗೊಂಡೆ ಮಾತೆಯೆ
ಎಡಬಿಡದೆ ಹರಿದೆಯಮ್ಮ ಬಸವ ಪಾದ ಸಂಗಮಕೆ।
ಶರಣ ಸಂಗಿ ಮಂಗಳಾಂಗಿ ಹರಿದೆ ನೀನು ಕದಳಿಗೆ
ಬೆರೆದೆಯಲ್ಲಿ ಮುದದಿಂದ ಲಿಂಗದೇವ ಶರಧಿಯಲ್ಲಿ ॥ 2 ॥

ಉಟ್ಟ ಸೀರೆ ಸೀಳುತಲಿ ತೊಟ್ಟ ತೊಡಿಗೆ ಮುರಿಯುತಲಿ
ಬಿಟ್ಟೆ ನೀನು ಬಿಡುಮುಡಿಯ ಕೊಟ್ಟೆ ಮೃಡಗೆ ತನುಮನವ
ಕುಂಡಲಿಯ ಸರ್ಪನು ತುಂಡಮೇಲಕೆ ತೆಗೆಯೆ
ಮಂಡಲವು ಬೆಳಕಾಗಿ ಜ್ಯೋತಿಯಲ್ಲಿ ಬಯಲಾದೆ ॥ 3 ॥

ಹೆಣ್ಣು ಮಾಯೆ ಎಂಬುವರ ಶಿರವು ಕೆಳಗೆ ಬಾಗುವಂತೆ
ಚಿನ್ಮಯ ನಿಲುವಿನಿಂದ ಸ್ತ್ರೀಕುಲಕೆ ಕಲಶವಾದೆ
ಶರಣ ಧರ್ಮ ಮಣಿಯಾಗಿ ಮೆರೆಯುತ್ತಿಹೆ ಜ್ಞಾನಮಯಿ
ವಿರಕ್ತಿ-ಭಕ್ತಿ ಸಂಗಮದಿ ಸಚ್ಚಿದಾನಂದ ಸತಿ ॥ 4 ॥

6. ಪಾರಾಯಣಕ್ಕೆ ಮೊದಲು ಅಕ್ಕನಾಗಲಾಂಬಿಕಾ ಪೂಜೆ

ಅಕ್ಕನಾಗಮ್ಮನನು ಚೊಕ್ಕ ಮನದಿಂ ನೆನೆದು
ಅಕ್ಕರೆಯ ತೋರಲಿಕೆ ಬೇಡಿಕೊಂಬೆ ॥ಪ॥
ವರಗುರು ಬಸವನ ಪ್ರೇಮದ ಸೋದರಿಯೆ
ಗುರು ಚನ್ನ ಬಸವನ ಮಮತೆಯ ಮಾತೆಯೆ ॥ ಅ.ಪ ॥

ಮಂಡಿಗೆಯ ಮಾದರಸ ಮಾದಲಾಂಬೆಯ ಪುತ್ರಿ
ಸದ್ಭಕ್ತಿ ಸಂಪನ್ನೆ ಸುಜ್ಞಾನ ಮೂರುತಿಯೆ
ಅನುಜ ಬಸವರಸನ ಸ್ಫೂರ್ತಿಸಿದ ಚೇತನವೆ
ತನುಜ ಚನ್ನಬಸವನ ರೂಪಿಸಿದ ಮಹಾಂತಳೆ ॥ 1 ॥

ಶಿವದೇವ ಪತ್ನಿಯೆ ಶರಣ ಸಂದೋಹದ ತಾಯಿ
ಮಹಾಮನೆಗೆ ಬೆಳಕಾದ ದಾಸೋಹ ಮೂರ್ತಿಯೆ
ಅಶ್ವಾರೋಹಿಯಾಗಿ ನಾಡಿನಲಿ ಸಂಚರಿಸಿ
ಧರ್ಮಪ್ರಸಾರ ಗೈದ ಸುಜ್ಞಾನ ನಿಧಿಯೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಖಡ್ಗವನು ನೀ ಧರಿಸಿ ಶತ್ರುಗಳ ಮರ್ದಿಸಿದೆ
ಉಳಿವೆಯ ಕಾನನದಿ ಸಾಹಿತ್ಯವನ್ನಿಟ್ಟು
ಧರ್ಮವಂ ರಕ್ಷಿಸಿದ ಶ್ರೀವೀರ ರಮಣಿ ॥ 3 ॥

ಮಲೆನಾಡ ಸೆರಗಲಿಹ ತರೀಕೆರೆಯ ಬಳಿಯಲಿ
ಉರಿಯುಂಡ ಕಪ್ಪುರದೊಲು ಬಯಲಾದ ಶರಣೆ
ಎಂದೆಂದು ನೀ ನಮಗೆ ಸ್ಫೂರ್ತಿಯಂ ಚೇತನ
ವಂದಿಪೆನು ನಾ ನಿನಗೆ ಸಚ್ಚಿದಾನಂದ ಮಂಗಲೆ ॥ 4 ॥

6. ವೀರ ಮಾತೆ ಅಕ್ಕನಾಗಲಾಂಬಿಕೆಯ ಜೀವನ ಚರಿತ್ರೆ

'ಧೀರ ಶರಣ ಮಾತೆ' ಎಂದೇ ಪ್ರಖ್ಯಾತಿ ಹೊಂದಿದ 12ನೇ ಶತಮಾನದ ಸ್ತ್ರೀಕುಲದ ಜ್ಯೋತಿ ಅಕ್ಕನಾಗಲಾಂಬಿಕೆ ತನ್ನ ಪ್ರಾಣವನ್ನೇ ಒತ್ತೆ ಇಟ್ಟು ವಚನ ಸಾಹಿತ್ಯವನ್ನು ಸಂರಕ್ಷಿಸಿದ ಇನ್ನೋರ್ವ ಮಹಾನ್ ವೀರ ವನಿತೆ. ಅಕ್ಕನಾಗಲಾಂಬಿಕೆ ಕ್ರಾಂತಿಪುರುಷ ಬಸವಣ್ಣನವರ ಹಿರಿಯ ಸಹೋದರಿ. ಅಂದಿನ ಸಮಾಜದಲ್ಲಿ ಅಸಮಾನತೆಯ ವಿರುದ್ಧ ಹೋರಾಡಲು ಬಸವಣ್ಣನವರನ್ನು ಅಸಾಮಾನ್ಯ ವಿಚಾರವಾದಿಯನ್ನಾಗಿ ರೂಪಿಸಿದ ಕರ್ತೃಶಕ್ತಿ, ಅಕ್ಕನಾಗಲಾಂಬಿಕೆ, ಅವ್ವೆ ನಾಗಾಯಿ, ನಾಗಲಾಂಬೆ, ಅಕ್ಕನಾಗಾಯಿ, ನಾಗಮ್ಮ, ಅಕ್ಕನಾಗಮ್ಮ, ನಾಗಲೆ - ಮುಂತಾದ ಪರ್ಯಾಯ ಹೆಸರುಗಳಿಂದ ಕರೆಯಲ್ಪಟ್ಟಿದ್ದಾರೆ.

ಭಾರತ ಭೂಮಿಯ ದಕ್ಷಿಣ ಭೂಭಾಗದಲ್ಲಿರುವ ಕನ್ನಡ ನಾಡಿನ ಉತ್ತರ ದೇಶ. ಅಲ್ಲಿಯ ಇಂಗಳೇಶ್ವರದ ಸಮೀಪದ ಊರು ಬಾಗೇವಾಡಿ. ಈ ಬಾಗೇವಾಡಿಯ ವಿಪ್ರ ಪ್ರಮುಖ ಮಂಡಿಗೆಯ ಮಾದಿರಾಜ. ಆತನ ಧರ್ಮಪತ್ನಿ ಮಾದಲಾಂಬಿಕೆ. ಇವರ ಚೊಚ್ಚಲ ಮಗಳು ನಾಗಮ್ಮ. ತಂದೆ - ತಾಯಿ ಈಕೆಗೆ ನೀನು ಗಂಡಾದರೂ ಆಗಬಾರದಿತ್ತೆ? ಹುಟ್ಟಿದ ಮನೆ ಬಿಟ್ಟು ಕೊಟ್ಟ ಮನೆಗೆ ಹೋಗುವವಳು ಎಂದು ಮೆಚ್ಚುವಂತಹ ಧೈರ್ಯವಂತೆ. ನಂತರ ತಂದೆ - ತಾಯಿಯರ ಆಶೋತ್ತರ ನೆರವೇರಿಸುವಂತೆ ನಂದೀಶ್ವರನ ಅನುಗ್ರಹದಿಂದ ಗಂಡು ಮಗುವಿನ ಜನನವಾಯಿತು. ಆ ಶಿಶುವಿಗೆ ಬಸವರಸ ಎಂದು ನಾಮಕರಣ ಮಾಡಿದರು. ಬಸವರಸ ಬಿದಿಗೆಯ ಚಂದ್ರಮನಂತೆ ಬೆಳೆದನು. ಇಂಗಳೇಶ್ವರದಲ್ಲಿದ್ದ ಮಾದಲಾಂಬಿಕೆಯ ತಾಯಿ ಮುತ್ತಜ್ಜಿ ಸಮಾಜದಲ್ಲಿ ನಡೆಯುತ್ತಿದ್ದ ಅನೇಕ ಬಗೆಯ ಸ್ತ್ರೀ ಶೋಷಣೆ ಕುರಿತು ಆಗಾಗ ನಿಟ್ಟುಸಿರು ಬಿಟ್ಟು ಮೊಮ್ಮಕ್ಕಳ ಮುಂದೆ ಹೇಳುತ್ತಿದ್ದಳು. ಇಂಗಳೇಶ್ವರದ ಹೊರಗೆ ಇದ್ದ ಒಂದು ಗುಡ್ಡದಲ್ಲಿ ಜಡೇ ಸಿದ್ಧಮುನಿಗಳು ವಾಸವಾಗಿದ್ದರು. ಮುತ್ತಜ್ಜಿ ಮೊಮ್ಮಕ್ಕಳನ್ನು ಕರೆದುಕೊಂಡು ಅಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಈ ಯೋಗಿಗಳ ದಿವ್ಯ ಸನ್ನಿಧಿಗೆ ಹೋಗುತ್ತಿದ್ದಳು. ಅಕ್ಕನಾಗಲಾಂಬಿಕೆಯ ಅಧ್ಯಾತ್ಮಿಕ ಆಸಕ್ತಿ ಎಷ್ಟು ತೀವ್ರವಾಯಿತೆಂದರೆ ''ನಾನು ಮದುವೆಯ ಬಂಧನಕ್ಕೆ ಒಳಗಾಗದಂತೆ ನೋಡಿಕೋ, ನೀನು ಸಾಧಿಸಲಾಗದ್ದನ್ನು ನಾನು ಸಾಧಿಸುವೆ ''ಎಂದು ಅಜ್ಜಿಗೆ ದುಂಬಾಲು ಬಿದ್ದಳು. ''ಈ ಸಂಸಾರದಲ್ಲಿ ಏನಿದೆ? ಸ್ತ್ರೀ ಒಂದು ಮೂಕ ಎತ್ತು; ದುಡಿಯುವುದೇ ಆಕೆಯ ಕರ್ಮ'' ಎಂಬುದು ಮುತ್ತಜ್ಜಿಯ ಮಾತಾದರೆ, ಬಾಲಿಕೆ ಕನ್ಯೆಯಾಗುವ ಮುನ್ನವೇ ಅರ್ಥಾತ್ ಮೈನೆರೆಯುವುದಕ್ಕಿಂತ ಮೊದಲೇ ಬ್ರಹ್ಮಪುರಿಯ ಶಿವಸ್ವಾಮಿಯ ಜೊತೆ ನಾಗಲಾಂಬಿಕೆಯ ಮದುವೆ ನಡೆಯಿತು. ಇನ್ನೂ ಚಿಕ್ಕವಳಿದ್ದ ಕಾರಣ ತವರು ಮನೆಯಲ್ಲಿಯೇ ಇರುತ್ತಿದ್ದಳು. ಮಗಳು ಮೈನೆರೆದಾಗ ಅಜ್ಜಿಯ ಮನೆಯಲ್ಲಿ ವಿಶೇಷ ಕಾರ್ಯಕ್ರಮ ನಡೆಯಿತು. ಗಂಡನ ಮನೆಗೆ ಹೋಗುವ ದಿನ ಬಂದಿತು. ಅಕ್ಕನ ಆಳವರಿಯದ ದುಃಖ ಬಸವರಸನನ್ನು ಮಥಿಸುತ್ತಿತ್ತು. ಅಕ್ಕನು ತಮ್ಮನಾದ ಬಸವರಸನಿಗೆ ''ಹೆಣ್ಣಿಗೂ ಮನಸ್ಸಿದೆ, ಆತ್ಮವಿದೆ, ಬುದ್ಧಿಯಿದೆ ಅಂತ ತೋರಿಸಿಕೊಟ್ಟು, ತನ್ನ ಆಕಾಂಕ್ಷೆಗೆ ತಕ್ಕಂತೆ ಬಾಳನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡು. ಇದೇ ನೀನು ನನಗೆ ಕೊಡುವ ದೊಡ್ಡ ಕೊಡುಗೆ ''ಎಂದು ಹೇಳಿ ಗಂಡನ ಮನೆಗೆ ಹೋದಳು.

ಸೋದರತ್ತೆಯ ಗಂಡ ಸತ್ತಾಗ ಆಕೆ ಬಲವಂತವಾಗಿ ಕೂದಲನ್ನು ತೆಗೆಸಿಕೊಳ್ಳಬೇಕಾಗಿ ಬಂದಾಗ ಆಕೆಯ ಪ್ರತಿರೋಧ, ಅಳು, ಅಕ್ಕನ ಆಸೆ ಇವೆಲ್ಲವೂ ಬಸವರಸನನ್ನು ಚಿಂತನೆಗೆ ದೂಡಿದವು. ತಾನು ಉಪನಯನ ಮಾಡಿಸಿಕೊಳ್ಳಬೇಕಾಗಿ ಬಂದಾಗ ಅದನ್ನು ತಿರಸ್ಕರಿಸಿ ಮನೆಯಿಂದ ಹೊರಟು ಕೂಡಲ ಸಂಗಮಕ್ಕೆ ಆಗಮಿಸಿ ಅಲ್ಲಿ ಸಂಗಮೇಶ್ವರನ ಅರ್ಚಕರಾಗಿ ಇದ್ದರು.

ವೈಯಕ್ತಿಕವಾಗಿ ನಾಗಮ್ಮ ಸುಖಿಯಾಗಿರಲಿಲ್ಲ. ಅವಳಿಗೆ ಅಧ್ಯಾತ್ಮ ಜೀವನದಲ್ಲಿ ಆಸಕ್ತಿ. ಆದರೆ ಶಿವಸ್ವಾಮಿಗೆ ಅಧ್ಯಾತ್ಮದಲ್ಲಿ ಎಳ್ಳಷ್ಟೂ ಆಸಕ್ತಿಯಿಲ್ಲ. ಹೀಗಾಗಿ ಇಬ್ಬರ ಚಿಂತನ ಶೈಲಿಯೂ ಬೇರೆ ಬೇರೆ, ಬಸವರಸ ಒಂದು ಗಾಳಿಪಟದಂತೆ. ಅವನ ಜೊತೆ ಬಾಲಂಗೋಚಿಯಂತೆ ಸಹಾಯಕಳಾಗಿ ಇರಬೇಕೆಂಬುದು ಆಕೆಯ ಆಸೆ. ಈ ಕನಸು ನನಸಾಗುವ ಕಾಲ ಬಂದಿತು. ವಿಶ್ವದಾಕಾರದ ಇಷ್ಟಲಿಂಗವನ್ನು ಬಸವರಸರು ಕಂಡು ಹಿಡಿದರು. ಸ್ತ್ರೀ - ಪುರುಷ ಎಂಬ ಲಿಂಗಭೇದ, ಸಂಸಾರಿ - ಸನ್ಯಾಸಿ ಎಂಬ ಆಶ್ರಮ ಭೇದ ಇಲ್ಲದೆ ಎಲ್ಲರೂ ಇಷ್ಟಲಿಂಗವನ್ನು ಪೂಜಿಸಬಹುದೆಂಬ ಮಾತು ಕೇಳಿ ನಾಗಲಾಂಬಿಕೆ ಬಹು ಸಂತೋಷಗೊಂಡಳು. ಅಕ್ಕನಾಗಮ್ಮ ದೀಕ್ಷೆ ಪಡೆದು ಅಧ್ಯಾತ್ಮ ಜೀವನದಲ್ಲಿ ಕಾಲಿಡುತ್ತಾಳೆ. ''ಭುವನದ ಭಾಗ್ಯ ನೀನು ಬಸವೇಶಾ! ದೇವನೇ ನಿನ್ನ ಬೆಂಗಾವಲಾಗಿ ನಿಲ್ಲುತ್ತಾನೆ'' ಎಂದು ಗುರುಗಳು ಹರಸಿ ಬಸವರಸರನ್ನು ಮಂಗಳವೇಡೆಗೆ ಕಳಿಸುತ್ತಾರೆ. ಮುಂದೆ ಅಕ್ಕನ ಒತ್ತಾಯದ ಮೇರೆಗೆ ವೈವಾಹಿಕ

ಜೀವನದಲ್ಲಿ ಕಾಲಿಡುತ್ತಾರೆ. ಮದುವೆ ಮುಗಿಸಿ ಶಿವಸ್ವಾಮಿ ನಾಗಾಯಿಗೆ ಬ್ರಹ್ಮಪುರಿಗೆ ಹೊರಡಲು ಹೇಳುತ್ತಾನೆ. ಆದರೆ ಉಸಿರು ಕಟ್ಟಿಸುವ ವಾತಾವರಣದಿಂದ ಹೊರಬಂದಿದ್ದ ಆಕೆ ನಾನಿನ್ನು ಅಲ್ಲಿಗೆ ಬರಲಾರೆ; ಹಲ್ಲುಗಳ ಮಧ್ಯೆ ಇರುವ ನಾಲಿಗೆಯಂತೆ ಇಷ್ಟು ದಿವಸ ಸಂಸಾರ ಬಂಧನದಲ್ಲಿ ಕಾಲ ಕಳೆದೆ. ಆ ಜೀವನ ನನಗಿನ್ನು ಬೇಡ, ಬಸವೇಶನ ಕಾರ್ಯದಲ್ಲಿ ಶ್ರೀಗಂಧದಂತೆ ಸವೆದು, ಸಾರ್ಥಕವಾಗುವೆ. ನನ್ನ ಪಾಡಿಗೆ ನನ್ನನ್ನು ಬಿಡಿ; ಯಾರನ್ನಾದರೂ ವಿವಾಹವಾಗಿ ಸುಖವಾಗಿರಿ'' ಎಂದು ಹೇಳಿದಳು.

ಸುಮಾರು 5 ವರ್ಷಗಳ ಕಾಲ ಮಂಗಳವೇಡೆಯಲ್ಲಿದ್ದ ಬಸವಣ್ಣನವರು ನಂತರ ತಮ್ಮ ಪರಿವಾರದೊಂದಿಗೆ ಕಲ್ಯಾಣಕ್ಕೆ ಸಾಗಿದರು. ಅಲ್ಲಿಯೇ ಅನುಭವ ಮಂಟಪ ಕಟ್ಟಿದರು. ಶೂನ್ಯಪೀಠದ ಪ್ರಥಮ ಅಧಿಕಾರಿಯಾಗಿ ಅಲ್ಲಮಪ್ರಭುಗಳು ಪೀಠಾರೋಹಣ ಮಾಡಿದರು.

ಸುಮಾರು ಹದಿನೇಳು ವರ್ಷಗಳು ಕಳೆದವು. ಒಂದಾನೊಂದು ದಿನ ಶಿವಸ್ವಾಮಿ ಕಲ್ಯಾಣಕ್ಕೆ ಬಂದನು. ಕಲ್ಯಾಣದಲ್ಲಿನ ಮಹತ್ತರ ಬದಲಾವಣೆಗಳನ್ನು, ಸಾಧನೆಗಳನ್ನು ಕಂಡು ಮೂಕ ವಿಸ್ಮಿತರಾದನು. ಶಿವಸ್ವಾಮಿ ಲಿಂಗಾಯತ ದೀಕ್ಷೆ ಪಡೆದು ಶಿವದೇವಯ್ಯನಾಗಿ ನಾಮಾಂತರ ಹೊಂದಿದನು.

ಹಿಂದಿನ ಶಿವಸ್ವಾಮಿಗೂ ಇಂದಿನ ಶಿವದೇವಯ್ಯನಿಗೂ ಬಹಳ ಅಂತರ ಕಾಣಬರುತ್ತಿತ್ತು. ಲೌಕಿಕ ವೃತ್ತಿಗಳಡಗಿ ಪಾರಮಾರ್ಥಿಕ ಆಸಕ್ತಿ ಪಡಿ ಮೂಡಿತು. ಈ ಬದಲಾವಣೆ ಕಂಡು ಧರ್ಮಪಿತ ಬಸವಣ್ಣನವರು ಮತ್ತು ಅಕ್ಕನಾಗಲಾಂಬಿಕೆ ಅತೀವ ಆನಂದ - ಆಶ್ಚರ್ಯಪಟ್ಟರು. ಮಹಾಮನೆಯ ದಾಸೋಹಶಾಲೆಯ ನಿರ್ವಹಣೆಯಲ್ಲಿ ಶಿವದೇವಯ್ಯ ನಾಗಲಾಂಬಿಕೆಗೆ ಹೆಗಲುಕೊಟ್ಟನಲ್ಲದೆ ಬರುವ- ಹೋಗುವ ಶರಣರ ಸತ್ಕಾರದ ಹೊಣೆಯನ್ನು ಹೊತ್ತನು. ಸ್ವಭಾವತಃ ಕಡಿಮೆ ಮಾತನಾಡುವ, ತನ್ನ ಪಾಡಿಗೆ ತಾನು ಕರ್ತವ್ಯವನ್ನು ನಿರ್ವಹಿಸುವ, ಪ್ರಚಾರ ಬಯಸದ ಪರಿಶ್ರಮಿಯಾಗಿ ಮಹಾಮನೆಯ ಸೇವಕನಾದ. ದಿನ ನಿತ್ಯ ನಡೆಯುತ್ತಿದ್ದ ಪ್ರಸಾದ ವ್ಯವಸ್ಥೆಗೆ ಅಗತ್ಯವಿರುವ ಸಾಮಾನು ಸರಂಜಾಮು ಕೊಳ್ಳುವ ಹೊಣೆಗಾರಿಕೆ ಸಹ ಶಿವದೇವಯ್ಯನ ಮೇಲೆಯೇ ಬಿದ್ದಿತು.

ಡೋಹರ ಕಕ್ಕಯ್ಯ - ಭಿಷ್ಟಾದೇವಿ ದಂಪತಿಗಳು ಒಂದು ದಿವಸ ನಾಗಲಾಂಬಿಕೆ - ಶಿವದೇವಯ್ಯನವರನ್ನು ಪೂಜೆ - ಪ್ರಸಾದಗಳಿಗೆ ಆಹ್ವಾನಿಸಿದರು. ಪ್ರಸಾದದಾರೋಗಣೆ ಮಾಡಿಸಿ, ಸತ್ಕರಿಸಿದರು. ಮಹಾಮನೆಗೆ ಬೆಳಕಾಗುವ ಮಗ ಹುಟ್ಟಲೆಂದು ವಯೋವೃದ್ಧ ಕಕ್ಕಯ್ಯ ದಂಪತಿಗಳು ಹಾರೈಸಲು ಮರೆಯಲಿಲ್ಲ.

ಮಹಾಮನೆಯಲ್ಲಿ ಹರುಷದ ಸುದ್ದಿ ಹರಡತೊಡಗಿತ್ತು. ಎಲ್ಲರ ಪ್ರೀತಿಪಾತ್ರ ಅವ್ವ, ಮಹಾಮನೆಯ ಮಹಾತಾಯಿ ನಾಗಲಾಂಬಿಕೆಯು ಗರ್ಭವತಿಯಾದ ಸುದ್ದಿಯೇ ಈ ವಾರ್ತೆಯ ಕೇಂದ್ರಬಿಂದುವಾಗಿದ್ದಿತು. ಅಕ್ಕನಾಗಲಾಂಬಿಕೆಗೆ 8 ತಿಂಗಳಾದಾಗ ಗರ್ಭಲಿಂಗಧಾರಣ ಸಂಸ್ಕಾರವು ಸೀಮಂತದೊಡನೆ ನಡೆಯಿತು. ಧರ್ಮಪಿತ ಬಸವಣ್ಣನವರು ಒಡಲೊಳಗಿದ್ದ ಶಿಶುವು ಮಹಾ ಜ್ಞಾನಿಯಾಗಿ, ಶಿವಪ್ರಸಾದದ ಸಾಕಾರವಾಗಿ ಇಳೆಗೆ ಬರಲೆಂದು ಸಂಕಲ್ಪಿಸಿ ನಾಗಲಾಂಬಿಕೆಗೆ ಭಸ್ಮವನ್ನು ಧರಿಸಿದರು. ಇಷ್ಟಲಿಂಗ ಧರಿಸಿ, ಮಂತ್ರೋಪದೇಶ ಮಾಡಿದರು. ಯಾವುದೇ ಒಬ್ಬ ವ್ಯಕ್ತಿಯ ಗುಣ, ಸ್ವಭಾವ ನಿರ್ಧಾರವಾಗುವುದು ಹುಟ್ಟಿ ಬಂದ ಮೇಲಲ್ಲ, ತಾಯಿಯ ಗರ್ಭದಲ್ಲಿ ನೆಲೆ ನಿಂತಾಗಲೇ! ಮಗುವು ತಾಯಿಯ ಮೂಲಕ ಆಹಾರವನ್ನು ಸ್ವೀಕರಿಸುವಂತೆ ಧರ್ಮವನ್ನು ಸಹ ಸ್ವೀಕರಿಸಬೇಕೆಂಬ ಈ ಸಂಸ್ಕಾರವು ಬಹು ಅರ್ಥಗರ್ಭಿತವಾದುದು ಎಂದು ಮಾದರಿಯಾಗಿ ಮಾಡಿ ತೋರಿಸಿದರು.

ನಂದನ ನಾಮ ಸಂವತ್ಸರದ ಕಾರ್ತಿಕ ಶುದ್ಧ ಪ್ರತಿಪದೆ, ದೀವಳಿಗೆಯಂದು ಅವ್ವೆ ನಾಗಾಯಿಯ ಗರ್ಭ ಸಂಜಾತ, ಅಯ್ಯ ಶಿವದೇವನ ಮಮತೆಯ ಪುತ್ರ ಚನ್ನಬಸವಣ್ಣನ ಜನನವಾಯಿತು. ಹುಟ್ಟಿದ ತಕ್ಷಣವೇ ಶರಣೆಯರು ತಾಯಿ ಮಗುವನ್ನು ಮೀಯಿಸಿದರು. ಕಂದನಿಗೆ ಪೂಜ್ಯ ಗುರು ಬಸವಣ್ಣನವರು ಭಸ್ಮಧರಿಸಿ, ಇಷ್ಟಲಿಂಗಧಾರಣ ಮಾಡಿ, ಷಡಕ್ಷರಿ ಮಂತ್ರೋಪದೇಶ ಮಾಡಿ, ಲಿಂಗತೀರ್ಥದ ಹನಿಯನ್ನು ಬಾಯೊಳಕ್ಕೆ ಹಾಕಿದ ಬಳಿಕ ತಾಯಿಯು ಹಾಲೂಡಿಸಿದಳು.

ಮಗುವಿಗೆ ಚನ್ನಬಸವಣ್ಣ ಎಂದು ಹೆಸರಿಟ್ಟರು. ಬಾಲಕ ಚನ್ನಬಸವಣ್ಣ ಅದ್ಭುತ ಪ್ರಗತಿ ಸಾಧಿಸಿದ. ಎಲ್ಲ ದೃಷ್ಟಿಯಿಂದಲೂ ಸಮರ್ಥನು ತೇಜಸ್ವಿಯೂ ಆದುದು ಅಷ್ಟೇ ಅಲ್ಲ ವಯಸ್ಸಿಗೆ ಮೀರಿದ ಅಪ್ರತಿಮ ಜ್ಞಾನಿಯಾದ, ವೈರಾಗ್ಯದ ಅಗ್ನಿಕುಂಡವಾದ, ಪರಮ ಪ್ರಸಾದದ ಶಾಂತಿವನವಾದ. ಒಂದು ದಿವಸ ಧರ್ಮಪಿತರು ಲಿಂಗಯೋಗ ತ್ರಾಟಕ ಮಗ್ನರಾಗಿದ್ದರು. ಹತ್ತು ವರ್ಷದ ಬಾಲಕ ಅರಿವಿನ ಮನೆಯಲ್ಲಿ ಕುಳಿತು ಧರ್ಮಪಿತರನ್ನು ಮೌನವಾಗಿ ದಿಟ್ಟಿಸುತ್ತಿದ್ದ. ಬಹಿರ್ಮುಖರಾದ ಧರ್ಮಕರ್ತರು ಕೇಳಿದರು ''ಏನು ಚನ್ನಬಸವಣ್ಣ, ಏನಾದರೂ ಕೇಳುವುದಿದೆಯೇ?

``ನಾನು ತಾಯಿಯ ಗರ್ಭದಲ್ಲಿರುವಾಗಲೇ ವಿಭೂತಿ ಪಟ್ಟವ ಕಟ್ಟಿ, ಅವ್ವಗೆ ಆಶೀರ್ವದಿಸಿದಿರಿ. ಹುಟ್ಟಿದ ಬಳಿಕ ಲಿಂಗಧಾರಣೆ ಮಾಡಿ ಶುದ್ಧೀಕರಿಸಿದಿರಿ. ಇನ್ನು ಲಿಂಗದೀಕ್ಷೆಯನ್ನು ಮಾಡಿ ನನಗೆ ಅನುಗ್ರಹಿಸಿರಿ. ಗುರೂಪದೇಶವಿಲ್ಲದೆ ಆಯುಷ್ಯ ವ್ಯರ್ಥ. ನಿಮ್ಮ ಅನುಗ್ರಹದಿಂದ ಈಗ ಅಸಂಖ್ಯಾತರು ಶರಣ ಪುಂಗವರಾಗಿದ್ದಾರೆ....''

``ಓಹೋ ನಾನೊಬ್ಬರಿಗೆ ಉಪದೇಶವ ಮಾಡಲಮ್ಮೆನು. ಮುನ್ನಲಾದವರು ತಮ್ಮಿಂದ ತಾವಾದರು. ನೀನು ಸಾಮಾನ್ಯನಲ್ಲ, ಸ್ವಯಂಭು ಜ್ಞಾನಿ. ನಿನಗೆ ಉಪದೇಶ ನೀಡಬೇಕೆ?'' ``ಈ ರೀತಿ ಭಾವಿಸುವುದು ನಿಮ್ಮ ಹೃದಯ ವೈಶಾಲ್ಯ. ನನಗೆ ಬೇಕಾದುದು ಗುರು ಕಾರುಣ್ಯ. ತಾವೇ ಹೇಳಿಲ್ಲವೆ?

ಗುರು ವಚನವಿಲ್ಲದೆ ಲಿಂಗವೆಂದೆನಿಸದು
ಗುರು ವಚನವಿಲ್ಲದೆ ನಿತ್ಯವೆಂದೆನಿಸದು
ಗುರು ವಚನವಿಲ್ಲದೆ ನೇಮವೆಂದೆನಿಸದು
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ
ನಮ್ಮ ಲಿಂಗದೇವಾ ?

ಕಾಮಧೇನುವಿರುವಾಗ ನಾಡ ಹಸುವಿನ ಹಾಲನ್ನು ಯಾರಾದರೂ ಕುಡಿಯಲು ಇಚ್ಛಿಸುವರೆ? ಅಮೃತವು ಲಭ್ಯವಾದಾಗ ಬರಿಯ ಹಾಲಿಗೆ ಹಂಬಲಿಸುವರೆ? ನಾನು ತಾಯಿಯ ಹೊಟ್ಟೆಯಲ್ಲಿರುವಾಗಲೇ ನೀವು ಅನುಗ್ರಹಿಸಿ ಗುರುವಾಗಿ ಬಿಟ್ಟದ್ದೀರಿ. ಇನ್ನು ಯಾರನ್ನೇ ಆಗಲಿ ಗುರುವಾಗಿ ಸ್ವೀಕರಿಸಲು ನನ್ನ ಮನ ಒಪ್ಪುವುದೆ?''

``ನಿನ್ನ ಉತ್ಕಟ ಹಂಬಲಕ್ಕೆ ಮನಸೋತೆ ಚನ್ನಬಸವಣ್ಣಾ'' ಎಂದು ಶ್ರೀಗುರು ಬಸವಣ್ಣನವರು ಲಿಂಗದೀಕ್ಷೆಯನ್ನು ನೆರವೇರಿಸಿದರು. ಅಧ್ಯಾತ್ಮಿಕ ಶಕ್ತಿಯಿಂದ ಕಾರುಣ್ಯವನ್ನು ಅನುಗ್ರಹಿಸುವ ಗುರುವು, ಉತ್ಕಟ ಹಂಬಲದಿಂದ ಸ್ವೀಕರಿಸುವ ಶಿಷ್ಯ; ಅಮೋಘವಾದ ದೀಕ್ಷಾ ಕಾರ್ಯಕ್ರಮ. ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿ, ನೀಡಿ ಮಂತ್ರೋಪದೇಶವಾಗುತ್ತಲೇ ಮಿಂಚಿನ ಸಂಚಾರದ ಅನುಭವ ಪಡೆದ ಚನ್ನಬಸವಣ್ಣ ತನ್ಮಯತೆಯ ಆಳಕ್ಕೆ ಇಳಿದ. ಇಷ್ಟಲಿಂಗದಲ್ಲಿ ದೃಷ್ಟಿಯನ್ನು ನೆಟ್ಟು ನಿಲ್ಲಿಸುತ್ತಲೇ ಅನಂತತೆಯ ಆನಂದ ಸಮುದ್ರದಲ್ಲಿ ಸಕ್ಕರೆಯ ಗೊಂಬೆಯಂತೆ ಕರಗಿ ಹೋದ. ಆ ತನ್ಮಯತೆ ಕಂಡು ಬಸವ ಗುರುವು ನಿಬ್ಬೆರಗಾದರು.

“ಇಂದು ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತ್ತಯ್ಯಾ
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ
ಇದರ ಸಂಗಸುಖದನುಭಾವವನು ಲಿಂಗದೇವ ತಾನೆ ಬಲ್ಲ.”

ಪರಮಾತ್ಮಾ ಎಂತಹ ಚಿನ್ಮಯ ಮೂರ್ತಿ! ನಮ್ಮ ಕಣ್ಣೆದುರಿಗೇ ಹುಟ್ಟಿ ಬೆಳೆದ ಅವಿರಳ ಜ್ಞಾನಿ.'' ಪರಮ ಶಿಷ್ಯನನ್ನು ವಾತ್ಸಲ್ಯಪೂರ್ಣವಾಗಿ ದಿಟ್ಟಿಸುತ್ತಾ ಅವರೂ ಆನಂದಸರಸಿಯಲ್ಲಿ ವಿಹರಿಸಿದರು.

ಹೀಗೆ ಚನ್ನಬಸವಣ್ಣನವರು ಜ್ಞಾನ-ಭಕ್ತಿ-ವೈರಾಗ್ಯಗಳ ತ್ರಿವೇಣಿ ಸಂಗಮವಾದರು. ಧರ್ಮಪಿತ ಬಸವಣ್ಣನವರ ನಂತರದ ಜನಪ್ರಿಯತೆ ಚನ್ನಬಸವಣ್ಣನವರದೇ ಆಗಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ. ಅವರ ಹಿರಿಮೆ ಎಷ್ಟು ವಿಸ್ತೃತವಾಯಿತೆಂದರೆ ಶ್ರೀ ಸಿದ್ಧರಾಮೇಶ್ವರರಂತಹ ಮಹಾನ್ ಸಿದ್ಧಯೋಗಿಯು ಚನ್ನಬಸವಣ್ಣನವರಿಂದಲೇ ದೀಕ್ಷಾನುಗ್ರಹ ಪಡೆಯಬಯಸಿದರು. ವಯಸ್ಸಿನಲ್ಲಿ ಚನ್ನಬಸವಣ್ಣ 10-12 ವರ್ಷದ ಬಾಲಕನಿದ್ದರೂ ಆಗ ಸಿದ್ಧರಾಮೇಶ್ವರರು ವಯಸ್ಸಿನಲ್ಲಿ ಹಿರಿಯರಿದ್ದರೂ ಚನ್ನಬಸವಣ್ಣನವರಿಂದ ದೀಕ್ಷಾನುಗ್ರಹ ಪಡೆದುದು ಚನ್ನಬಸವಣ್ಣನವರ ಹಿರಿಮೆಯನ್ನು ಸಾರಿದಂತೆ, ಸಿದ್ಧರಾಮೇಶ್ವರರ ಗುಣಗ್ರಾಹಕ ದೃಷ್ಟಿಯನ್ನು ಋತಪಡಿಸುತ್ತದೆ. ಇಷ್ಟಲಿಂಗ ದೀಕ್ಷೆಯ ಮೂಲಕ ಲಿಂಗಯೋಗ ಪಥಕ್ಕೆ ಬಂದ ಸಿದ್ಧರಾಮೇಶ್ವರರು ನೂರಾರು ವಚನಗಳ ಮೂಲಕ ದೀಕ್ಷಾಗುರು ಚನ್ನಬಸವಣ್ಣನವರನ್ನು, ಧರ್ಮಗುರು ಬಸವಣ್ಣನವರನ್ನು, ಇನ್ನಿತರ ಶರಣರನ್ನು ಕೊಂಡಾಡಿದ್ದಾರೆ.

ಧರ್ಮಪಿತ ಬಸವಣ್ಣನವರು ಸಂಸ್ಥಾಪಿಸಿದ ಶೂನ್ಯ ಪೀಠದ ಪ್ರಥಮ ಅಧಿಕಾರಿ ಅಲ್ಲಮಪ್ರಭು, ದ್ವಿತೀಯರು ಚನ್ನಬಸವಣ್ಣನವರು, ಮೂರನೆಯವರು ಸಿದ್ಧರಾಮೇಶ್ವರರು. ಮಹಾಮನೆ, ಅನುಭವ ಮಂಟಪ ಈಗ ಜೇನುಗೂಡಿನಂತೆ ಕಾರ್ಯನಿರತವಾಗಿದ್ದವು. ಆಗ ಅಕ್ಕನಾಗಮ್ಮನ ಹೃದಯ ಆನಂದದಿಂದ ನಲಿನಲಿದಾಡಿತು. ಅನುಭವ ಮಂಟಪದ ಮಹಾ ಶಕ್ತಿಯಾಗಿ ಪರಮ ದಾಸೋಹ

ಮೂರ್ತಿಯಾಗಿ ಬಸವಣ್ಣನ ಕಾರ್ಯವಿಸ್ತಾರಕ್ಕೆ ಹೆಗಲೆಣೆಯಾಗಿ ದುಡಿದಳು. ಆಕೆ ತಾಯಿಯಾಗಿ ಬಸವ ಪರಿವಾರವನ್ನು, ಶರಣರ ಸಮೂಹವನ್ನು ನೋಡಿಕೊಳ್ಳುವವಳಾದಳು.

ಊಟಕ್ಕಿಕ್ಕುವ ಪರಮ ದಾಸೋಹಿ ಹೇಗೋ ಹಾಗೆ ಸ್ತ್ರೀ ಸಾಧಕಿಯರಿಗೆ ಮಾರ್ಗದರ್ಶನ ಮಾಡುವ ವ್ಯಕ್ತಿಯೂ ಆಗಿದ್ದಳು. ತಾನೀಗಾಗಲೇ ಪರಮ ಸುಖವನ್ನು ಪಡೆದವಳಾಗಿದ್ದಳು, ಪರವಸ್ತುವನ್ನು ನಂಬಿದವಳೂ ಆಗಿದ್ದಳು, ಬಸವಣ್ಣನ ಅಗಾಧ ಕಾರ್ಯದಲ್ಲಿ ದಕ್ಷ ಸಲಹೆಗಾರಳೂ, ಮಹಾಮನೆಯ ಆಡಳಿತಗಾರಳೂ ಆಗಿದ್ದಳು.

ಕಲ್ಯಾಣದಲ್ಲಿ ಕ್ರಾಂತಿ

ಇಂಥದೊಂದು ನಿರಂತರ ಪ್ರಗತಿ ನಡೆಯುತ್ತಿರುವಾಗಲೇ ಕಲ್ಯಾಣವು ಕ್ರಾಂತಿಯ ಕಣವಾಗುವ ಸನ್ನಿವೇಶ ಎದುರಾಯಿತು. ಪೂರ್ವಾಶ್ರಮದಲ್ಲಿ ಸಮಗಾರನಿದ್ದು, ಧರ್ಮ ಸಂಸ್ಕಾರ ಹೊಂದಿ ಶರಣನಾದ ಹರಳಯ್ಯನ ಮಗ ಮತ್ತು ಪೂರ್ವಾಶ್ರಮದಲ್ಲಿ ಬ್ರಾಹ್ಮಣನಿದ್ದು ಶರಣನಾದ ಮಧುವರಸನ ಮಗಳ ಮಧ್ಯೆ ವಿವಾಹ ಸಂಬಂಧ ಏರ್ಪಡಿಸಲು ಬಸವಾದಿ ಪ್ರಮಥರು ಮುಂದಾದರು. ವಿವಾಹವು ನೆರವೇರಿದಾಗ ಸಂಪ್ರದಾಯ ನಿಷ್ಠ ಜಾತಿವಾದಿಗಳು ಸಿಡಿದೆದ್ದರು. ಬಿಜ್ಜಳನಿಗೆ ಚಾಡಿ ಹೇಳಿ, ಮನಸ್ಸನ್ನು ಕಲಕಿದರು. ಧರ್ಮಪಿತ ಬಸವಣ್ಣನವರು ತತ್ವ ಭ್ರಷ್ಟ ರಾಜಕೀಯ ಒಲ್ಲೆನೆಂದು, ಪ್ರಧಾನಿಯ ಪಟ್ಟಕ್ಕೆ ರಾಜೀನಾಮೆ ನೀಡಿದರೂ ತೃಪ್ತರಾಗದ ಜಾತಿವಾದಿಗಳು ಬಸವಣ್ಣನಿಗೆ ಗಡಿಪಾರು ಶಿಕ್ಷೆ ವಿಧಿಸುವಂತೆ ಪ್ರೇರೇಪಿಸಿದರು. ಬಸವಣ್ಣನವರು ಆಜ್ಞೆಯನ್ನು ಸ್ವೀಕರಿಸಿ ರಾತ್ರೋರಾತ್ರಿ ಹೊರಡಬೇಕಾಯಿತು. ಸಮಾಜದ ಸಮೂಲಾಗ್ರ, ವೈಚಾರಿಕ ಪರಿವರ್ತನೆಯ ಕನಸು ಕಾಣುತ್ತಿದ್ದ ಶರಣರ ಕನಸುಗಳು ಬಸವಣ್ಣನ ನಿರ್ಗಮನದಿಂದ ನುಚ್ಚು ನೂರಾದವು. ಹರಳಯ್ಯ-ಮಧುವರಸ-ಶೀಲವಂತ ಮುಂತಾದವರನ್ನು ಬಂಧಿಸಿ, ಗುಪ್ತ ಕಾರ್ಯಾಚರಣೆಯ ಮೂಲಕ ಕಣ್ಣು ಕೀಳಿಸಿ, ಎಳೆಹೂಟೆ ಶಿಕ್ಷೆ ವಿಧಿಸಿ ಕೊಲ್ಲಲಾಯಿತು.

ವಚನ ಸಾಹಿತ್ಯದ ಸಂರಕ್ಷಣೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕೆಂಬ ನಿರೂಪವನ್ನು ಬಸವಣ್ಣನವರಿಂದ ನಿರ್ಗಮನದ ಸಮಯದಲ್ಲಿ ಪಡೆದಿದ್ದರಿಂದ ಅದರ ನೇತೃತ್ವವನ್ನು ನಾಗಲಾಂಬಿಕೆ ವಹಿಸಿದಳು. ವ್ಯಕ್ತಿಯು ಧರ್ಮವಂತನಾದರೆ ಸಾಲದು, ಧರ್ಮಕ್ಕಾಗಿ ದುಡಿಯಬೇಕು, ಪ್ರಸಂಗ ಬಂದರೆ ಧರ್ಮ ರಕ್ಷಣೆಗಾಗಿ ಹೋರಾಡಬೇಕು, ಮಡಿಯಬೇಕು ಎಂಬ ಗಣಾಚಾರವನ್ನು ಆಧರಿಸಿ, ಇತ್ತೀಚಿನ ಕೆಲವು ವರ್ಷಗಳಲ್ಲಿ ಶರಣರಿಗೆ ಶಸ್ತ್ರಾಭ್ಯಾಸ ಮಾಡಿಸಲಾಗುತ್ತಿತ್ತು. ಸ್ತ್ರೀಯರ ಮುಂದಾಳಾಗಿ ಅಕ್ಕನಾಗಮ್ಮ. ಪುರುಷರ ಮುಂದಾಳಾಗಿ ಮಡಿವಾಳ ಮಾಚಿದೇವರು ಕಾರ್ಯ ನಿರ್ವಹಿಸುತ್ತಿದ್ದರು. ಈ ಶಸ್ತ್ರವಿದ್ಯೆ ಅನ್ಯರ ಮೇಲೆ ಆಕ್ರಮಣ ಮಾಡಲಿಕ್ಕಲ್ಲ, ಅನ್ಯರ ದೌರ್ಜನ್ಯ ಮೇಲೆರಗಿದಾಗ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ. ಅದೀಗ ಸಂಕಷ್ಟ ಕಾಲದಲ್ಲಿ ಉಪಯೋಗಕ್ಕೆ ಬಂದಿತು. ಕೋಪೋದ್ರಿಕ್ತರು, ಚಾಲುಕ್ಯ ರಾಜನ ನಿಷ್ಠ ಸಾಮಂತರು ಬಿಜ್ಜಳನ ದೌರ್ಜನ್ಯ ಮತ್ತು ಸಿಂಹಾಸನದ ಅತಿಕ್ರಮಣದಿಂದ ನೊಂದವರು ಆದ ಜಗದೇವ ಮತ್ತು ಮಲ್ಲ ಬೊಮ್ಮಣ್ಣರು ದೀವಟಿಗೆಯವರ ವೇಷ ಧರಿಸಿ ಬಿಜ್ಜಳನನ್ನು ಕೊಂದಾಗ ಕಲ್ಯಾಣ ನಗರದಲ್ಲಿ ಅಲ್ಲೋಲ ಕಲ್ಲೋಲವಾಯಿತು. ಶರಣರು ಸಾಹಿತ್ಯವನ್ನು ಗಂಟುಮೂಟೆ ಕಟ್ಟಿಕೊಂಡು ಹೊರಟರು. ಒಂದು ಗುಂಪು ಸಹ್ಯಾದ್ರಿ ಗಿರಿಯ ಸಾಲಿನತ್ತ ಹೊರಟಿದ್ದು, ಅಕ್ಕನಾಗಮ್ಮನವರು-ಚನ್ನಬಸವಣ್ಣನವರು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರರಿಗೆ ಶೂನ್ಯ ಪೀಠದ ಮೂರನೆಯ ಅಧಿಕಾರಿಯನ್ನಾಗಿ ಪಟ್ಟಗಟ್ಟಿದರು. ಬಿಜ್ಜಳನ ಸೈನ್ಯದೊಡನೆ ಹೋರಾಡಲು ಶರಣರಿಗೆ ಸಾಧ್ಯವಿಲ್ಲದ ಕಾರಣ, ಬೆನ್ನಟ್ಟಬಹುದಾದ ಬಿಜ್ಜಳನ ಸೈನ್ಯದೊಡನೆ ಹೋರಾಡಲು ಸೈನ್ಯದ ನೆರವು ಕೇಳಿದರು. ಸಿದ್ಧರಾಮೇಶ್ವರರ ಪರಮ ಶಿಷ್ಯೆಯಾಗಿದ್ದ ರಾಣಿ ಚಾಮಲಾದೇವಿ ಸೈನ್ಯದ ನೆರವು ಕೊಟ್ಟಳು. ಇವರುಗಳು ಮುಂದೆ ನಡೆದು ಶರಣರ ಇನ್ನೊಂದು ತಂಡವನ್ನು ಕೂಡಿಕೊಂಡರು. ಅಕ್ಕನಾಗಮ್ಮ-ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ಸಾಹಿತ್ಯ ಮುಂದೆ ಸಾಗುತ್ತಿತ್ತು. ಈ ತಂಡದಲ್ಲಿ ಚನ್ನಬಸವಣ್ಣ, ಸೊಡ್ಡಳ ಬಾಚರಸ, ಕಿನ್ನರಿ ಬ್ರಹ್ಮಣ್ಣ, ಶಿವದೇವಯ್ಯ, ಡೋಹರ ಕಕ್ಕಯ್ಯ-ಭೀಷ್ಟಾದೇವಿ, ನುಲಿಯ ಚಂದಯ್ಯ, ರೇವಣ ಸಿದ್ಧರ ಮಗ ರುದ್ರಮುನಿ ಮುಂತಾದವರಿದ್ದರು. ಕಡಕೋಳ, ಗೊಡಚಿ, ಸತ್ತಿಗೇರಿ, ಸೊಗಲ ಮುಂತಾದಲ್ಲಿ ತಂಗುತ್ತಾ ಮುಂದೆ ನಡೆದರು. ಅಳಿಯ ಬಿಜ್ಜಳನು ಸೈನ್ಯವನ್ನು ತೆಗೆದುಕೊಂಡು ಶರಣರನ್ನು ಬೆನ್ನಟ್ಟಿದ. ಮೊದಲೂರೆಂಬಲ್ಲಿ ಪ್ರಪ್ರಥಮವಾಗಿ ಎರಡೂ ಗುಂಪುಗಳು ಹೋರಾಡಿದವು. ಮಡಿವಾಳ ಮಾಚಿದೇವರು ಅಪ್ರತಿಮ ಶೌರ್ಯ ತೋರಿ, ತಮ್ಮ ಪರಾಕ್ರಮ ಮೆರೆದರು. ಕಾದರವಳ್ಳಿಯ ಬಳಿ ಘೋರ ಕಾಳಗವಾದಾಗ ಶರಣರು ತುಂಬಾ ಘಾಸಿಗೊಂಡರು. ನಂತರ ಇಂದಿನ ಬೈಲಹೊಂಗಲದ ಸಮೀಪದಲ್ಲಿರುವ ಮುರುಗೋಡು

ಮತ್ತು ಸೊಗಲ ಗುಡ್ಡಗಳ ನಡುವಿನ ಪ್ರದೇಶದಲ್ಲಿ ಯುದ್ಧ ನಡೆಯಿತು. ಅಕ್ಕನಾಗಮ್ಮ ಎಲ್ಲರನ್ನೂ ಹುರಿದುಂಬಿಸುತ್ತ, ಖಡ್ಗ ಹಿಡಿದು ಹೋರಾಡುತ್ತ, ಅಶ್ವಾರೋಹಿಯಾಗಿ ಸಂಚರಿಸುತ್ತಿದ್ದಳು. ಅವರು ಇನ್ನೊಂದು ಉಪಾಯ ಹೂಡಿದರು. ಶರಣರಿಗೆ ಪ್ರಾಣಕ್ಕಿಂತಲೂ ಪ್ರಿಯವಾದುದು ವಚನ ಸಾಹಿತ್ಯ. ಅದನ್ನು ತೀವ್ರಗತಿಯಲ್ಲಿ ಮುಂದೆ ಸಾಗಿಸಲಿಕ್ಕೆ ಏರ್ಪಾಡು ಮಾಡಿ, ತಾವಿಲ್ಲಿ ಶತ್ರು ಸೈನ್ಯವನ್ನು ಎದುರಿಸುತ್ತಿದ್ದರು. ಕಾದರವಳ್ಳಿ ಕಾಳಗದಲ್ಲಿ ಬಿಜ್ಜಳನ ಸೈನ್ಯ ಮುಗ್ಧರ ಮೇಲೆ ಸಹ ಎರಗಿದಾಗ ಹರಳಯ್ಯನವರ ಧರ್ಮಪತ್ನಿ ಕಲ್ಯಾಣಮ್ಮ ಗಾಯಗೊಂಡಳು. ತಿಗಡಿ ಗ್ರಾಮಕ್ಕೆ ಚಿಕಿತ್ಸೆಗೆ ಕರೆದೊಯ್ಯಲಾಯಿತು. ಆಗ ಆಕೆ ಲಿಂಗ ಪೂಜೆಯಲ್ಲಿ ತಲ್ಲೀನಳಾಗಿ ಲಿಂಗೈಕ್ಯಳಾದಳು. ಶರಣರಿಗೆ ಶೋಕ - ಮೋಹಗಳಿಗೆ ಅವಕಾಶವಿರಲಿಲ್ಲ. ಸಮಾಧಿ ಮಾಡಲು ಕೆಲವರನ್ನು ಬಿಟ್ಟು ಉಳಿದವರು ಮುಂದೆ ಸಾಗಿದರು. ಮುರುಗೋಡಿನ ಬಳಿ ಕಾಳಗವನ್ನೆದುರಿಸುವ ಸಮಯಕ್ಕೆ ವರದಾನಿ ದಾನಮ್ಮ ಎಂಬ ಶರಣೆಯು ಶಸ್ತ್ರಧಾರಿ ರಾಹುತರೊಂದಿಗೆ ಬಂದು ಶರಣರ ರಕ್ಷಣೆಗೆ ನೆರವಾದಳು. ಈ ಭೀಕರ ಕಾಳಗದಲ್ಲಿ ಬಿಜ್ಜಳನ ಸೈನ ಸೋತಿತು. ಅವರು ಬಹಳ ದೂರ ಕ್ರಮಿಸಿ ಬಂದಿದ್ದರು. ಜೊತೆಗೆ ಈ ಒಳಗಾಗಲೇ ಸಾಕಷ್ಟು ಪ್ರಚಾರಗೊಂಡು ಗೋವೆಯ ಕದಂಬ ರಾಜರಂತಹವರನ್ನು ಅನುಯಾಯಿಗಳನ್ನಾಗಿ ಪಡೆದ ಬಸವ ಧರ್ಮ, ಈ ಭಾಗದಲ್ಲಿಯೂ ಹಬ್ಬಿತ್ತು. ಶರಣ ಧರ್ಮಕ್ಕೆ ಬಂದೆರಗಿದ್ದ ವಿಪತ್ತಿನ ಅರಿವನ್ನು ಅರಿತ ಜನ ಸಾಮಾನ್ಯರು ಶರಣರ ಬೆಂಬಲಕ್ಕೆ ನಿಂತರು. ಅನ್ನ ಪಾನಾದಿಗಳನ್ನು, ಶಸ್ತ್ರಾಸ್ತ್ರಗಳನ್ನು ಅಲ್ಲಲ್ಲಿಯ ಜನರೇ ಒದಗಿಸತೊಡಗಿದರು. ಹೀಗೆ ಶರಣರ ಬಲ ಹಿರಿದಾದಷ್ಟು ಬಿಜ್ಜಳನ ಸೈನ್ಯದ ಬಲ ಕುಂದತೊಡಗಿತು. ಬಿಜ್ಜಳನ ಸೈನ್ಯದ ಮುಂದಾಳುವಾಗಿದ್ದ ಅಳಿಯ ಬಿಜ್ಜಳ ರಣರಂಗದಲ್ಲಿ ಮೂರ್ಛೆ ಹೋದ. ಅವನನ್ನು ಕೈಸೆರೆ ಹಿಡಿದು ಶರಣ ಸೈನ್ಯದವರು ಅಕ್ಕನಾಗಮ್ಮನಿಗೆ ಒಪ್ಪಿಸಿದರು. ಅವನಿಗೆ ಎಚ್ಚರ ಬರಿಸಿದುದಲ್ಲದೇ ಅಕ್ಕನಾಗಮ್ಮನು ಶರಣಾಗತನಾದ ಅವನನ್ನು ಕ್ಷಮಿಸಿ, ವಾಪಸ್ಸು ಕಳಿಸಿದಳು. ಅವನು ಅಳಿದುಳಿದ ಸೈನ್ಯದೊಡನೆ ಕಲ್ಯಾಣದ ಕಡೆಗೆ ಸಾಗಿದ.

ಶರಣರು ಇಲ್ಲಿ ಸೈನ್ಯವನ್ನು ತಡೆಯುತ್ತಿರುವಾಗಲೇ ಅತ್ತ ಸಾಹಿತ್ಯವು ಸಾಗಿಸಲ್ಪಡುತ್ತಿತ್ತಷ್ಟೆ. ಅದು ಸಹ್ಯಾದ್ರಿಯ ಗುಪ್ತ ಸ್ಥಾನದಲ್ಲಿ ಸುರಕ್ಷಿತ ನೆಲೆ ಸೇರಿದ ವಿಷಯ ಅಕ್ಕನಾಗಮ್ಮ ಮುಂತಾದವರ ಕಿವಿ ತಲ್ಪಿದಾಗ ನೆಮ್ಮದಿಯ ಉಸಿರುಬಿಟ್ಟರು. ಹಾಗೆಯೇ ಶರಣರು ಅಲ್ಲಲ್ಲೇ ಬೀಡುಬಿಡುತ್ತಾ ಧರ್ಮ ಪ್ರಚಾರ ಮಾಡುತ್ತ ಮುಂದೆ ಸಾಗಿದರು.

ಉಳಿವೆಯಲ್ಲಿ ವಾಸ್ತವ್ಯ

ದುರ್ಗಮ ಕಾನನದ ಮಧ್ಯೆ ಬಯಲೊಂದನ್ನು ಕಂಡು, "ಅವ್ವಾ, ಉಳಿಯಲು ಇದು ಪ್ರಶಸ್ತ ತಾಣ; ನಾನಿಲ್ಲೇ ಉಳಿವೆ......" ಎಂದು ಚನ್ನಬಸವಣ್ಣನವರು ನೆಲೆಸಿದುದೇ ಮುಂದೆ ಉಳಿವೆಯಾಯಿತು. ಕಾಡನ್ನು ನಾಡನ್ನಾಗಿ ಪರಿವರ್ತಿಸಲು ಶರಣರು ಬದ್ಧ ಕಂಕಣರಾದರು. ಅದೇ ಸಮಯದಲ್ಲಿ ಸಾಹಿತ್ಯವು ಸುರಕ್ಷಿತ ಮತ್ತು ಗುಪ್ತ ನೆಲೆಗೆ ಮುಟ್ಟಿರುವುದನ್ನು ಬಸವಣ್ಣನವರಿಗೆ ತಿಳಿಸಿ, ಯೋಗಕ್ಷೇಮ ವಿಚಾರಿಸಲು ಸಂಗಮಕ್ಕೆ ಹೋದ ಮಾಚಿದೇವರು, ಬಸವಣ್ಣನವರು ಬಯಲಾದ, ಅದರ ಹಿಂದೆಯೇ ತಂಗಡಗಿ ಗ್ರಾಮದ ಬಳಿ ಕೃಷ್ಣಾ ತೀರದಲ್ಲಿ ನೀಲಾಂಬಿಕೆಯೂ ಬಯಲಾದ ಸುದ್ದಿಯನ್ನು ಹೊತ್ತು ತಂದರು. ಅದನ್ನು ಬಂದು ಅಕ್ಕನಾಗಲಾಂಬಿಕೆಯವರಿಗೆ ತಿಳಿಸಲು ಹೊರಟರು. ಆದರೆ ಅವರು ಬಹಳ ಥಾಸಿಯಾಗಿದ್ದರು. ಉಳಿವೆಯತ್ತ ಹೋಗುತ್ತಿರುವ ಜಗದೇವ, ಮಲ್ಲಣ್ಣ ಬೊಮ್ಮಣ್ಣರಿಗೆ ವಿಷಯ ತಿಳಿಸಿದರು. ಗೊಡಚಿ ಗಿಡದ ಬುಡದಲ್ಲಿ ಲಿಂಗೈಕ್ಯರಾದ ಮಾಚಿದೇವರ ಸಮಾಧಿಯನ್ನು ಮಾಡಲಾಯಿತು. ಜಗದೇವ, ಮಲ್ಲಣ್ಣ, ಬೊಮ್ಮಣ್ಣರು ಬಸವಣ್ಣ ನೀಲಾಂಬಿಕೆ ಮತ್ತು ಮಾಚಿದೇವ - ಮೂವರ ಲಿಂಗೈಕ್ಯದ ಸುದ್ದಿ ಅಕ್ಕನಾಗಲಾಂಬಿಕೆಯವರಿಗೆ ತಿಳಿಸಿದರು. ತನ್ನ ಪ್ರಾಣ ಸ್ವರೂಪನಾದ ಬಸವೇಶನು ಲಿಂಗೈಕ್ಯನಾದಾಗ ಲೋಕವೇ ಶೂನ್ಯವಾಗಿ ಆಕೆಗೆ ತೋರಿತು.

ಭಕ್ತಿಯ ತವನಿಧಿಯೆ ಬಸವಾ,
ಮುಕ್ತಿಯ ಮೂರುತಿಯೆ ಬಸವಾ
ಲಿಂಗಜಂಗಮದ ಚೈತನ್ಯವೆ ಬಸವಾ
ನಿಮ್ಮನಗಲಿಯಾನೆಂತು ಸೈರಿಸುವೆನು, ಎಲೈ ಅಯ್ಯಾ ಬಸವಾ?

ಎಲೆ ಪರಮ ಗುರುವೆ ಬಸವಾ
ಆಹಾ ಎನ್ನಂತರಂಗದ ಜ್ಯೋತಿಯೆ ಬಸವಾ
ನಿಮ್ಮ ಒಕ್ಕಮಿಕ್ಕ ಶೇಷ ಪ್ರಸಾದವನಿಕ್ಕಿ

ಎನ್ನ ಪಾವನವ ಮಾಡಿ ಉಳುಹಿದೆಯಲ್ಲಾ ಬಸವ ಲಿಂಗವೆ !
ಎನಗಿನ್ನಾರು ಗತಿ ಮತಿ ಹೇಳಯ್ಯಾ ಬಸವಣ್ಣಾ ನೀವಲ್ಲದೆ?
ಬಸವಣ್ಣ ಪ್ರಿಯ ಚನ್ನಸಂಗಯ್ಯ
ನೀವಗಲಿದಡೆ ಎನ್ನ ಪ್ರಾಣ ನಿಮ್ಮೊಳಗಗಲಬಲ್ಲುದೆ ಬಸವಾ?

ನಾಗಲಾಂಬಿಕೆ ಕೆಲವು ದಿವಸಗಳ ಕಾಲ ಮಂಕಾದಳು. ಗುರು ಬಸವೇಶನ ಋಣವನ್ನು ನಾನೆಂತು ತೀರಿಸಬಹುದು ? ಚಿಂತಿಸಿದರೆ ಫಲವಿಲ್ಲ. ಎಂದು ತಿಳಿದಳು. ಚನ್ನಬಸವಣ್ಣನವರು ಸಮಾಧಾನ ಮಾಡಿದರು. ಶಕ್ತಿ-ಉತ್ಸಾಹಗಳನ್ನು ಮೈಗೂಡಿಸಿಕೊಂಡು ಬಸವ ಸಂದೇಶವನ್ನು ಪ್ರಚಾರ ಮಾಡಬೇಕು. ಎಂದು ಚೈತನ್ಯ ತುಂಬಿಕೊಂಡರು. ಪುನಃ ಚಟುವಟಿಕೆ ಆರಂಭವಾಯಿತು. ಅನುಭಾವಗೋಷ್ಠಿ, ಮಹಾಮನೆ ದಾಸೋಹ, ವಚನಗಳನ್ನು ಪ್ರತಿ ಮಾಡುವಿಕೆ ಮುಂತಾಗಿ ಆರಂಭಿಸಿದರು.

ನಳನಾಮ ಸಂವತ್ಸರದ ಕಾರ್ತೀಕ ಪೌರ್ಣಮೆಯಂದು ಚನ್ನಬಸವಣ್ಣನವರು ಲಿಂಗೈಕ್ಯರಾದರು. ಇಷ್ಟಾದರೂ ಅಕ್ಕನಾಗಮ್ಮ ಸೋಲೊಪ್ಪಿಕೊಳ್ಳಲಿಲ್ಲ. ಸತ್ಯದ ಹಾದಿ ಹೂವಿನದಲ್ಲ; ಕಲ್ಲು ಮುಳ್ಳಿನದು ಎಂದು ಧೈರ್ಯ ತಾಳಿ ತನ್ನೊಡನೆ ಕೆಲವು ಶರಣರನ್ನು ಕರೆದುಕೊಂಡು ಮುಖ್ಯವಾಗಿ ಸುಲಿಯ ಚಂದಯ್ಯ, ರುದ್ರಮುನಿ ಮುಂತಾದವರೊಡನೆ ಸಹ್ಯಾದ್ರಿಯ ಅಂಚಿನಲ್ಲೇ ನಡೆದಳು. ಇಲ್ಲಿಗಾಗಲೇ ಆಕೆಯ ವಯಸ್ಸು ಎಪ್ಪತ್ತು. ಮರಡಿ ನಾಗಲಾಪುರದಲ್ಲಿ ಕೆಲಕಾಲ ಇದ್ದು ಧರ್ಮಪ್ರಚಾರ ಮಾಡಿದ್ದಾಳೆ. ಮಲೆನಾಡಿನಲ್ಲಿ ಧರ್ಮಪ್ರಚಾರ ಮಾಡಲು ಬಾಳೆಹೊನ್ನೂರಿನಲ್ಲಿ ಒಂದು ಪೀಠವನ್ನು ಸ್ಥಾಪಿಸಿ, ರುದ್ರಮುನಿ ದೇವರಿಗೆ ಪಟ್ಟಗಟ್ಟಿದರು. ಮುಂದೆ ತರೀಕೆರೆಯ ಹತ್ತಿರ ಎಣ್ಣೆಹೊಳೆ ಎಂದು ಪ್ರಸಿದ್ಧವಾಗಿರುವ ಪ್ರದೇಶದಲ್ಲಿ ಉಳಿದರು. ಅಕ್ಕನಾಗಮ್ಮನ ದರ್ಶನಕ್ಕೆ ಶರಣರು ದೂರದೂರದಿಂದ ಬರುತ್ತಿದ್ದರು. ಸಿದ್ಧವೀರ ಸ್ವಾಮಿಗಳೆಂಬ ಓರ್ವರು ದರ್ಶನಾರ್ಥಿಗಳ ಉಪಯೋಗಕ್ಕೆಂದು ಒಂದು ಮಠವನ್ನು ಕಟ್ಟಿಸಿದರು. ಕೆಲವು ಕಾಲಾನಂತರ ಅಲ್ಲೇ ಸಮಾಧಿಸ್ಥಳಾದಳು. ಇಂದಿಗೂ ಅಲ್ಲಿ ಅಕ್ಕನಾಗಮ್ಮನವರ ಗದ್ದುಗೆ ಉಂಟು.

ಮಹಾಮನೆಯ ಮಾತೆಯಾಗಿ, ಅಕ್ಕ ಎಂಬ ವಿಶೇಷ ಬಿರುದಿಗೆ ಪಾತ್ರರಾದ ನಾಗಲಾಂಬಿಕಾ ತಾಯಿಯ ಬದುಕು ಸಮಗ್ರ ಕಥೆಯ ಸಾಕ್ಷೀಭೂತ ಚೈತನ್ಯದಂತೆ ಕಾಣಬರುತ್ತದೆ. ಸ್ವತಂತ್ರ ವಿಚಾರ ವಾದಿನಿಯಾಗಿ, ವೈಚಾರಿಕ ಹೋರಾಟಗಾರ್ತಿಯಾಗಿ, ಸ್ತ್ರೀಕುಲದ ಸ್ಫೂರ್ತಿ ಗಂಗೋತ್ರಿಯಾಗಿ ಆಕೆ ನಮಗೆ ಗೋಚರಿಸುತ್ತಾಳೆ. ಜೀಜಾಬಾಯಿ ಇತಿಹಾಸ ಸುಪ್ರಸಿದ್ಧ ತನ್ನ ಮಗ ಶಿವಾಜಿಗೆ ಖಡ್ಗಧಾರಿ, ರಾಷ್ಟ್ರವೀರನನ್ನಾಗಿ ಮಾಡಿದಂತೆ ಅಕ್ಕನಾಗಲೆ ಬಸವರಸರನ್ನು ವಿಚಾರವಾದಿ, ಧೀಮಂತ, ಕ್ರಾಂತಿಪುರುಷನನ್ನಾಗಿ ಮಾಡುತ್ತಾಳೆ. ಅವರ ವಾತ್ಸಲ್ಯ ನಿಸ್ಸೀಮವಾಗಿತ್ತು. ಬಸವಣ್ಣ, ಅಕ್ಕನಾಗಮ್ಮ, ಚನ್ನಬಸವಣ್ಣರಂತಹ ಧೀಮಂತ ಚೇತನಗಳನ್ನು ಪಡೆದ ನಾವು ನಿಜಕ್ಕೂ ಧನ್ಯರು.

ಅಕ್ಕನಾಗಲೆಯ ಅನುಪಮ ಯೋಗಸಿದ್ಧಿ ಕುರಿತು ಒಂದು ವಚನದಲ್ಲಿ ಬಸವಣ್ಣನವರು ಹೀಗೆ ಹೇಳಿದ್ದಾರೆ.

ಭೃಕುಟಿಯ ಹಿಡಿದು ನಿಟಲ ನಯನನ ಬೆರೆದಳು ಅಕ್ಕಮಹಾದೇವಿ
ಶಿಖಾಚಕ್ರವಿಡಿದು ಶಿವನೆ ತಾನಾದಳು ಅಕ್ಕನಾಗಾಯಿ !

ತಾಯಿ ನೀಲಾಂಬಿಕೆಯ ವಚನದ ಮೂಲಕ ಅಕ್ಕನಾಗಮ್ಮನನ್ನು ಕೊಂಡಾಡೋಣ.

ಎನಗೆ ಹಾಲೂಟವನ್ನಿಕ್ಕುವ ತಾಯೆ,
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಳಗಿಪ್ಪ ತಾಯೆ,
ಪರವಸ್ತುವ ನಂಬಿದ ತಾಯೆ
ಬಸವನ ಗುರು ತಾಯೆ
ಸಂಗಯ್ಯನಲ್ಲಿ ಸ್ವಯಂಲಿಂಗಿಯಾದೆಯಾ,
ಅಕ್ಕನಾಗಮ್ಮ ತಾಯೆ !

ಮಂಗಲ ಗೀತೆ

ಜಯತು ಜಯತು ಅಕ್ಕನಾಗಲಾಂಬಿಕಾ ತಾಯಿಯೆ
ಜಯತು ಜಯತು ಚನ್ನಬಸವ ಗುರುವಿನ ಜನನಿಯೆ ॥ಪ॥

ಮಾದರಸ ಮಾದಲಾಂಬಿಕಾ ಪುತ್ರಿಯಾಗಿ ಜನಿಸಿದೆ
ಸಂಗಮದ ಶಿವಸ್ವಾಮಿಯ ಶ್ತಿಯಾಗಿ ನಿಂದೆಯಾ
ಕ್ರಾಂತಿಪುರುಷ ಬಸವಣ್ಣನ ಸೋದರಿಯಾಗಿ ಸಲಹಿದೆ
ಜ್ಞಾನಿ ಚನ್ನಬಸವಣ್ಣಗೆ ಜನ್ಮವಿತ್ತು ಪೊರೆದೆಯಾ ||1||

ಬಸವ ತಂದೆ ಸಾಧನೆಗೆ ಸ್ಫೂರ್ತಿಯಾಗಿ ನಿಂದೆಯಾ
ಕ್ರಾಂತಿಗಂಗೋತ್ರಿ ಎಂಬ ಶ್ರೇಷ್ಠ ಬಿರುದ ಪಡೆದೆಯಾ
ಮಹಾಮನೆಯ ತಾಯಿಯಾಗಿ ಹೊಣೆಯನ್ನು ಹೊತ್ತೆಯಾ
ನೆರೆದ ಶರಣ ಸಂದೋಹಕೆ ಅನ್ನಪೂರ್ಣೆಯಾದೆಯಾ ||2||

ಶ್ರೇಷ್ಠ ಮಾತೆಯಾಗಿ ಚನ್ನಬಸವಣ್ಣನ ಬೆಳೆಸಿದೆ
ತ್ಯಾಗ - ಯೋಗ-ವಿರಾಗಗಳ ಸಂಗಮವಾಗಿ ಮಾಡಿದೆ
ಅಶ್ವವೇರಿ ಸಂಚರಿಸಿ ಧರ್ಮ ಜಾಗೃತಿ ಗೈದೆಯಾ
ಚನಬಸವನೊಡಗೂಡಿ ಬಸವ ಧರ್ಮ ಬೆಳೆಸಿದೆ ||3||

ವಚನ ಶಾಸ್ತ್ರ ನಿಧಿಗೆ ನಾಶ ಭಯವು ತಾನು ಎರಗಲು
ಖಡ್ಗ ಹಿಡಿದು ಶತ್ರುಗಳ ಹಿಂಜರಿಸಿದ ಧೀರಮಾತೆ
ಉಳವಿಯಲ್ಲಿ ವಚನನಿಧಿಯ ಕಾಪಿಟ್ಟ ವೀರಮಾತೆ
ತರೀಕೆರೆಯ ಸನಿಹದಿ ಸಚ್ಚಿದಾನಂದನೋಳ್ ಬೆರೆದೆ. || 4 ||

ಲಿಪ್ ಸ್ಟಿಕ್ ಮಹಿಮೆ

ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್‌ದಲ್ಲಿ ದಿ.6-08-2008ರಂದು ಗುರು ಬಸವಣ್ಣನವರ 813ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಏರ್ಪಡಿಸಲಾಗಿತ್ತಷ್ಟೆ. ಹೊರಗಡೆ ಕೆಲವರು ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದರು. ಶರಣ -ಶರಣೆಯರು ಕಾರ್ಯಕ್ರಮಕ್ಕೆ ಬಂದವರು ಅವರ ಕಡೆಗೆ ತಿರುಗಿಯೂ ನೋಡದೆ ಗುಂಪು ಗುಂಪಾಗಿ ಒಳಗೆ ಹೋಗುತ್ತಿದ್ದರು. ಇವರೆಲ್ಲ ಶುಭ್ರ ಬಿಳಿಯ ಬಟ್ಟೆಗಳನ್ನುಟ್ಟು ವಿಭೂತಿ, ರುದ್ರಾಕ್ಷಿ ಧಾರಕರಾಗಿದ್ದರು. ಕಾವಿಯ ಬಣ್ಣದ ಸ್ಕಾರ್ಫ್ ವಿರಾಜಿಸುತ್ತಿತ್ತು. ಒಳಗೆ ಹಬ್ಬದ ಸಡಗರ.

ಹೊರಗೆ ಕುಳಿತ ಅಕ್ಕಮಹಾದೇವಿಯ ಅಭಿಮಾನಿಗಳೋ (?) ಮದುವೆಯ ಮಂಟಪಕ್ಕೆ ಬಂದಂತೆ ಬಣ್ಣ ಬಣ್ಣದ ರೇಷ್ಮೆ ಸೀರೆ ಉಟ್ಟು ಭರ್ಜರಿ ಮೇಕಪ್‌ನಲ್ಲಿ ಬಂದಿದ್ದರು. ಬ್ಯೂಟಿ ಪಾರ್ಲರ್‌ನಿಂದ ನೇರವಾಗಿ ಇಲ್ಲಿಗೇ ಬಂದಂತಿತ್ತು. ಒಂದಿಬ್ಬರ ತುಟಿಗಳ ಲಿಪ್‌ಸ್ಟಿಕ್ ಎಲ್ಲಿ ಕರಗಿ ಹರಿಯುತ್ತದೋ ಎಂಬಷ್ಟು ದಟ್ಟವಾಗಿದ್ದಿತು.

ಪೋಲೀಸರು ಸ್ವಲ್ಪ ಹೊತ್ತು ಸುಮ್ಮನಿದ್ದರು. ನಂತರ ಚಳುವಳಿಕಾರರಿಗೆ ಹೇಳಿದರು. ಅವರು ಹಣ ಕಟ್ಟಿ ಪರ್ಮಿಷನ್ ತಗೊಂಡಿದ್ದಾರೆ. ನೀವು ಮುನ್ಸೂಚನೆಯಿಲ್ಲದೆ ಬಂದು ಕುಳಿತಿದ್ದೀರಿ. ಇದು ಕಾನೂನು ಬಾಹಿರ. ಆದ್ದರಿಂದ ಏಳಬೇಕು; ಇಲ್ಲವಾದರೆ ಬಂಧಿಸಬೇಕಾಗುತ್ತದೆ ಎಂದರು. ಒಂದೆರಡು ಸಲ ಹೇಳುತ್ತಲೇ ಅವರೆಲ್ಲ ಎದ್ದು ಹೊರಟರು. ಆದರೆ ಆಗ ಒಬ್ಬರು ಮಾಡಿದ ಕಾಮೆಂಟ್ ಹೀಗಿತ್ತು. "ಪೋಲೀಸರು ಪ್ರತಿಭಟನಕಾರರನ್ನು ಎಬ್ಬಿಸಲು ಅವಸರ ಮಾಡಬಾರದಿತ್ತು. ಏಕೆಂದರೆ ಬಿಸಿಲಿಗೆ ಇನ್ನರ್ಧ ಗಂಟೆಯೊಳಗೆ ಮೇಕಪ್ ಕರಗಿ ನೀರಾಗುವ ಭಯದಿಂದ ಅವರೆಲ್ಲ ಎದ್ದು ಹೋಗುತ್ತಲಿದ್ದರು!"

- ಕರಿಬಸಪ್ಪ ಕೋರಿಶೆಟ್ಟರು, ವಕೀಲರು, ಧಾರವಾಡ

ಧಾರವಾಡ ನಗರದ ಬಸವ ಜ್ಯೋತಿ ಸಮಾರೋಪ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ

ರಾಷ್ಟ್ರೀಯ ಬಸವ ದಳಗಳವರು ಶ್ರಾವಣ ಮಾಸದ ನಿಮಿತ್ತ 2-8-2008ರಿಂದ ಪ್ರತಿದಿನ ಸಂಜೆ ಮನೆಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಧಾರವಾಡ ರಾಷ್ಟ್ರೀಯ ಬಸವ ದಳದವರ ದಿ.3-9-2008ರಂದು ಬೆಳಿಗ್ಗೆ 10-30ರಿಂದ ಸಮಾರೋಪ ಸಮಾರಂಭವನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಬಸವ ಮಂಟಪದಲ್ಲಿ ಏರ್ಪಡಿಸಿದ್ದು, ಪ್ರಸ್ತುತ ಕಾರ್ಯಕ್ರಮದ ಸಾನ್ನಿಧ್ಯವನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವಹಿಸಲಿದ್ದಾರೆ.

32. ಮನದ ಮರ್ಕಟತನ

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು
ನಿಂದಲ್ಲಿ, ನಿಲ್ಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು ! ಲಿಂಗದೇವಾ,
ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು, ನಿಮ್ಮ ಧರ್ಮ ಬ.ವ.ದೀ.30

ಕೋತಿಯು ಚಂಚಲತೆಯ ಆಗರ. ಒಂದು ಕ್ಷಣವು ಸುಮ್ಮನಿರದು. ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಜಿಗಿದಾಡುತ್ತದೆ. ಕುಳಿತಲ್ಲಿಯೇ ಅಂಗ ಚೇಷ್ಟೆಗಳನ್ನು ಮಾಡುತ್ತಿರುತ್ತದೆ. ಹಲ್ಲು ಕಿರಿಯುತ್ತದೆ. ಕಿರಿಚಾಡುತ್ತದೆ. ಪ್ರಾಣಿಗಳಲ್ಲಿ ಕೋತಿಯು ಚಂಚಲವಾಗಿರುವಂತೆ ಇಂದ್ರಿಯಗಳಲ್ಲಿ ಅತ್ಯಂತ ಚಂಚಲವಾದುದೆಂದರೆ ಮನಸ್ಸು. ಇದು ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ ಎಂಬ ಶಾಖೆಗಳಿಗೆ ಹಾರಾಡುತ್ತಿರುತ್ತದೆ. ವ್ಯಕ್ತಿಯನ್ನು ನಿಂತಲ್ಲಿ ನಿಲ್ಲಗೊಡದು, ಕುಳಿತಲ್ಲಿ ಕುಳ್ಳಿರಗೊಡದು. ಯಾವುದಾದರೂ ವಸ್ತುವಿನ ಮೇಲೆ ಉದಾ: ಧ್ಯಾನದಲ್ಲಿ ಧ್ಯೇಯ ವಸ್ತುವಿನ ಮೇಲೆ, ಅಧ್ಯಯನ ಮಾಡುವಾಗ ಪುಸ್ತಕದ ವಿಷಯದ ಮೇಲೆ ಕೇಂದ್ರೀಕರಿಸಬೇಕು ಎಂದು ಕೊಂಡರೆ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಲಿಂಗದೇವನೆ, ನಿಮ್ಮ ಪಾದ ಕಮಲದಲ್ಲಿ ದುಂಬಿಯಾಗಿ, ದಿವ್ಯಾನಂದದ ಮಕರಂದವನ್ನು ಈಂಟುತ್ತ ಸ್ಥಿರವಾಗಿ ನಿಲ್ಲುವಂತೆ ನನ್ನ ಮನಸ್ಸಿಗೆ ಉನ್ನತವಾದ ಸ್ಥಿತಿಯನ್ನು ಕರುಣಿಸು ಎಂದು ಲಿಂಗದೇವನಲ್ಲಿ ಬಸವಣ್ಣನವರು ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

33. ಮನದ ಬಾಧಕತನ

ಮರಸನೇರಿದ ಮರ್ಕಟನಂತೆ
ಹಲವು ಕೊಂಬೆಗೆ ಹಾರುತ್ತಲಿದೆ;
ಬೆಂದ ಮನವ ನಾನೆಂತು ನಂಬುವೆನಯ್ಯಾ,
ಎಂತು ನಚ್ಚುವೆನಯ್ಯಾ? ಎನ್ನ ತಂದೆ ಲಿಂಗದೇವನಲ್ಲಿಗೆ
ಹೋದಹೆನೆಂದರೆ ಹೋಗಲೀಯದಯ್ಯ ! ಬ.ವ.ದೀ.31

ವ್ಯಕ್ತಿಯ ಉನ್ನತಿ ಅಥವಾ ಅವನತಿಗೆ ಅತಿ ಮುಖ್ಯ ಸಾಧನವೆಂದರೆ ಮನಸ್ಸು. ಶರೀರವೇ ವೃಕ್ಷ, ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯಗಳೇ ಅದರ ಕೊಂಬೆಗಳು. ಮನಸ್ಸು ಒಂದು ಕೋತಿಯಂತೆ ಆ ಕೊಂಬೆಯಿಂದ ಇನ್ನೊಂದಕ್ಕೆ, ಇನ್ನೊಂದರಿಂದ ಮತ್ತೊಂದಕ್ಕೆ ಜಿಗಿದಾಡುತ್ತದೆ. ಒಮ್ಮೆ ಕಣ್ಣಿನ ಮೂಲಕ ದೃಶ್ಯ ಪ್ರಪಂಚದ ವೈಭವವನ್ನು ಸವಿಯ ಬಯಸಿದರೆ, ಇನ್ನೊಮ್ಮೆ ಶ್ರವಣ ಪ್ರಪಂಚದ ರಂಜನೆಯನ್ನು ಹೊಂದಬಯಸುತ್ತದೆ.

ಸದಾ ಕಾಲ ಬೆಂಕಿಯ ಮೇಲೆ ನಿಂತಂತೆ ಚಟಪಟಿಸುತ್ತದೆ. ಎತ್ತ ಒಯ್ದು ಎತ್ತಿ ಹಾಕುತ್ತದೋ ಎಂದು ಭಯವಾಗುತ್ತದೆ. ವಿಷಯಗಳ ಅಗ್ನಿಯಲ್ಲಿ ಬೇಯುವ ಮನಸ್ಸನ್ನು ಹೇಗೆ ನಂಬುವುದು? ಇದು ನನ್ನನ್ನು ಅವನತಿಗೆ ಒಯ್ಯುವುದಿಲ್ಲ ಎಂದು ಹೇಗೆ ವಿಶ್ವಾಸವನ್ನು ಇಡುವುದು ? ಈ ಜೀವಾತ್ಮನ ಮೂಲ (ತಂದೆ) ವಾದ ಪರಮಾತ್ಮ ಲಿಂಗದೇವನ ಬಳಿಗೆ ಹೋಗಬೇಕೆಂದರೆ ಹೋಗಲು ಬಿಡದು ಈ ಮನಸ್ಸೆಂಬ ಮರ್ಕಟ! ಎಂದು ಸಾಧಕಾವಸ್ಥೆಯಲ್ಲಿ ಬಸವಣ್ಣನವರು ಪರಿತಪಿಸುತ್ತಿರುವರು.

34. ಮನದ ನಾಯಿತನ

ಅಂದಣವನೇರಿದ ಸೊಣಗನಂತೆ
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು
ಸುಡು ಸುಡು ಮನವಿದು ವಿಷಯಕ್ಕೆ ಹರಿವುದು.
ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಲಿಂಗದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ ಬ.ವ.ದೀ. 32

ಹಿಂದಿನ ಎರಡು ವಚನಗಳಲ್ಲಿ ಚಾಂಚಲ್ಯದ ದೃಷ್ಟಿಯಿಂದ ಮನಸ್ಸನ್ನು ಕಪಿಗೆ ಹೋಲಿಸಿದ್ದರೆ ಈ ವಚನವಲ್ಲಿ ಅದರ ಪೂರ್ವವಾಸನಾ ಆಕರ್ಷಣೆಯ ದೃಷ್ಟಿಯಿಂದ ನಾಯಿಗೆ ಹೋಲಿಸಲಾಗಿದೆ.

ಒಂದು ನಾಯಿಗೆ ಅಂದವಾದ ಬಟ್ಟೆ ಬರೆ ಹಾಕಿ, ಸುಂದರವೂ ಭವ್ಯವೂ ಆದ ಪಲ್ಲಕ್ಕಿಯಲ್ಲಿ ಕೂರಿಸಿ ಗೌರವ ಪೂರ್ಣವಾಗಿ ಹೊತ್ತುಕೊಂಡು ಹೋಗುತ್ತಿದ್ದಾರೆ ಎಂದುಕೊಳ್ಳಿ. ದಾರಿಯ ಬದಿಯಲ್ಲಿ ಹೇಸಿಗೆಯನ್ನು ಕಂಡರೆ ಅಥವಾ ಹೆಣ್ಣುನಾಯಿಯೊಂದನ್ನು ಕಂಡರೆ ಟಣ್ಣನೆ ಪಲ್ಲಕ್ಕಿಯಿಂದ ಜಿಗಿಯುವುದು ಮತ್ತೊಂದು ಗಂಡು ನಾಯಿಯನ್ನು ನೋಡಿದರೆ ಜಿಗಿದು ನಿಂತು ಗುರ್ರೆನ್ನುವುದು. ಸ್ವಾಭಾವಿಕವಾದ ನಾಯಿಯ ಬುದ್ಧಿಯು ತೊಲಗಿರುವುದಿಲ್ಲ. ಹಾಗೆಯೇ ಈ ಮನಸ್ಸು! ಗುರು ಬಸವಣ್ಣನವರು ಹೇಳುವ ಶೈಲಿ ನೋಡಿರಿ. ಅಂದಣವನೇರಿದ ಸೊಣಗನಂತೆ ಕಂಡೊಡೆ ಬಿಡದು ಮುನ್ನಿನ ಸ್ವಭಾವವನು. ಏನನ್ನು ಕಂಡರೆ ಎಂದು ಸ್ಪಷ್ಟವಾಗಿ ಹೇಳದೆ ನಮ್ಮ ಚಿಂತನೆಗೆ ಬಿಟ್ಟಿದ್ದಾರೆ.

ಕೆಲವು ವ್ಯಕ್ತಿಗಳಿಗೆ ಉನ್ನತವಾದ ಸ್ಥಾನವು ಸಿಕ್ಕಿರುತ್ತದೆ. ಅದು ಪವಿತ್ರವಾದ ಮಠದ ಅಧಿಕಾರ ಇರಬಹುದು. ಅಥವಾ ದೊಡ್ಡ ಹುದ್ದೆ ಇರಬಹುದು. ಆದರೆ ಅವರು ಸ್ಥಾನ ಗೌರವವನ್ನು ಮರೆತು ಹೆಣ್ಣು -ಹೊನ್ನು -ಮಣ್ಣುಗಳ ಆಸೆಗೆ ಬಲಿಯಾಗುವರು. ನಾಯಿ ತನಗೆ ಅರಿಯದಂತೆ ಅನಿಯಂತ್ರಿತವಾಗಿ ಆಮಿಷದತ್ತ ಆಕರ್ಷಿತವಾಗುವಂತೆ ಈ ವ್ಯಕ್ತಿಯ ಮನಸ್ಸೂ ಹರಿಯುವುದು.

ಪಂಚೇಂದ್ರಿಯಗಳಾದ ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಅವುಗಳ ವಸ್ತುಗಳಾದ ಶಬ್ದ ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ವಿಷಯಗಳಿಗೆ ಸೋಲುವಂತೆ ಪ್ರೇರಣೆ ನೀಡುವುದು ಈ ಮನಸ್ಸು. ದೇವಾ, ದಿನ ನಿತ್ಯ, ಒಂದು ಕ್ಷಣವೂ ಬಿಡದೆ ನಿನ್ನನ್ನು ನಿತ್ಯ ನೆನೆಯಬೇಕು ಎಂದುಕೊಂಡರೆ ಅದಕ್ಕೆ ಈ ಮನಸ್ಸು ಅವಕಾಶವನ್ನೇ ಕೊಡದು. ಎನ್ನ ಒಡೆಯನಾದ ಲಿಂಗದೇವನೆ, ನಿಮ್ಮಲ್ಲಿ ವಿನೀತನಾಗಿ ಸೆರಗೊಡ್ಡಿ ಬೇಡುತ್ತೇನೆ. ಈ ಮನಸ್ಸು ತನ್ನ ಸ್ವಾಭಾವಿಕ ಗುಣವನ್ನು ಕಳೆದುಕೊಂಡು ಸದಾಕಾಲ ನಿನ್ನನ್ನೇ ನೆನೆಯುವಂತೆ ಮಾಡು. ನನ್ನ ಮನಸ್ಸನ್ನು ದೈವೀಕರಿಸು. ಯಾವುದೇ ಒಂದು ಕ್ಷಣ ಮಾತ್ರ ನಿನ್ನ ಧ್ಯಾನ ಮಾಡಿ ಉಳಿದ ಸಮಯದಲ್ಲಿ ಕಂಡಕಂಡ ಕಡೆಗೆ ಹರಿಯುವಂತೆ ಆಗಬಾರದು ಎಂಬಂತೆ ಇರಿಸು ಮತ್ತು ಹರಸು.

35. ನಾಯಿಯ ಮೂರ್ಖತನ

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ !
ಸಂಸಾರ ಸಂಗವ ಬಿಡದು ನೋಡೆನ್ನ ಮನವು;
ಈ ನಾಯಿತನವ ಮಾಣಿಸು
ಲಿಂಗದೇವಯ್ಯ ನಿಮ್ಮ ಧರ್ಮ ಬ.ವದೀ.33

ಕಬ್ಬಿಣದಿಂದ ಮಾಡಿರುವ ಕತ್ತಿಗೆ ತುಕ್ಕು ಹತ್ತಬಾರದೆಂದು ಅದನ್ನು ಚೆನ್ನಾಗಿ ಮಸೆಸಿದ ಮೇಲೆ ತುಪ್ಪವನ್ನು ಸವರಿ ಇಡುತ್ತಾರೆ. ಆಗ ನಾಯಿಯೊಂದು ತುಪ್ಪದ ಆಸೆಗೆ ಆ ಕತ್ತಿಯನ್ನು ನೆಕ್ಕಲು ತೊಡಗುತ್ತದೆ. ಹಾಗೆ ನೆಕ್ಕುವಾಗ ಅದರ ನಾಲಿಗೆಗೆ ಗಾಯವಾಗಿ ರಕ್ತವು ಒಸರಲು ಆರಂಭಿಸುತ್ತದೆ. ಅದನ್ನು ಕುಡಿದ ನಾಯಿಯು ಆ ರಕ್ತವು ತನ್ನ ಗಾಯದಿಂದ ಒಸರಿದ್ದು ಎಂಬುದನ್ನು ಅರಿಯದೆ ಮತ್ತೆ ಮತ್ತೆ ಕತ್ತಿಯನ್ನು ನೆಕ್ಕಲು ಹೋಗುತ್ತದೆ.

ಅದೇ ರೀತಿ ಮನಸ್ಸೆಂಬ ನಾಯಿ ಸಂಸಾರವೆಂಬ ಅಲಗನ್ನು ನೆಕ್ಕಿ ಅದರಲ್ಲಿ ಸುಖವಿದೆ ಎಂದು ನಂಬುತ್ತದೆ. ಈ ಸುಖ ತನ್ನನ್ನು ಕ್ಷಣಕ್ಷಣಕ್ಕೂ ಪತನಗೊಳಿಸುತ್ತಿದೆ ಎಂಬ ಪ್ರಜ್ಞೆ ಹೊಂದಿರುವುದಿಲ್ಲ. ಉದಾಹರಣೆಗೆ ಒಬ್ಬ ಧೂಮಪಾನ ಮಾಡುತ್ತ ಅದರಲ್ಲಿ ಸುಖವಿದೆ ಎಂದು ಭ್ರಾಂತಿಗೊಳಗಾಗುತ್ತಾನೆ. ಮತ್ತೊಬ್ಬ ಮದ್ಯಪಾನ ಮಾಡುತ್ತ ಅದರಲ್ಲಿ ಸುಖವಿದೆ ಎಂಬ ಭ್ರಾಂತಿಗೆ ಒಳಗಾಗುತ್ತಾನೆ. ಅವನಿಗೆ ಸಿಕ್ಕುವ ಸುಖ ಹೊರಗಿನಿಂದ ಬಂದುದಲ್ಲ; ತನ್ನಲ್ಲೇ ಭ್ರಾಂತಿಯಿಂದ ಉಂಟಾದುದು. ನಾಯಿ ತನ್ನ ನಾಲಿಗೆಯನ್ನು ಕೊಯ್ದುಕೊಳ್ಳುವಂತೆ ವ್ಯಕ್ತಿಯು ತಾನು ಪತನಗೊಳ್ಳುತ್ತಿರುವನು. ಇಂಥ ಭ್ರಮಾತ್ಮಕ ಸುಖಾಸ್ವಾದನೆಯನ್ನು ಬಿಡಿಸು ಎಂದು ಸಾಧಕ ಜೀವಿ ಬಸವಣ್ಣನವರು ಲಿಂಗದೇವರಲ್ಲಿ ಬೇಡುತ್ತಾರೆ.

36. ವಿಕಾರಗಳ ನಾಯಿಗಳು

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ
ಎನ್ನ ಬಿಡು, ತನ್ನ ಬಿಡು ಎಂಬುದು ಕಾಯವಿಕಾರ
ಎನ್ನ ಬಿಡು, ತನ್ನ ಬಿಡು ಎಂಬುದು ಮನೋವಿಕಾರ

ಕರಣೇಂದ್ರಿಯಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೈದುವುದೆ, ಲಿಂಗದೇವಾ ? ಬ.ವ.ದೀ. 34

ಬೇಟೆಗಾರರು ಬೇಟೆಯಾಡುವಾಗ ನಾಯಿಗಳನ್ನು ಮುಂದೆ ಬಿಡುವರು. ಅವು ಆಹಾರವಾಗುವ ಬೇಟೆ ಕಾಣುತ್ತಲೇ ಮುಂದೆ ಓಡಿ ಬೇಟೆಯನ್ನು ಹಿಡಿಯಬೇಕೆಂದು ಜಗ್ಗಾಡುವವು. ಈ ದೃಶ್ಯದ ರೂಪಕವನ್ನು ಕೊಟ್ಟು ಗುರು ಬಸವಣ್ಣನವರು ಮನಸ್ಸಿನ ಸ್ಥಿತಿಯನ್ನು ಚಿತ್ರಿಸುವರು. ಮೊಲವು ಬಹು ಮುಗ್ಧ ಪ್ರಾಣಿ. ಅದರ ಬಳಿ ಕೋರೆ ಹಲ್ಲು ಅಥವಾ ಪಂಜದಂತಹ ಕಾಲು ಏನೂ ಇಲ್ಲ. ಓಟವೊಂದೇ ಅದರ ಆಸ್ತಿ. ಯಾವುದಾದರೂ ಬಿಲ ಅಥವಾ ದಟ್ಟವಾದ ಪೊದೆ ಸಿಕ್ಕರೆ ಮಾತ್ರ ಅದು ಸುರಕ್ಷಿತ. ಅಂಥ ಮೊಲವನ್ನು ಕಾಣುತ್ತಲೇ ನಾಯಿಗಳು ಅರ್ಭಟಿಸುತ್ತ ಬೆನ್ನು ಹತ್ತುತ್ತವೆ. ಅದೇ ರೀತಿ ವಿವೇಕ, ಅಂತರಾತ್ಮ ಅಂತರ್ಮನ ಎನ್ನುವುದೊಂದು ಮೊಲ. ಅದು ಪರಮಾತ್ಮನ ಧ್ಯಾನ ಎಂಬ ಬಿಲ ಸೇರಿ, ಸುರಕ್ಷಿತವಾಗಿರಬೇಕೆಂದು ಪ್ರಯತ್ನಿಸುವಾಗ ವಿಕಾರಗಳೆಂಬ ನಾಯಿಗಳು ವಿವೇಕದ ಬೆನ್ನು ಹತ್ತುತ್ತವೆ. ಕಾಯ ವಿಕಾರಗಳು - 5, ಮನೋವಿಕಾರಗಳು - 4 ಒಟ್ಟು 9 ವಿಕಾರಗಳೆಂಬ ನಾಯಿಗಳು ಬೆನ್ನು ಹತ್ತುತ್ತವೆ. ಪಂಚ ಜ್ಞಾನೇಂದ್ರಿಯಗಳಾದ ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಇವುಗಳ ಮೂಲಕ ಒಳಬರುವ ತನ್ಮಾತ್ರೆಗಳಾದ ವಾಸನೆ, ರುಚಿ, ರೂಪ, ಸ್ಪರ್ಶ, ಶಬ್ದ ಎಂಬುವು 5 ಕೊಳೆಗಳಾದರೆ, ಚಿತ್ತ ಮನ ಬುದ್ಧಿ ಅಹಂಕಾರ ಎಂಬ ಕರಣಗಳು ನಾಲ್ಕು. ಪಂಚೇಂದ್ರಿಯ ಮತ್ತು ಅಂತಃಕರಣ ಚತುಷ್ಟಯ ಎಂಬ 9 ನಾಯಿಗಳು ಪೈಪೋಟಿಯ ಮೇಲೆ ನನ್ನ ಬಿಡು, ನನ್ನ ಬಿಡು ಎಂದು ಮುನ್ನುಗ್ಗುತ್ತಿರುತ್ತವೆ. ಅಂತರ್ಮನ (Conscience) ಎಂಬ ಮೊಲವನ್ನು ಕರಣೇಂದ್ರಿಯಗಳೆಂಬ ನಾಯಿಗಳು ಹಿಡಿದು ಹರಿದು ತಿನ್ನುವ ಮುನ್ನವೇ ಮನಸ್ಸು ಪರಮಾತ್ಮನನ್ನು ಹೊಂದಬೇಕು ಎಂದು ಸಾಧಕ ಜೀವಿ ಬಸವಣ್ಣನವರು ಹಂಬಲಿಸುವರು.

ಮನ ಎಂಬುವ ಅಂತರೀಂದ್ರಿಯ ಕುರಿತು ವಿಶ್ಲೇಷಣೆ ಮಾಡಿದಾಗ ಎರಡು ರೀತಿಯಲ್ಲಿ ಅರ್ಥೈಸಬೇಕು. ಚಿತ್ತ, ಮನ, ಬುದ್ಧಿ, ಅಹಂ - ಈ ನಾಲ್ಕು ಸೇರಿ ಕೆಲಸ ಮಾಡುವ ಒಂದು ಘಟಕವನ್ನು ಮನಸ್ ಎಂದು ಕರೆಯಲಾಗುವುದು. ಈ ಘಟಕದಲ್ಲಿ ಒಂದು ಅಂತಃಕರಣ ಮನ. ಸಂಗ್ರಹ ಮಾಡಿಕೊಳ್ಳುವ ಕಾರ್ಯಾಗಾರ ಚಿತ್ತ, ಸಂಕಲ್ಪ-ವಿಕಲ್ಪ ಮಾಡುವುದು ಮನ, ಇದೇ ಸರಿ ಎಂದು ನಿರ್ಧರಿಸುವುದು ಬುದ್ಧಿ, ಇದು ನನ್ನದು ಎಂಬ ರಾಗ, ನನ್ನದಲ್ಲ ಎಂಬ ದ್ವೇಷ ಹೊಂದುವುದು ಅಹಂ. ಆದ್ದರಿಂದ ಮನಸ್ಸಿನ ಚಟುವಟಿಕೆ ಎಂದು ಹೇಳುವಾಗ ಈ ನಾಲ್ಕೂ ಸೇರಿರುತ್ತವೆ ಎಂದು ಅರ್ಥ ಮಾಡಬೇಕು.

37. ಹೊಯ್ದಾಡುವ ಮನ

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ;
ಮುಂದೆ ಲಿಂಗವ ಕಂಡಿಹೆನೆಂಬುದು ಹುಸಿ ನೋಡಾ !
ಬೆಂದ ಕರಣಾದಿಗಳು ಒಂದೇ ಪಥವನರಿಯವು
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ ?
ಎನ್ನ ತಂದೆ ಲಿಂಗದೇವಾ,
ನಿಮ್ಮ ಶರಣರ ಬಳಿವಿಡಿದಡೆ ಎನ್ನ ದಂದುಗ ಹಿಂಗುವುದು! ಬ.ವ.ದೀ. 35

ದಂದುಗ ಎಂದರೆ ಹೊಯ್ದಾಟ ನಿಲ್ಲದು ಮನಸ್ಸಿನ ಸಂದೇಹ ಕಾಡುವುದರಿಂದ . ದೇವರು ಇದ್ದಾನೋ ಇಲ್ಲವೋ? ಆತ್ಮವು ನಿಜವೋ ಸುಳ್ಳೋ? ನಾನು ಮಾಡುವ ಪೂಜೆ -ಪ್ರಾರ್ಥನೆ ದೇವರಿಗೆ ಸಲ್ಲುತ್ತವೋ ಇಲ್ಲವೋ ? ಗುರುವಿನ ಅನುಗ್ರಹ ಅಗತ್ಯವೋ ಅಲ್ಲವೋ? ಹೀಗೆ ಎಲ್ಲದರಲ್ಲೂ ಸಂದೇಹಿಸುತ್ತಾ ಹೋದಾಗ ಮನಸ್ಸಿಗೆ ಸಮಾಧಾನವಿರದೆ ಬರೀ ಹೊಯ್ದಾಟ ಇರುವುದು. ಕೆಲವೊಮ್ಮೆ ಕೆಲವು ವಿಷಯಗಳಲ್ಲಿ ನಂಬಿಕೆ(belief) ಮತ್ತು ವಿಶ್ವಾಸ(Faith) ಇಲ್ಲದ್ದರಿಂದ ಮುಂದೆ ಲಿಂಗದೇವನನ್ನು ಕಾಣುತ್ತೇನೆ, ಹೊಂದುತ್ತೇನೆ ಎಂಬುದು ಸುಳ್ಳೇ ಸರಿ. ಕರಣೇಂದ್ರಿಯಗಳೋ ಒಂದೊಂದು ಒಂದೊಂದು ವಿಷಯದಲ್ಲಿ ಬೇಯುತ್ತಿರುತ್ತವೆ. ಹೀಗಾಗಿ ಇವೆಲ್ಲವೂ ಕೂಡಿ ಒಂದೇ ದಾರಿಯಲ್ಲಿ ಹೋಗಲಾರವು. ಹೀಗಿರುವಾಗ ದಿವ್ಯ ಪಥವು ನನಗೆ ಹೇಗೆ ಸಾಧ್ಯವಾಗುವುದು? ಎನ್ನ ತಂದೆ ಲಿಂಗದೇವ, ನನ್ನ ಈ ಸಮಸ್ಯೆಗೆ ಪರಿಹಾರವೊಂದಿದೆ. ಅದೆಂದರೆ ಉತ್ತಮ ಶರಣರ ಒಡನಾಟವನ್ನು ಹೊಂದುವುದು. ಅವರು ನನ್ನ ಮನದಲ್ಲಿ, ಸಾಧನಾ ಪಥದಲ್ಲಿ ಬರುವ ಸಂದೇಹಗಳನ್ನು ನಿವಾರಿಸುವರು, ಏಕ ನಿಷ್ಠೆ ಕಲಿಸುವರು, ಮಾರ್ಗದರ್ಶನ ಮಾಡಿ ಮುನ್ನಡೆಸುವರು. ಅದನ್ನು ನನಗೆ ನೀನು ಕರುಣಿಸು.

38. ಮನದ ಚೇಷ್ಟೆ

ತನ್ನ ವಿಚಾರಿಸಲೊಲ್ಲದು; ಇದಿರ ವಿಚಾರಿಸಹೋಹುದೀ ಮನವು
ಏನ ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು ?
ಲಿಂಗದೇವನ ಶರಣರ
ನಚ್ಚದ ಮಚ್ಚದ ಮನವ ಕಿಚ್ಚಿನೊಳಗಿಕ್ಕು - ಬ.ವ.ದೀ.36

ಮನಸ್ಸಿನ ಗುಣಗಳೇ ಬಲು ವಿಲಕ್ಷಣ. ತನ್ನಲ್ಲಿರುವ ದುರ್ಗುಣ, ದೋಷ -ದೌರ್ಬಲ್ಯಗಳು ಏನು? ಎಂದು ಸ್ವ- ಅವಲೋಕನ(Self -introspection) ಮಾಡಿಕೊಳ್ಳಲು ಹೋಗುವುದಿಲ್ಲ. ಸದಾ ಇನ್ನಿತರರ ದೋಷ -ದೌರ್ಬಲ್ಯ, ದುರ್ಗುಣಗಳನ್ನು ಹುಡುಕಲು ಹೋಗುತ್ತದೆ. ತನ್ನ ಬೆನ್ನು ತನಗೆ ಕಾಣದಂತೆ ತನ್ನ ತಪ್ಪು ತನಗೆ ಕಾಣವು. ಯಾರಾದರೂ ಜ್ಞಾನ ನೀಡಲು ಬಂದರೆ ಇವರು ಎಂಥವರೋ ಏನೋ? ನಂಬಬಹುದೋ ಬೇಡವೋ? ಎಂದೆಲ್ಲ ಸಂದೇಹಿಸಲು ಹೋಗುತ್ತದೆ. ಇದರಿಂದ ಸಿಗಬಹುದಾದ ಜ್ಞಾನವು ಕೈತಪ್ಪಿ ಹೋಗುತ್ತದೆ. ಲಿಂಗದೇವನ ಶರಣರ ನಂಬದೆ ಇರುವ, ಮೆಚ್ಚದೆ ಇರುವ, ಆದರಿಸದೆ ಇರುವ ಮನಸ್ಸನ್ನು ನಾನು ಏನು ಮಾಡಲಿ ?

ಬಹಳ ಜನರು ಇಂಥ ಸಂದೇಹ ಪ್ರವೃತ್ತಿಯಿಂದಾಗಿ ಯಾರನ್ನೂ ನಂಬರು, ಅವರ ವಿಶ್ವಾಸವನ್ನು ಅವರಿಂದ ಸಿಗಬಹುದಾದ ಮಾರ್ಗದರ್ಶನವನ್ನು ಪಡೆದುಕೊಳ್ಳಲಾರರು.

39. ಮನದ ಕ್ಷುಲ್ಲಕತನ

ತನ್ನಿಚ್ಛೆಯ ನುಡಿದರೆ ಮಚ್ಚುವುದೀ ಮನವು;
ಇದಿರಿಚ್ಛೆಯ ನುಡಿವಡೆ ಮಚ್ಚದೀ ಮನವು;
ಲಿಂಗದೇವನ ಶರಣರ
ನಚ್ಚದ ಮಚ್ಚದ ಮನವ ಕಿಚ್ಚಿನೊಳಗಿಕ್ಕು - ಬ.ವ.ದೀ.37

ತನಗೆ ಇಷ್ಟವಾದುದನ್ನೇ ನುಡಿದರೆ ಮನಸ್ಸಿಗೆ ಬಹಳ ಖುಷಿ! ಬಹಳ ಸಂಭ್ರಮ ಪಡುತ್ತದೆ. ತನ್ನ ಇಷ್ಟಕ್ಕೆ ವಿರುದ್ಧವಾದುದನ್ನು ನುಡಿದರೆ ಸಹಿಸಿಕೊಳ್ಳುವುದಿಲ್ಲ. ತಾನು ನಡೆಯುತ್ತಿರುವ ರೀತಿ ಸರಿಯಿಲ್ಲ, ತಪ್ಪಿದೆ ಎಂದು ಯಾರಾದರೂ ಬೆರಳು ತೋರಿಸಿದರೆ ಮನಸ್ಸು ಕೋಪಗೊಳ್ಳುವುದು; ಹೇಳಿದವರನ್ನು ದ್ವೇಷಿಸುವುದು. ಲಿಂಗದೇವನ ಶರಣರು ನ್ಯಾಯ ನಿಷ್ಠುರಿಗಳು, ಸತ್ಯವನ್ನೇ ನುಡಿಯುವವರು, ತಪ್ಪು ಮಾಡುವವರನ್ನು ತಿದ್ದಿ ಅವರನ್ನು ಉತ್ತಮರನ್ನಾಗಿ ದೈವೀಕರಿಸಬೇಕು ಎನ್ನುವವರು. ಅಂಥವರು ಸತ್ಯವನ್ನು ನುಡಿದಾಗ ಮನಸ್ಸು ಸಿಟ್ಟಿಗೆದ್ದು ತಿಳಿ ಹೇಳಿದವರನ್ನು ನಂಬದೆ ಅವರನ್ನೇ ದೂಷಿಸಲು ತೊಡಗುತ್ತದೆ. ಅಂಥ ಮನಸ್ಸನ್ನು ಸುಟ್ಟುಹಾಕು; ಅದು ಸುಟ್ಟು ಪರಿಪಕ್ವವಾಗಲಿ ಎಂದು ತಮಗೆ ತಾವೇ ಹಿತೋಪದೇಶ ಮಾಡಿಕೊಳ್ಳುತ್ತಾರೆ. ಶರಣರು ಎಲ್ಲರಿಗೂ ಪ್ರಿಯವಾಗುವಂತೆ ಹೇಳಬೇಕೆಂದು ಸುಳ್ಳು ಹೇಳುವುದಿಲ್ಲ. ಮುಖಸ್ತುತಿ ಮಾಡುವುದಿಲ್ಲ. ಅವರು ಸತ್ಯವನ್ನು ಹೇಳುತ್ತಾರೆ, ವ್ಯಕ್ತಿಗೆ ಹಿತವಾದುದನ್ನು ಹೇಳುತ್ತಾರೆ. ತಪ್ಪಿದಲ್ಲಿ ತಿದ್ದಿ ಹೇಳುತ್ತಾರೆ. ಇಂಥ ಹಿತೋಪದೇಶಗಳು ಕೆಲವರಿಗೆ ಸೇರಿಕೆಯಾಗದೆ ಸಿಟ್ಟಿಗೇಳುತ್ತಾರೆ. ಇದು ಮನದ ದೌರ್ಬಲ್ಯ. ಈ ದೌರ್ಬಲ್ಯವನ್ನು ಗೆಲ್ಲಬೇಕಾದರೆ ವ್ಯಕ್ತಿಯು ಆತ್ಮಾವಲೋಕನ ಮಾಡಿಕೊಳ್ಳಲು ಕಲಿಯಬೇಕು. ಇತರರ ಮಾತು ತನಗೆ ಕನ್ನಡಿಯಂತೆ ಸ್ವರೂಪದರ್ಶನ ಮಾಡಿಸುತ್ತವೆ ಎಂದು ಅವುಗಳ ನೆರವಿನಿಂದ ಮನಸ್ಸಿನ ದೌರ್ಬಲ್ಯಗಳನ್ನು ಸುಡಬೇಕು.

40. ಮನದ ಅಧಿಕಪ್ರಸಂಗಿತನ

ಸುಡಲೀ ಮನವೆನ್ನನುಡುಹನ ಮಾಡಿತ್ತು,
ನಡೆವಲ್ಲಿ, ನುಡಿವಲ್ಲಿ, ಅಧಿಕನೆಂದೆನಿಸಿತ್ತು,
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ
ಕಡುಗೂರ್ಪ ಮಡದಿ ತಾ ಮುಟ್ಟಲಮ್ಮಳು.
ಒಡಲನುರಿಕೊಂಬುದು; ಒಡೆಯನರಸ ಕೊಂಬ !
ಮುನ್ನ ಮಾಡಿದ ಪಾಪ ತನ್ನ ಬೆನ್ನ ಬಿಡದನ್ನಕ್ಕ
ಇನ್ನು ನಿಮ್ಮ ಬಯಸಿದರುಂಟೇ ಲಿಂಗದೇವಾ ? - ಬ.ವ.ದೀ.38

ಈ ಮನಸ್ಸನ್ನು ಸುಟ್ಟು ಬಿಡಬೇಕು ಎನ್ನುವಷ್ಟು ಕೋಪ ಬಸವಣ್ಣನವರಿಗೆ ಬರುತ್ತಿದೆ. (ಇನ್ನೊಂದು ಅರ್ಥದಲ್ಲಿ ಅದನ್ನು ಸುಟ್ಟು ಪಕ್ವಗೊಳಿಸಬೇಕೆನ್ನುವ ಆಕಾಂಕ್ಷೆ ಕಾಣಬರುತ್ತದೆ.)

ಏಕೆಂದರೆ ಈ ಮನಸ್ಸು ವ್ಯಕ್ತಿಯನ್ನು ಉಡುಹನನ್ನಾಗಿ ಅರ್ಥಾತ್ (ಬೂಟಾಟಿಕೆಯ) ವೇಷಧಾರಿಯನ್ನಾಗಿ ಮಾಡಲು ಪ್ರಚೋದನೆ ನೀಡುತ್ತದೆ.

ವ್ಯಕ್ತಿಯು ದ್ವಂದ್ವ ನಿಲುವಿನಿಂದ ಕೂಡಿದವನಾಗಿರುತ್ತಾನೆ. ಹೊರಗಿನ ಸೋಗು ಒಂದು ಬಗೆಯದಾದರೆ ಒಳಗಿನ ಸೋಗು ಬೇರೆಯದೇ ಆಗಿರುತ್ತದೆ. ಬಾಯಲ್ಲಿ ಶರಣಾರ್ಥಿ, ಕಂಕುಳಲ್ಲಿ ದೊಣ್ಣೆ ಬಾಯಲ್ಲಿ ಬೆಣ್ಣೆ ಎದೆಯಲ್ಲಿ ಕತ್ತರಿ ಎಂಬಂತೆ ಮಾನವರ ವರ್ತನೆ ಇರುತ್ತದೆ. ನಡೆವಲ್ಲಿ ನುಡಿಯಲ್ಲಿ ಅಧಿಕನೆಂದೆನಿಸಿತ್ತು. ''ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು'' ಎಂಬಂತೆ, ಹೊರಗಡೆ ಆಢ್ಯತೆಯಿಂದ ದೊಡ್ಡ ಮನುಷ್ಯನೆಂಬಂತೆ ತೋರಿಸಿಕೊಳ್ಳುತ್ತಾನೆ. ಯಾರೂ ಈತನ ಹಿತೋಪದೇಶ ಕೇಳದಿದ್ದರೂ ತಾನು ಬಹಳ ವಿವೇಕಿಯಂತೆ ಹಿತೋಪದೇಶ ಹೇಳಲು ಹೋಗುವನು. ಈ ಬೂಟಾಟಿಕೆ ಏಕೆ ಬೇಕು? ಮನುಷ್ಯನಲ್ಲಿ ಬೆಡಗಿನ ಬದುಕಿಗೆ ಕಾರಣವಾಗುವ ಶಕ್ತಿಯು ಪತನಗೊಂಡು ಅವನು ಬಿದ್ದಾಗ ಅತ್ಯಂತ ಪ್ರೀತಿ ಪಾತ್ರಳಾದ ಪತ್ನಿಯು ಮುಟ್ಟಲು ಹಿಂಜರಿಯುವಳು. ಜೀವಾತ್ಮವು ದೇಹದಿಂದ ತೊಲಗಿದ ಬಳಿಕ ಶರೀರವನ್ನು ಬೆಂಕಿಯು ದಹಿಸುವುದು. ಹೊಟ್ಟೆ ತುಂಬ ಉಣ್ಣದೆ, ಪರರಿಗೆ ದಾನವನ್ನೂ ಮಾಡದೆ ಕೂಡಿಟ್ಟ ಹಣ -ಆಭರಣಗಳನ್ನು ರಾಜನು ವಶಪಡಿಸಿಕೊಳ್ಳುವುದು. ಅತ್ಯಂತ ಪ್ರೀತಿಪಾತ್ರಳು ಎಂದು ದೇವರಿಗಿಂತಲೂ ಮಿಗಿಲಾಗಿ ಹೆಂಡತಿಯನ್ನು ವ್ಯಕ್ತಿ ಪ್ರೀತಿಸುವನು. ಆದರೆ ಅವನ ಸಾವಿನ ನಂತರ ಮತ್ತೊಬ್ಬನು ಆಕೆಯನ್ನು ಪಡೆದುಕೊಳ್ಳುವನು.

ಇಂತಹ ವಿಲಕ್ಷಣ ಪರಿಸ್ಥಿತಿಯನ್ನು ಜೀವಿಯು ಹೊಂದಿದ್ದರೂ ಇದರ ಪರಿವೆ ಇಲ್ಲದಂತೆ ಹೆಣ್ಣು -ಹೊನ್ನು -ಮಣ್ಣಿಗಾಗಿ ವ್ಯಕ್ತಿಯು ಪರದಾಡುವನು, ಹೋರಾಡುವನು ಪಾಪ! ಅವನಾದರೂ ಏನು ಮಾಡುವನು ಹಿಂದೆ ಮಾಡಿದ ಪಾಪ ಕರ್ಮಗಳು ಇನ್ನೂ ಸವೆಯದೆ ಬೆನ್ನು ಹತ್ತಿವೆ. ಲಿಂಗದೇವನೇ, ಒಳ್ಳೆಯದನ್ನು ಅವನಿಂದ ನಿರೀಕ್ಷಿಸಿದರೆ ಹೇಗೆ ಸಿಗಲು ಸಾಧ್ಯ ?

41. ಕಾಯ ವಿಕಾರಗಳ ಕಾಟ

ವಚನದ ಹುಸಿನುಸುಳೆಂತು ಮಾಬುದೆನ್ನ ?
ಮನದ ಮರ್ಕಟತನವೆಂತು ಮಾಬುದೆನ್ನ?
ಹೃದಯದ ಕಲ್ಮಶವೆಂತು ಮಾಬುದೆನ್ನ ?
ಕಾಯವಿಕಾರಕ್ಕೆ ತರಸಲುವೋದೆನು
ಎನಗಿದು ವಿಧಿಯೆ ಲಿಂಗದೇವಾ ? - ಬ.ವ.ದೀ.39

ಮಾತಿನಲ್ಲಿ ಸುಳ್ಳು ಒಂದು ಮಹಾನ್ ಕೊಳೆ. ಸುಳ್ಳು ಹೇಳಬಾರದು ಎಂದು ಪ್ರಜ್ಞಾಪೂರ್ವಕವಾಗಿ ವ್ಯಕ್ತಿಯು ದೃಢ ಸಂಕಲ್ಪ ಮಾಡಿಕೊಂಡರೂ, ಅದು ಅವನಿಗೆ ಅರಿಯದಂತೆ ಪುಸಕ್ಕನೆ ನುಸುಳಿ ಬಂದು ಬಿಡುವುದು. ಇದನ್ನು ತಪ್ಪಿಸುವುದು ಹೇಗೆ? ಮನಸ್ಸಿನ ಕಪಿ ಚೇಷ್ಟೆಯಂತೂ ಅನಿಯಂತ್ರಿತ. ಸುಳ್ಳು ಹೇಳಬಾರದು ಎಂದು ಮೌನವ್ರತಧಾರಿಯಾಗಿ ಒಬ್ಬ ಕುಳಿತುಕೊಳ್ಳುತ್ತಾನೆ ಎಂದುಕೊಳ್ಳೋಣ. ಆದರೆ ಮನಸ್ಸು ಹಾಗಲ್ಲ; ವ್ಯಕ್ತಿ ಸುಮ್ಮನೇ ಕೂತರೂ ಜಗತ್ತನೆಲ್ಲ ಸುತ್ತಿ ಬರುತ್ತದೆ; ದೇಹವು ಪಾಪ ಮಾಡದಿದ್ದರೂ ಮನಸ್ಸು ಒಳಗೇ ಕುಳಿತು ಪಾಪವನ್ನು ಮಾಡುವ ಕಪಿತನವನ್ನು ಹೊಂದಿದೆ. ಇದರಿಂದ ಬಿಡುಗಡೆ ಹೊಂದುವುದು ಹೇಗೆ? ಹಲವಾರು ದುರ್ವಿಚಾರಗಳಿಂದ ಹೃದಯವು ಕಲುಷಿತಗೊಳ್ಳುವುದು; ಇದನ್ನು ಗೆಲ್ಲುವುದು ಹೇಗೆ ? ಶರೀರದ ಈ ಬಹುಬಗೆಯ ವಿಕಾರಗಳಿಂದ ವ್ಯಕ್ತಿಯು ಘಾಸಿಗೊಳ್ಳುವನು. ಇದೆಂತಹ ಹಣೆಬರಹ ?!

ಗುರು ಬಸವಣ್ಣನವರು ಈ ಜಗತ್ತಿನ ಜನರ ಸ್ವಭಾವದ ವಿಶ್ಲೇಷಣೆ ಮಾಡುವರು. ಆದರೆ ಅದನ್ನು ತಮ್ಮ ಮೇಲೆ ಹಾಕಿಕೊಂಡು ಹೇಳುವುದು ಅವರ ವಿಶಿಷ್ಟ ಶೈಲಿ. ಇಂತಹ ವಚನ ಓದಿ ಗುರು ಬಸವಣ್ಣನವರು ಇಷ್ಟು ದುರ್ಬಲರಿದ್ದರು ಎಂದು ತಪ್ಪು ಭಾವಿಸಬಾರದು. ಸ್ವತಂತ್ರ ವಿಚಾರವಂತರಾಗುವ ಮೊದಲು ಸಾಧಕವಸ್ಥೆಯಲ್ಲಿ ಬರೆದ ವಚನಗಳಿವು. ಇಂಥವುಗಳಲ್ಲಿ ವ್ಯಕ್ತಿಯು ವಿಧಿಯ ಕೈಗೊಂಬೆ ಎಂಬ ವಿಧಿವಾದ (Fatalism) ಇರುತ್ತದೆ. ಆದರೆ ಬರುಬರುತ್ತ ಜ್ಞಾನವು ಪಕ್ವವಾದಂತೆಲ್ಲ ವಿಧಿಯ ಕೈವಾಡಕ್ಕಿಂತಲೂ ಸೃಷ್ಟಿಕರ್ತನ ಅನುಗ್ರಹ ಶಕ್ತಿಶಾಲಿ. ಅದು ಏನನ್ನು ಬೇಕಾದರೂ ಮಾಡಬಲ್ಲುದು ಎಂಬ ವಿಚಾರಶೀಲತೆ, ಆತ್ಮವಿಶ್ವಾಸವು ಬೆಳೆಯುತ್ತ, ಬಲಿಯುತ್ತ ಹೋಗುವುದು. ★

ಮಾತೆಂಬುದು ಜ್ಯೋತಿರ್ಲಿಂಗ ಸ್ವರವೆಂಬುದು ಪರತತ್ವ
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ

☹ ಸಮಸ್ಯೆ ? - ಸಮಾಧಾನ ! ☺

☐ ಮಲ್ಲಿಕಾರ್ಜುನ ಕರ್ಜಗಿಮಠ, ಗೋಕಾಕ

? ಟಿ.ವಿ.9ದಲ್ಲಿ ಒಂದು ಸಂದರ್ಶನ ಬಂದಿತು. ಅದರಲ್ಲಿ ಕೊಪ್ಪಳದ ಕೆಲವು ತರುಣರು ಒಂದು ಆರೋಪ ಮಾಡಿದರು. ಲಿಂಗದೇವ ಎಂದು ಪ್ರಾರ್ಥಿಸುವವರು ಮಾತ್ರ ಬಸವ ಮಂಟಪಕ್ಕೆ ಬನ್ನಿರಿ. ಹಾಗೆ ಅನ್ನದವರು ಬರಬಾರದು ಎಂದು ಕಡ್ಡಾಯ ಮಾಡಿದ್ದೀರಂತೆ. ಹೌದೆ ?

★ ನಮ್ಮ ಬಸವ ಮಂಟಪಗಳಲ್ಲಿ ಪ್ರತಿವಾರ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ನೂರಾರು ಜನ ಭಾಗವಹಿಸುತ್ತಾರೆ. ಶರಣ ಮೇಳದಲ್ಲಿ ಸಾವಿರಾರು ಜನ ಪ್ರಾರ್ಥನೆಗೆ ಕೂಡುತ್ತಾರೆ. ಯಾರಿಗೂ ನಾವು ಕಡ್ಡಾಯ ಮಾಡುವುದಿಲ್ಲ. ಅವರ ಮನಸ್ಸಿನಲ್ಲಿ ಅವರು ತಮಗೆ ಸರಿ ಕಂಡಂತೆ ಪ್ರಾರ್ಥಿಸಬಹುದು. ರಾಷ್ಟ್ರೀಯ ಬಸವ ದಳದ ಸಕ್ರಿಯ ಸದಸ್ಯರಾದವರಿಗೆ ಮಾತ್ರ ಕೆಲವು ನಿಬಂಧನೆಗಳಿಗೆ ಬದ್ಧರಾಗಬೇಕೆಂದು ಕಡ್ಡಾಯ ಮಾಡಲಾಗುವುದು. ಒಂದು ಊರಿನಲ್ಲಿ ರಾ.ಬ.ದಳದ ಟ್ರಸ್ಟ್ ಮಾಡಬೇಕಾಗಿತ್ತು. ಕೆಲವು ಹಿರಿಯ ಸದಸ್ಯರನ್ನು ಸಮಿತಿಗೆ ತಗೋಬೇಕಿತ್ತು. ಒಬ್ಬರು ಹಿರಿಯರು ಇಷ್ಟಲಿಂಗವನ್ನೇ ಧರಿಸುತ್ತಿರಲಿಲ್ಲ. ಇನ್ನೊಬ್ಬರು ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳ ಪ್ರವಚನ ನಡೆಯುತ್ತಿದ್ದರೆ ಕೇಳುವುದು ಬಿಟ್ಟು ಆ ಸಮಯದಲ್ಲಿ ಟೈಂ ಪಾಸ್‌ಗೆ ಇಸ್ಪೀಟು ಆಡುತ್ತಿದ್ದರು. ರಾ.ಬ.ದಳ ಉಳಿದ ಕ್ಲಬ್‌ಗಳಂತೆ ಸದಸ್ಯರನ್ನು ಹೊಂದಬಾರದು. ಬಸವ ತತ್ವವನ್ನು ಅನುಷ್ಠಾನ ಮಾಡುವವರ ಸಮಿತಿಯಾಗಬೇಕು ಎಂದು ಟ್ರಸ್ಟಿಗೆ ಆ ಇಬ್ಬರು ಹಿರಿಯರನ್ನು ತಗೊಳ್ಳಲಿಲ್ಲ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ ಪರೀಕ್ಷೆಗೆ ಸಹ ಇಷ್ಟು ಬಾರಿ ಅವಕಾಶ ಎಂದು ನಿಗದಿ ಪಡಿಸಿ ಆ ಅವಧಿಯಲ್ಲಿ ತೇರ್ಗಡೆಯಾಗದಿದ್ದರೆ ನಂತರ ಪರೀಕ್ಷೆಗೆ ಕುಳಿತುಕೊಳ್ಳಲು ಬಿಡುವುದಿಲ್ಲವಷ್ಟೆ. ಅಂದಾಗ "ಲಿಂಗದೇವ" ಬೆಳಕಿಗೆ ಬಂದು 12 ವರ್ಷ ದಾಟಿವೆ. ಇನ್ನೂ ಅದನ್ನು ಅರ್ಥ ಮಾಡಿಕೊಳ್ಳಲು ಆಗದೆ "ನಪಾಸು ಆದವರು" ರಾ.ಬ.ದಳದ ಪ್ರಾರ್ಥನೆಗೆ ಬರುವುದೇಕೆ? ರಾ.ಬ.ದಳವು ಬಸವ ಧರ್ಮ ಪೀಠದ ಅಂಗಸಂಸ್ಥೆ. ಧರ್ಮ ಪೀಠವು ನೀಡುವ ಆದೇಶವನ್ನು ಪಾಲಿಸಬೇಕಾದುದು ಅದರ ಕರ್ತವ್ಯ. ಪಾಲಿಸಲು ಇಷ್ಟವಿಲ್ಲದವರು ಪ್ರಾಮಾಣಿಕರಿದ್ದರೆ ತಾವಾಗಿಯೇ ರಾ.ಬ.ದಳ ಬಿಟ್ಟು ಬಿಡಬೇಕು. ನಾನು ಇಷ್ಟು ಕಟುವಾಗುತ್ತಿರುವುದೇಕೆ ಎಂದರೆ ಇಂದಿನ ಲಿಂಗಾಯತ ಸಮಾಜವು ಲಿಂಗ ನಿಷ್ಠೆಯಿಲ್ಲದೆ, ಶಿಸ್ತಿಲ್ಲದೆ, ಸಾಮೂಹಿಕ ಪ್ರಾರ್ಥನೆಯಂಥ ಸಾಮೂಹಿಕ ಕೂಡಾಟವಿಲ್ಲದೆ ವಿರೂಪ ಗೊಂಡಿದೆ. ಕೆಲವರಾದರೂ ತತ್ವನಿಷ್ಠರಾದ ಗಟ್ಟಿಕಾಳುಗಳು - ಬೀಜದ ಕಾಳಿನಂತೆ ತಯಾರಾದರೆ ಅವರಿಂದಲಾದರೂ ಮುಂದೆ ಒಂದು ಉತ್ತಮ ತತ್ವನಿಷ್ಠ ಪೀಳಿಗೆ ರೂಪುಗೊಳ್ಳಬಹುದು ಎಂಬ ಆಶಯ ನನ್ನದು. ಅದಕ್ಕಾಗಿಯೇ ಲಿಂಗದೇವನನ್ನು ಪ್ರತಿಷ್ಠಾಪಿಸುತ್ತಿರುವುದು.

☐ ಬಸವ ಪ್ರಭು, ಬೀದರ್

? ಬಸವ ಕೇಂದ್ರದವರು ಅಕ್ಕಮಹಾದೇವಿ ವಚನಾಂಕಿತ ವಿರುದ್ಧ ಧರಣಿ ಸತ್ಯಾಗ್ರಹ, ಪ್ರತಿಭಟನೆ ಮಾಡುತ್ತಿದ್ದಾರಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯ?

★
ಕೋಡಗವೇಡಿಸಬೇಡೆಂದಡೆ ಮಾಣದಯ್ಯಾ
ತೋಡುವ ಹೆಗ್ಗಣ ಮಾಳಿಗೆ ಎಂದಡೆ ಮಾಣದಯ್ಯಾ
ಗಾಡಿಗ ದೂಷಕನವರವರನಾಡುವದೆ ನೇಮ
ಲಿಂಗದೇವಾ, ಇದವರ ಕಾಯಕವಯ್ಯ. ಬ.ವ.ದೀ.973

ಇವರಿಗೆ ವಿಧಾಯಕ(Creative)ವಾಗಿ ಒಂದು ಕೆಲಸ ಮಾಡಲು ಬರದು. ಹೀಗಾಗಿ ನಮ್ಮನ್ನು ವಿರೋಧಿಸಿ ಸುದ್ದಿಯಲ್ಲಿರಲು ಬಯಸುತ್ತಾರೆ. ಇವರ ಮುರುಘಾ ಶರಣರು ಮಾಡುತ್ತಿರುವ ಕೆಲಸ, ಕೊಡುತ್ತಿರುವ ಹೇಳಿಕೆಗಳನ್ನು ಪ್ರತಿಭಟಿಸಲು ಹೋದರೆ ನಾವು ವರ್ಷ ಪೂರ್ತಿ ಅದೇ ಕೆಲಸ ಮಾಡುವಷ್ಟು ಸರಕಿದೆ. ನಮಗೆ ಮಾಡಲು ಸಾಕಷ್ಟು ಕೆಲಸಗಳಿರುವುದರಿಂದ ಮುರುಘಾ ಶರಣರದು ಬಾಲಿಶ ಹೇಳಿಕೆಗಳೆಂದು ನಕ್ಕು ಸುಮ್ಮನಾಗುತ್ತೇವೆ.

☐ ನಾಗಶೆಟ್ಟಿ ಶೆಟಕಾರ್, ಬೀದರ್

? ನೀವು ಯಾವಾಗಲೂ ವಿವಾದವನ್ನು ಸೃಷ್ಟಿಸುತ್ತೀರೆಂದು ಕೆಲವರು ಅನ್ನುತ್ತಾರೆ. ಹೀಗೇಕೆ ?

★ ನಾನು ಯಾವ ವಿವಾದವನ್ನೂ ಸೃಷ್ಟಿಸುವುದಿಲ್ಲ. ನಾನು ಒಂದು ಉತ್ತಮ ಕೆಲಸ ಮಾಡಿದರೂ ಅದನ್ನು ವಿವಾದಗ್ರಸ್ತವನ್ನಾಗಿ - ಕೆಲವರು ಮಠಾಧೀಶರು, ಅವರ ಹಿಂಬಾಲಕರು, ನಮ್ಮ ರಾಷ್ಟ್ರೀಯ

ಬಸವ ದಳದಿಂದ ಹೊರಹಾಕಲ್ಪಟ್ಟವರು, ತಾವಾಗಿಯೇ ಹೊರಗೆ ಹೋದವರು, ನಮ್ಮನ್ನು ಸದಾ ದ್ವೇಷಿಸುವವರು, ಮಾಡುತ್ತಾರೆ. ಒಂದು ಒಳ್ಳೆಯ ವಿಷಯವನ್ನು ಪ್ರತಿಪಾದಿಸಿದರೂ ಅದನ್ನು ಅರಿತುಕೊಳ್ಳುವ ಸೌಜನ್ಯವು ಇಲ್ಲದೆ ಹುಯಿಲೆಬ್ಬಿಸುವರು. ಇದಕ್ಕೆ ನಾವೇನು ಮಾಡೋಣ ?

☐ ಡಾ|| ಶಿವನಗೌಡ ಪಾಟೀಲ್, ಸಂಕೇಶ್ವರ

? ದಿನಾಲೂ ಸುಪ್ರಭಾತದಲ್ಲಿ ಕ್ರಮಬದ್ಧವಾಗಿ ಇಷ್ಟಲಿಂಗ ಪೂಜೆ ಮಾಡಿಕೊಂಡರೆ ಅಂದು ಎಲ್ಲ ಕೆಲಸಗಳೂ ಸುಸೂತ್ರವಾಗಿ ಆಗುತ್ತವೆ. ಮನಸ್ಸು ಶಾಂತವಾಗಿ ಪ್ರಸನ್ನವಾಗಿ ಇರುತ್ತದೆ. ಹಾಗೆ ಮಾಡದೆ ಅವಸರದಿಂದ ಅರ್ಧಂಬರ್ಧ ಮಾಡಿಕೊಂಡರೆ ಅಂದು ಯಾವುದೂ ಸಮರ್ಪಕವಾಗಿ ಕೆಲಸಗಳಾಗುವುದಿಲ್ಲ. ಇದು ಮನಸ್ಸಿನ ಭ್ರಾಂತಿಯೆ ?

★ ಭ್ರಾಂತಿಯಲ್ಲ ವಾಸ್ತವಿಕ. ಅದಕ್ಕೇ ಧರ್ಮಪಿತರು ಹೇಳಿರುವುದು.

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವವು ಅಪಮೃತ್ಯು ಕಾಲಕರ್ಮಂಗಳಯ್ಯ
ದೇವ ಪೂಜೆಯು ಮಾಟ ದುರಿತ ಬಂಧನದೋಟ

ನಿಷ್ಠೆ ಮತ್ತು ಶದ್ಧೆಯಿಂದ ಪೂಜೆ ಮಾಡಿಕೊಂಡರೆ ಎಲ್ಲ ವಿಘ್ನಗಳೂ ನಿವಾರಣೆಯಾಗಿ ಕೆಲಸಗಳು ಸುಸೂತ್ರವಾಗಿ ಸಾಗುವವು. ಮನಸ್ಸಿನ ಶಾಂತಿ ಪ್ರಸನ್ನತೆ ಬಹಳ ಮುಖ್ಯ. ಪೂಜೆಯಿಂದ - ಪ್ರಾರ್ಥನೆಯಿಂದ ಅಂಥ ಶಾಂತಿ - ಪ್ರಸನ್ನತೆ ದೊರೆಯುತ್ತದೆ. ಕೆಲಸಗಳೂ ಹೂವಿನಷ್ಟು ಹಗುರವಾಗಿ ಆಗುತ್ತದೆ.

☐ ರವಿಶೇಖರ್ ನಿಡಗುಂದಿ, ಬೆಂಗಳೂರು

? ನೀವು ಬಹಳ ಹಠವಾದಿಗಳು. ಹಿಡಿದ ಪಟ್ಟನ್ನು ಸಡಲಿಸುವುದೇ ಇಲ್ಲ ಎಂಬ ಆರೋಪವನ್ನು ಕೆಲವರು ಮಾಡುವರಲ್ಲ.

★ ಹಠ ಮತ್ತು ಛಲ ಇವೆರಡರ ಮಧ್ಯದ ವ್ಯತ್ಯಾಸವನ್ನು ಗುರುತಿಸಿಕೊಳ್ಳಬೇಕು. ಒಂದು ಸುಭಾಷಿತ ಹೇಳುತ್ತದೆ. ಕೆಲವರು ಕಷ್ಟಗಳು ಬರುತ್ತವೆಂದು ಯಾವ ಕೆಲಸವನ್ನೂ ಮಾಡುವುದಿಲ್ಲ. ಮತ್ತೆ ಕೆಲವರು ಕಷ್ಟಗಳು ಬಂದಾಗ ಎದುರಿಸಿ ಮುನ್ನಡೆಯುತ್ತಾರೆ. ಮತ್ತೆ ಕೆಲವರು ಕಷ್ಟಗಳು ಬರುತ್ತವೆಂದು ತಿಳಿದೇ ಕಾರ್ಯೋನ್ಮುಖರಾಗುತ್ತಾರೆ. ಯಾವ ಧ್ಯೇಯಾದರ್ಶವೂ ಇಲ್ಲದೆ ಮಾಡುವುದು ಹಠವಾದರೆ ಒಂದು ವಿಶಿಷ್ಟ ಧ್ಯೇಯಕ್ಕಾಗಿ ತಾಳುವುದು ಛಲವಂತಿಕೆ. ಲಿಂಗದೇವ ತತ್ವದ ಪ್ರತಿಷ್ಠಾಪನೆ ನಿಂತಿರುವುದು ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ ಎಂಬ ಬಸವ ವಾಣಿಯ ಬಲದ ಮೇಲೆ. ನನ್ನದು ಛಲವೇ ವಿನಾ ಹಠವಲ್ಲ.

☐ ಚಂದ್ರಕಾಂತ ಮೂಲೀಮನಿ, ಹುಬ್ಬಳ್ಳಿ

? ದಿ.3-8-2008ರ ಪ್ರಜಾವಾಣಿಯಲ್ಲಿ ಎಂ.ಎಂ.ಕಲಬುರ್ಗಿಯವರ ಹೇಳಿಕೆ ಬಂದಿದೆ. ವಚನಾಂಕಿತ ವಿಷಯದಲ್ಲಿ ಬೇಕಾದರೆ ಸಂವಾದ ಏರ್ಪಡಿಸಲಿ ಎಂದು ಸವಾಲು ಹಾಕಿದ್ದಾರೆ. ಅಹುದು ಚರ್ಚೆಯನ್ನು ಏರ್ಪಡಿಸಬಹುದಲ್ಲ ?

★ ಸಾಹಿತಿಗಳೆಲ್ಲ ತತ್ವಜ್ಞಾನಿಗಳಲ್ಲ, ತತ್ವಜ್ಞಾನಿಗಳೆಲ್ಲ ಅನುಭಾವಿಗಳಲ್ಲ, ಅನುಭಾವಿಗಳೆಲ್ಲ ದಾರ್ಶನಿಕರಲ್ಲ. ಡಾ|| ಚಿದಾನಂದ ಮೂರ್ತಿಯವರಂತಹ ಸಾಹಿತಿಗಳ ಕೊರಳಲ್ಲಿ ಇಷ್ಟಲಿಂಗವೇ ಇರದು. ಇನ್ನು ಇಷ್ಟಲಿಂಗ ನಿಷ್ಠೆ ಬಗ್ಗೆ ಅವರೊಡನೆ ಚರ್ಚಿಸಲು ಸಾಧ್ಯವೆ ? ಅನೇಕ ಸಾಹಿತಿಗಳಿಗೆ ವಚನ ಸಾಹಿತ್ಯಾಧ್ಯಯನ ಒಂದು ವೃತ್ತಿ. ಭಾವನಾತ್ಮಕ ನಂಟು ಅವರಿಗಿರದು. ನಮಗೆ ಹಾಗಲ್ಲ ವಚನ ವಾಙ್ಮಯ ನಮ್ಮ ಬದುಕು, ಪ್ರಾಣ. ಲಿಂಗನಿಷ್ಠೆ ನಮ್ಮ ಬದುಕಿನ ಜೀವಾಳ ; ಇದೆಲ್ಲಕ್ಕಿಂತ ಮಿಗಿಲಾಗಿ ಈಗ ಕಾಲವು ಬಹಳ ದಾಟಿ ಹೋಗಿದೆ. ಪ್ರೇಮ ವಿವಾಹಕ್ಕೆ ಹುಡುಗ - ಹುಡುಗಿ ಬಯಸಿದ ಹಂತವಾದರೆ ನೀವು ಒತ್ತಾಯದಿಂದ ಬಿಡಿಸಬಹುದು. ಮದುವೆಯಾಗಿ, ಮಕ್ಕಳಾಗಿ ಸುಖಿ ಸಂಸಾರದಲ್ಲಿ ಇರುವಾಗ ಉಭಯತರನ್ನು ಬಿಡಿಸುವುದು ಕಷ್ಟವಲ್ಲವೆ? ಹಾಗೆ ನಮ್ಮ ಶರಣ ಬಂಧುಗಳು ಲಿಂಗದೇವ ನಿಷ್ಠೆಯನ್ನು ಬೆಳಸಿಕೊಂಡು ಬಿಟ್ಟಿದ್ದಾರೆ. ಗುರು ಬಸವಣ್ಣನವರ ತತ್ವ - ಸಿದ್ಧಾಂತಗಳ ಹಿನ್ನೆಲೆಯಲ್ಲಿ ಲಿಂಗದೇವ ವಚನಾಂಕಿತವೇ ಸೂಕ್ತ! ಅದನ್ನು ವಚನ - ಪ್ರಾರ್ಥನೆ, ಲಿಂಗಪೂಜೆಯಲ್ಲೂ ಅಳವಡಿಸಿಕೊಂಡಿದ್ದಾರೆ.

☐ ಎಂ.ಆರ್.ಪಂಪನಗೌಡ, ಮುನಿರಾಬಾದ್

? ಶಿವಣ್ಣ ಇಜೇರಿ ಎಂಬುವವರು ಎಂ.ಎಂ.ಕಲಬುರ್ಗಿಯವರು ಲಿಂಗಾಯತ ಪದದ ಬಗ್ಗೆ ತಿಳಿಯುವುದು, ವೀರಶೈವದ ಭ್ರಾಂತಿಯಿಂದ ಹೊರಬರುವುದು ಬಹಳ ತಡವಾಯಿತು. 10-15 ವರ್ಷಗಳ

ಹಿಂದೆಯೇ ಹೊರಬಂದಿದ್ದರೆ ಒಳ್ಳಿತಾಗುತ್ತಿತ್ತು ಎಂದಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ ಈ ನಿಧಾನ ಗತಿಯ ಪರಿವರ್ತನೆಯಿಂದಲೇ ಸಮಾಜಕ್ಕೆ ಹಾನಿಯಾಗಿರುವುದು. ವೀರಶೈವ -ಲಿಂಗಾಯತ ಬೇರೆ ಬೇರೆ ಎಂಬುದನ್ನು ಸ್ಪಷ್ಟವಾಗಿ ಚಿತ್ರಿಸಿದ್ದು ನಾನು. ಈ ಬಗ್ಗೆ ನಾನು ಇಂಗ್ಲೆಂಡಿಗೆ 1976ರಲ್ಲಿ ಹೋಗಿ ಬಂದ ತಕ್ಷಣ ಚೆನ್ನಾಗಿ ಖಚಿತಪಡಿಸಿಕೊಂಡು 1977ರಲ್ಲಿ ಒಂದು ಚಿಂತನಗೋಷ್ಠಿ ಏರ್ಪಡಿಸಿದ್ದೆವು. ಆಗ ಸಾಕಷ್ಟು ವಿಷಯ ಪ್ರತಿಪಾದಿಸಿದರೂ, ಇವರೆಲ್ಲ ಸ್ವೀಕರಿಸಲಿಲ್ಲ. ತಡವಾಗಿ ಅರ್ಥ ಮಾಡಿಕೊಂಡಿದ್ದಾರೆ. ವೀರಶೈವದ ಭ್ರಾಂತಿಯಿಂದ ಸರ್ಕಾರಿ ಪ್ರಕಟಣೆಯ ಹಲವಾರು ಸಂಪುಟಗಳೂ ಪ್ರಕ್ಷಿಪ್ತ ವಚನಗಳಿಂದ ಕಲುಷಿತವಾಗಿವೆ. ಒಂದು ವೇಳೆ ಬಸವ ಧರ್ಮದ ಬಗ್ಗೆ ಪ್ರಾಮಾಣಿಕ ಶ್ರದ್ಧೆಯುಳ್ಳವರು ಯಾರೇ ಆಗಿರಲಿ ಅವರಿಗೆ ಲಿಂಗದೇವ ವಚನಾಂಕಿತ ಬದಲಾವಣೆಯೂ ಸೂಕ್ತವಾಗಿ ಕಾಣುವ ದಿನ ದೂರವಿಲ್ಲ. ನೀವು ಹೇಳುವಂತೆ 10- 15 ವರ್ಷಗಳ ನಂತರ ಲಿಂಗಾಯತ ಧರ್ಮ ಕುರಿತು ಮನವರಿಕೆಯಾಗಿದೆ ಎಂಬುದೇ ಸತ್ಯವಾದರೆ, ಅವರ ಗ್ರಹಣ ಶಕ್ತಿ ಎಷ್ಟು ನಿಧಾನ ಗತಿಯದು ಎಂಬುದು ಮನವರಿಕೆಯಾಗುತ್ತದೆ. ನನಗೆ ಆ ವೇಗಕ್ಕೆ ಇಳಿಯಲು ಸಾಧ್ಯವಿಲ್ಲ, ನಮ್ಮ ವೇಗಕ್ಕೆ ಇತರರು ಹೆಜ್ಜೆ ಹಾಕಲಾರರು; ಏನು ಮಾಡೋಣ ! ಸತ್ಯವು ಮನವರಿಕೆಯಾಗದೆ ವಿವಾದ ಏಳುತ್ತದೆ.

2. ? ಬಸವ ಮಾರ್ಗ ಪತ್ರಿಕೆಯ ಜನವರಿ 2008ರ ಸಂಚಿಕೆ ಪುಟ 23ರಲ್ಲಿ ಶ್ರೀ ಎಂ.ಎಂ.ಕಲಬುರ್ಗಿ ಹೇಳುತ್ತಾರೆ. ಬಸವಣ್ಣನ ಬದುಕಿನಲ್ಲಿ 3 ಘಟ್ಟಗಳಿವೆ. ಒಂದು ಬಾಗೇವಾಡಿ, ಎರಡು ಕೂಡಲ ಸಂಗಮ, ಮೂರು ಕಲ್ಯಾಣ. ಬಾಗೇವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ ಬರುತ್ತಾನೆ. ಕೂಡಲ ಸಂಗಮದಲ್ಲಿ ಸ್ಥಾವರಲಿಂಗದಿಂದ ಇಷ್ಟಲಿಂಗಕ್ಕೆ ಸಾಗುತ್ತಾನೆ. ಕಲ್ಯಾಣದಲ್ಲಿ ಇಷ್ಟಲಿಂಗದಿಂದ ಜಂಗಮಕ್ಕೆ ಹೋಗುತ್ತಾನೆ. ಈ ಬಗ್ಗೆ ತಮ್ಮ ಅನಿಸಿಕೆ ಏನು ?

★ ಇದರಲ್ಲಿ ಅರ್ಥಕ್ಕೆ ನಮ್ಮ ಅನುಮೋದನೆಯಿದೆ. ಮೊದಲನೆಯದಾಗಿ ಕಲಬುರ್ಗಿಯವರ ಭಾಷೆಯನ್ನು ಬರೆಯಲು ಹೋಗಿ ಧರ್ಮಪಿತರ ಬಗ್ಗೆ ಏಕವಚನ ನಾನು ಬಳಸಿ ಬರುತ್ತಾನೆ, ಸಾಗುತ್ತಾನೆ. ಹೋಗುತ್ತಾನೆ ಎಂದು ಧರ್ಮಗುರುವಿಗೆ ಅಪಚಾರ ಮಾಡಿದ್ದೇನೆ. ಇದಕ್ಕಾಗಿ ಲಿಂಗದೇವನು -ಧರ್ಮಪಿತರು ನನ್ನನ್ನು ಕ್ಷಮಿಸಲಿ. ನಮ್ಮ ಸಾಹಿತಿಗಳ ಭಾಷೆ ಸುಧಾರಿಸಲು ಇನ್ನೂ ಎಷ್ಟು ಕಾಲ ಬೇಕೋ! ಇನ್ನೂ ಧರ್ಮಪಿತ ಬಸವಣ್ಣನವರ ವ್ಯಕ್ತಿತ್ವ, ಸ್ಥಾನಮಾನದ ಅರಿವು ಅವರುಗಳಿಗೆ ಆಗೇ ಇಲ್ಲ.

ಈ ವರ್ಗೀಕರಣವನ್ನು ನಾನು 1995ರಲ್ಲೇ ಮಾಡಿ ಲಿಂಗದೇವವನ್ನು ಬಳಕೆಗೆ ತಂದಿರುವುದು. ಮೊದಲನೆಯ ಘಟ್ಟದಲ್ಲಿ ಅವರ ಮನೆತನ ಬಹುದೇವತೋಪಾಸಕ ಆಚರಣೆಯಲ್ಲಿತ್ತು. ಅದನ್ನು ಪ್ರತಿಭಟಿಸಿ ಮನೆ ತೊರೆದು ಕೂಡಲ ಸಂಗಮಕ್ಕೆ ಬಂದರು, ಕ್ಷೇತ್ರದ ಅಧಿದೈವ ಕೂಡಲ ಸಂಗಮೇಶ್ವರನ ಅರ್ಚಕರಾಗಿ ಕೂಡಲ ಸಂಗಮದಲ್ಲಿ 12 ವರ್ಷ ಏಕದೇವತಾ ಉಪಾಸಕರಾಗಿ (Monodeitist) ಇದ್ದು ಸಾಧನೆ ಮಾಡಿದರು. ನಂತರ ಸಾಕ್ಷಾತ್ಕಾರವಾಯಿತು. ನಿರಾಕಾರ ದೇವನ ಪರಿಕಲ್ಪನೆ ಮೂಡಿತು. ಆ ದೇವನನ್ನು ಲಿಂಗದೇವನೆಂದು ಕರೆದು, ಅವನ ಸಾಕಾರವಾಗಿ ಇಷ್ಟಲಿಂಗದೇವನೆಂಬ ಕುರುಹನ್ನು ಕೊಟ್ಟು ಏಕದೇವೋಪಾಸಕರಾದರು, ಲಿಂಗಾಯತ ಧರ್ಮವೆಂಬ ಹೊಸ ಧರ್ಮವನ್ನು ಸ್ಥಾಪಿಸಿಕೊಟ್ಟರು. ಕಲಬುರ್ಗಿಯವರು ``ಇಷ್ಟಲಿಂಗದಿಂದ ಜಂಗಮಕ್ಕೆ ಹೋಗುತ್ತಾನೆ. ಎಂದು ಬರೆದಿದ್ದಾರೆ. ಇದು ತಪ್ಪು, ಸ್ಥಾವರದಿಂದ (ಅದನ್ನು ಬಿಟ್ಟು) ಇಷ್ಟಲಿಂಗಕ್ಕೆ ಬಂದರು. ಆದರೆ ಇಷ್ಟಲಿಂಗ ಬಿಟ್ಟು ಜಂಗಮವನ್ನು ಹಿಡಿಯಲಿಲ್ಲ. ಆತ್ಮ ಮುಖಿ, ದೇವ ಮುಖಿಯಾಗಿ ಇಷ್ಟಲಿಂಗ ಹಿಡಿದೇ ಜಂಗಮವನ್ನು ಹಿಡಿದರು. ಅರ್ಥಾತ್ ಸಮಾಜ, ಸಮಷ್ಟಿ ಮುಖಿಯಾದರು. ಒಂದೊಂದು ಪದವನ್ನು ಬಳಸುವಾಗಲೂ ಅದು ಮಾಡುವ ತಾತ್ವಿಕ ಪರಿಣಾಮವನ್ನು ಯಾವಾಗಲೂ ಗಮನಿಸಬೇಕು.

ಶಿವರಾಜ ಪಾಟೀಲ್, ಅತಿವಾಳ, ಬೀದರ್

? ದಿ.6-8-2008ರ ಕಾರ್ಯಕ್ರಮಕ್ಕೆ ಬಂದಿದ್ದೆ. ಅಂದು ಬೆಳಿಗ್ಗೆ ಶ್ರೀ ಅರವಿಂದ ಜತ್ತಿಯವರಿಗೆ ಫೋನ್ ಮಾಡಿದ್ದೆ. ಅವರು ಈ ವಚನಾಂಕಿತ ಬದಲಾವಣೆ ಕುರಿತು ಒಂದು ಸಂವಾದ ಏರ್ಪಡಿಸೋಣ ಎಂಬ ಆಸಕ್ತಿ ತೋರಿಸಿದರು. ನಿಮ್ಮ ಅಭಿಪ್ರಾಯವೇನು ?

★ ಸಂವಾದದ ಹಂತವನ್ನು ಈ ವಿಷಯ ದಾಟಿದೆ. ಬಸವ ವಚನ ದೀಪ್ತಿ 1996ರಲ್ಲಿ ಬಿಡುಗಡೆ ಯಾದಾಗ ಅರೆ ಭಕ್ತರಲ್ಲದೆ , ನಮ್ಮ ಅಭಿಮಾನಿಗಳಲ್ಲೂ ವಿಷಯ ತಿಳಿಯದೆ ಗೊಂದಲವಾಗಿತ್ತು. 12 ವರ್ಷಗಳ ಅವಧಿಯಲ್ಲಿ ಅಸಂಖ್ಯಾತ ಜನ ಲಿಂಗದೇವನ ಸ್ತುತಿ ಮಾತ್ರವಲ್ಲದೆ ವಚನಾಂಕಿತವಾಗಿಯೂ ಅಳವಡಿಸಿಕೊಂಡಿದ್ದಾರೆ. ಹೀಗಾಗಿ ನಮ್ಮ ಭಕ್ತಿ ಮತ್ತು ಸಾಹಿತ್ಯದ ಅವಿಭಾಜ್ಯ ಅಂಗವಾಗಿ ಲಿಂಗದೇವವು ಬಳಕೆಯಾಗುತ್ತಿದೆ. ಆದ್ದರಿಂದ ಇನ್ನು ಅದರ ಮಹತ್ವವನ್ನು ಹೆಚ್ಚು ಹೆಚ್ಚು ಜನರಿಗೆ ಮನವರಿಕೆ

ಮಾಡಿಕೊಡುವುದೇ ವಿನಾ ಸಂವಾದ ಮುಂತಾಗಿ ಇಲ್ಲವೇ ಇಲ್ಲ. ಬದಲಾವಣೆಗೆ ಅವಕಾಶವೇ ಇಲ್ಲ ಅಂದಾಗ ಇನ್ನು ಚರ್ಚಿಸಿ ಸಮಯಹರಣ ಮಾಡುವುದೇಕೆ ?

ನಾಗರಾಜು ನಿಂಬರ್ಗಿ, ಫರಹತಾಬಾದ, ಗುಲಬರ್ಗಾ

? ಶ್ರೀ ಎಂ.ಎಂ.ಕಲಬುರ್ಗಿಯವರು ಗಂಗಾವತಿಯಿಂದ ನೀಡಿರುವ ಒಂದು ಹೇಳಿಕೆ (ಪ್ರಜಾವಾಣಿ ದಿ.3-8-08)ಯಲ್ಲಿ ವಚನಾಂಕಿತ ವಿರೂಪ ಒಂದು ಪಾಪದ ಕೃತ್ಯ ಎಂದು ಹೇಳಿದ್ದಾರಲ್ಲ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ?

★ ಪಾಪ -ಪುಣ್ಯಗಳ ಪರಿಕಲ್ಪನೆ ಬಗ್ಗೆ ನಾವು ಗಂಟೆಗಟ್ಟಲೆ ವಿವರಣೆ ಕೊಡಬಲ್ಲ ಸಾಮರ್ಥ್ಯ ಹೊಂದಿದ್ದೇವೆ. ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಪ್ರಯೋಗಿಸಿರುವ ಲಿಂಗದೇವ ಅಂತರಾರ್ಥವನ್ನು ವಿರೂಪಗೊಳಿಸದೆ ನೇರ ಮತ್ತು ಸ್ಪಷ್ಟಗೊಳಿಸುತ್ತದೆ. 15-16ನೆಯ ಶತಮಾನದಲ್ಲಿ ಶೈವ/ವೀರಶೈವ ವಾದವನ್ನು ತೂರಿಸುವ ಮೂಲಕ ಕೆಲವರು ವಿರೂಪಗೊಳಿಸಿದ್ದನ್ನು ಈಗ ಸೈದ್ಧಾಂತಿಕವಾಗಿ ಸರಿಪಡಿಸಲಾಗಿದೆ. ಕೈ ಮುರಿದವನು ಅಪರಾಧಿಯೇ ವಿನಾ ಕೈಗೆ ಪ್ಲಾಸ್ಟರ್ ಹಾಕಿ ಸರಿಪಡಿಸಿದ ವೈದ್ಯ ಅಪರಾಧಿಯಲ್ಲ. ಇನ್ನು ಅಕ್ಕಮಹಾದೇವಿಯ ವಚನಾಂಕಿತವನ್ನು ವಿರೂಪ ಗೊಳಿಸದೆ, ಚನ್ನಮಲ್ಲಿಕಾರ್ಜುನ ಹಾಗೆಯೇ ಇಟ್ಟು ಅದು ನಿರ್ದೇಶಿಸುವ ಧ್ಯೇಯ ವಸ್ತು ಪರಮಾತ್ಮನನ್ನು ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿವರಿಸಲಾಗಿದೆ. ಇದು ಪುಣ್ಯದ ಕೆಲಸವೇ ವಿನಾ ಪಾಪದ ಕೆಲಸವಲ್ಲ.

ಶಾಂತಾ ಬಿರಾದರ, ಬೀದರ್

? ಬಸವ ಕೇಂದ್ರದವರು ನಿಮ್ಮ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ, ಪ್ರತಿಕೃತಿಯನ್ನು ದಹನ ಮಾಡಿದರು. ನೋಡಿ ನಮಗೆ ಬಹಳ ದುಃಖವಾಯಿತು. ಇದು ಸಂಸ್ಕೃತಿಯೆ?

★ ಅದು ಬಸವ ಕೇಂದ್ರದವರ ಸಹಜ ಸಂಸ್ಕೃತಿ. ನೀವು ಪತ್ರಿಕೆಗಳನ್ನು ಓದುತ್ತಿಲ್ಲವೆ ? ಅವರ ಗುರುಗಳ ಆದೇಶವೇ ಹಾಗಿದೆ. ಗುರುವಿನಂತೆ ಶಿಷ್ಯರು, ತಾಯಿಯಂತೆ ಮಕ್ಕಳು, ಮೈಸೂರಿನಲ್ಲಿ ಮುರುಘಾ ಶರಣರು ಚಪ್ಪಲಿ ಹಾರ ಹಾಕುವ ಸಂಸ್ಕೃತಿ ಆರಂಭಿಸಲು ಕರೆ ನೀಡಿದ್ದಾರೆ. ಅದರಂತೆ ಅವರ ಮಾರ್ಗದರ್ಶನದಲ್ಲಿ ನಡೆಯುವ ಬಸವ ಕೇಂದ್ರದವರು ಮುನ್ನಡೆದಿದ್ದಾರೆ.

ನೀಲಾಂಬಿಕಾ ಪಾಟೀಲ್, ಬೀದರ್

? ವಚನಾಂಕಿತ ಬದಲಾವಣೆ ಮಾಡಿದ್ದೀರೆಂದು ನಿಮ್ಮನ್ನು ಗಡಿಪಾರು ಮಾಡಬೇಕೆಂದು ಬಸವ ಕೇಂದ್ರದವರು ಆಗ್ರಹಿಸಿದ್ದಾರಲ್ಲ. ಇದಕ್ಕೆ ಏನನ್ನುವಿರಿ ?

★ ಹಿಂದೆ ಮಾಡಿದ ತಪ್ಪನ್ನೇ ಈಗಲೂ ಮಾಡುತ್ತಿದ್ದಾರೆಂದು ವಿಷಾದವೆನಿಸುತ್ತಿದೆ. ಭಾರತ ಗಣರಾಜ್ಯ, ಹೇಗೆ ಗಡಿಪಾರು ಮಾಡುವುದು ? ಯಾವುದಾದರೂ ಜಿಲ್ಲೆಯಿಂದಲೋ, ರಾಜ್ಯದಿಂದಲೋ ? ಈಗ ನಮ್ಮ ಮಠಗಳು, ಭಕ್ತರು ಕರ್ನಾಟಕದಲ್ಲಿ ಮಾತ್ರವಲ್ಲ ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಗೋವಾ, ದೆಹಲಿ ಮುಂತಾಗಿ ಇದ್ದಾರೆ. ಕರ್ನಾಟಕ ಸರ್ಕಾರ ಗಡಿಪಾರು ಮಾಡಿದರೆ ಅವರಿಗೆಲ್ಲ ಖುಷಿಯೋ ಖುಷಿ. ಇನ್ನು ಬಸವ ಕೇಂದ್ರದವರ ಪ್ರಭಾವಕ್ಕೆ (?) ಮಣಿದು ಭಾರತದಿಂದಲೇ ಗಡಿಪಾರು ಮಾಡಿದರೆ ಅಮೆರಿಕಾದಲ್ಲಿ ಸಾಕಷ್ಟು ಸದ್ಭಕ್ತರು ಹರ್ಷದಿಂದ ಸ್ವಾಗತಿಸುವರು .

ಚಂದ್ರಮ್ಮ ಸದಾನಂದ ಸ್ವಾಮಿ, ಧಾರವಾಡ

? ದಿ. 4-8-2008ರ ಪ್ರಜಾವಾಣಿಯಲ್ಲಿ ಫಾಲನೇತ್ರ ಎನ್ನುವವರು ನಿಮ್ಮನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಓದಿ ಬಹಳ ನೋವಾಯಿತು. ನಿಮ್ಮ ಅನಿಸಿಕೆ.

★ ಅಂಥ ಮಾತು ಓದಿ ನಕ್ಕು ಬಿಡಬೇಕೇ ವಿನಾ ನೊಂದುಕೊಳ್ಳಬಾರದು. ಇದು ಪ್ರಜಾಪ್ರಭುತ್ವ. ಸಂವಿಧಾನವಿದೆ, ನ್ಯಾಯಾಲಯವಿದೆ, ಕಾನೂನಿದೆ. ವೈಯಕ್ತಿಕ ದ್ವೇಷ ಈರ್ಷೆಗಳಿಂದ ಇಂಥವರು ಆಗ್ರಹಿಸಿದ ಮಾತ್ರಕ್ಕೆ ಬಂಧಿಸುವರೆ ?

ಸುಗೂರಪ್ಪ, ರಾಯಚೂರು

? ಕೊಪ್ಪಳದಲ್ಲಿ ವಚನಾಂಕಿತ ವಿರೋಧಿಸಿ ಕೆಲವರು ರಸ್ತೆ ತಡೆ ಮಾಡಿದರು. 22 ಜನ ಇದ್ದರು. ಅವರು ಪ್ರತಿನಿಧಿಸಿದ್ದ ಸಂಘಟನೆಗಳು ಸುಮಾರು 12. ಬಹಳ ಹಾಸ್ಯಾಸ್ಪದ ಎನಿಸಿತು.

★ ಪಾಪ, ದೊಡ್ಡ ದೊಡ್ಡ ಹೆಸರಿನ ಸಂಸ್ಥೆಗಳ ಮಾನವನ್ನು ಹರಾಜಿಗಿಟ್ಟರು. ಪತ್ರಿಕೆ, ಟಿ.ವಿಯಲ್ಲಿ ಪ್ರದರ್ಶನಗೊಳ್ಳುವ ಯಾವುದೇ ಅರ್ಹತೆ ಇಲ್ಲದವರು ನಮ್ಮನ್ನು ಬೈದು ಮಾಧ್ಯಮಗಳಲ್ಲಿ ವಿರಾಜಿಸಿದರು. ಪ್ರಚಾರ ಪಡೆಯಬೇಕೆಂಬ ಅವರ ಆಸೆ ತೃಪ್ತಿಯಾಯಿತು. ಅದರ ಪುಣ್ಯ ನಮಗೆ ಬರುತ್ತದೆ.

ಅಕ್ಕಮಹಾದೇವಿ ವಚನಾಂಕಿತವನ್ನು ಬದಲಿಸಿಲ್ಲ - ಸ್ಪಷ್ಟೀಕರಣ

- ಮಾತಾಜಿ

ವೀರ ವಿರಾಗಿಣಿ ದಾರ್ಶನಿಕ ದೇವ ಗಂಗೆ ಜಗನ್ಮಾತಾ ಅಕ್ಕಮಹಾದೇವಿ ಯ ವಚನ ಮುದ್ರಿಕೆ "ಚನ್ನಮಲ್ಲಿಕಾರ್ಜುನ." ಈ ವಚನಾಂಕಿತವನ್ನು ನಾನು ಬದಲಾವಣೆ ಮಾಡಿದ್ದೇನೆಂದು ವಿವಾದ ಹುಟ್ಟುಹಾಕಲಾಗಿದೆ. 2005ನೆಯ ಇಸವಿಯ ಜನವರಿ 14ರಂದು "ಅಕ್ಕನ ಅಮರವಾಣಿ" ಎಂಬ ಕೃತಿಯ 5ನೆಯ ಆವೃತ್ತಿ ಕೂಡಲ ಸಂಗಮದ ಶರಣ ಮೇಳದಲ್ಲಿ ಬಿಡುಗಡೆಯಾಯಿತು. ಈ ಆವೃತ್ತಿಯಲ್ಲಿ ಒಂದು ಮಹತ್ವಪೂರ್ಣ ಬದಲಾವಣೆ ಮಾಡಲಾಗಿದೆ. ಅಕ್ಕಮಹಾದೇವಿಯ ಜೀವನದಲ್ಲಿ ಉಪಾಸನಾ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಘಟ್ಟಗಳು ಬರುತ್ತವೆ. 1. ಸಗುಣೋಪಾಸನೆ 2. ನಿರ್ಗುಣೋಪಾಸನೆ. ಸಗುಣೋಪಾಸನೆಯ ಹಂತದಲ್ಲಿ ಅಕ್ಕಮಹಾದೇವಿಯು ಹೊಳೆವ ಕೆಂಜೆಡೆಯ, ಸುಲಿಪಲ್ಲ ಗೊರವ, ಗೋವಿಂದನ ನಯನ ಉಂಗುಟದ ಮೇಲಿರುವ, ಕರ್ಣಕುಂಡಲ ಧರಿಸಿದ ಕೈಲಾಸಪತಿ ಶಿವನ ಆರಾಧನೆ ಮಾಡುತ್ತಾಳೆ. ಗುರುಗಳಾದ ಶ್ರೀಗುರುಲಿಂಗದೇವರ ಮೂಲಕ ದೇವರ ಸ್ವರೂಪವನ್ನು ತಿಳಿಯುತ್ತ ಹೋದಂತೆ ಸಗುಣೋಪಾಸನೆಗಿಂತ ಮುಂದಿನ ಹಂತವಾದ ನಿರ್ಗುಣೋಪಾಸನೆಗೆ ಏರುತ್ತಾಳೆ. ಆಗ ಆರಾಧಿಸುವುದು," ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ ಲಿಂಗದೇವನನ್ನು." ಈ ಎರಡು ಹಂತಗಳನ್ನು ಗುರುತಿಸಲು ನಾನು ಒಂದು ವಿಶೇಷ ಪ್ರಯೋಗ ಮಾಡಿದ್ದೇನೆ. ಸಗುಣೋಪಾಸನೆಯ ವಚನಗಳಲ್ಲಿ ಚನ್ನಮಲ್ಲಿಕಾರ್ಜನ ಹಾಗೆಯೇ ಇದೆ. ಉದಾಹರಣೆಗೆ ಅಕ್ಕನ ವಚನ :

ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ತೆಂಗಿನಕಾಯಿ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಪಲ್ಲ ಗೊರವನು
ಭಿಕ್ಷಕ್ಕೆ ಬಂದುದ ಕಂಡೆನವ್ವಾ
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನವ್ವಾ !

ಈ ವಚನದಲ್ಲಿ ಚನ್ನಮಲ್ಲಿಕಾರ್ಜುನ ಮಾತ್ರ ಇದೆ. ಇನ್ನು ನಿರಾಕಾರ ದೇವನ ಕಲ್ಪನೆ ಬರುವ ವಚನದಲ್ಲಿ ಅಕ್ಕಮಹಾದೇವಿಯ ವಚನ ಮುದ್ರಿಕೆ "ಚನ್ನಮಲ್ಲಿಕಾರ್ಜುನ"ನೇ ಇದ್ದರೂ ಧ್ಯೇಯ ವಸ್ತು ಬದಲಾಗುತ್ತದೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ............

ಶಿವನು ರೂಪ ಉಳ್ಳವನು, ಪುರುಷನ ಕುರುಹು ಉಳ್ಳವನು. ಇಲ್ಲಿ ಅಕ್ಕಮಹಾದೇವಿ ಹುಟ್ಟು - ಸಾವುಗಳಿಲ್ಲದ, ರೂಪವಿಲ್ಲದ ಚೆಲುವನನ್ನು ಕುರಿತು ಬಣ್ಣಿಸುತ್ತಿದ್ದಾಳೆ. ಈ ಭಾವವನ್ನು ಬಿಂಬಿಸಲೋಸುಗ ಇಂಥ ನಿರ್ಗುಣೋಪಾಸನೆಯ ವಚನದಲ್ಲಿ "ಚನ್ನಮಲ್ಲಿಕಾರ್ಜುನ" ಪದವನ್ನು ಹಾಗೆಯೇ ಇಟ್ಟು ಅದರ ಮುಂದೆ "ಮಹಾದೇವಿಯಕ್ಕ ಪ್ರಿಯ ಲಿಂಗದೇವ" ಎಂಬುದನ್ನು ತೋರಿಸುವುದಲ್ಲದೆ, ವಚನಕಾರ್ತಿ ಹೆಸರು ಸಹ ಜೊತೆಗೆ ಬರುತ್ತದೆ. ವಚನ ಮುದ್ರಿಕೆ ಚನ್ನಮಲ್ಲಿಕಾರ್ಜುನ ತೆಗೆದು ಹಾಕದೆ ಅದಕ್ಕೆ ವಿವರಣೆ ಕೊಡಲಾಗಿದೆ. ಅಂದಾಗ ಇದು ವಚನಾಂಕಿತ ಬದಲಾವಣೆ ಹೇಗಾಗುವುದು? ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು ಎಂಬಂತೆ ವಿಚಾರವನ್ನೇ ತಿಳಿದುಕೊಳ್ಳದೆ ಹಿರಿಯ ಸಾಹಿತಿಗಳು, ಸಂಶೋಧಕರು ಮನ ಬಂದಂತೆ ಅಭಿಪ್ರಾಯ ಕೊಡುವುದು ಸರಿಯೆ? ಇದು ಸೈದ್ಧಾಂತಿಕ ದೃಷ್ಟಿಯಿಂದ ಮಾಡಿದ ಅಧ್ಯಯನ. ಒಂದು ನೂತನ ಸತ್ಯವನ್ನು ತೆರದಿಟ್ಟಾಗ ಪ್ರಾಜ್ಞರು ಈ ಬಗ್ಗೆ ಅಧ್ಯಯನ ಮಾಡಬೇಕೇ ವಿನಾ ವೈಯಕ್ತಿಕ ದ್ವೇಷಾಸೂಯೆಗಳಿಂದ ಅನವಶ್ಯಕ ವಿವಾದವನ್ನು ಎಬ್ಬಿಸಬಾರದು.

ಬಸವ ವಚನ ದೀಪ್ತಿಯು ವಚನಗಳನ್ನು ಶುದ್ಧೀಕರಿಸಿದ ಪರಿಷ್ಕೃತ ಆವೃತ್ತಿ. ಅದರ ಬಗ್ಗೆಯೂ ಕೆಲವು ಸಾಹಿತಿಗಳು, ಕೆಲವು ಸಂಘ - ಸಂಸ್ಥೆಗಳವರು ಅನವಶ್ಯಕ ಅಪಪ್ರಚಾರ , ಹೋರಾಟ ಮಾಡಿ ಅಧ್ಯಯನ, ವಿಶ್ಲೇಷಣೆ ಮಾಡಬೇಕಾದ ಒಂದು ಮಹತ್ವಪೂರ್ಣ ಕೃತಿಯನ್ನು ಚಲಾವಣೆಯಿಂದ ದೂರ ಉಳಿಯುವಂತೆ ಮಾಡಿದರು. ಕರ್ನಾಟಕ ಸರ್ಕಾರದವರು ಪ್ರಕಟಿಸಿದ, ಶ್ರೀ ಡಾ|| ಎಂ.ಎಂ.ಕಲಬುರ್ಗಿ

ಸಂಪಾದಿಸಿದ ಮೊದಲನೆ ಸಂಪುಟ (1993) ಬಸವಣ್ಣನವರ ವಚನಗಳು ಎಷ್ಟು ಅಶುದ್ಧವೆಂದರೆ ಗಬ್ಬಿದೇವಯ್ಯನವರ ವಚನಗಳನ್ನು (1202, 1205, 1198) ಬಸವಣ್ಣನವರ ವಚನಗಳೆಂದು ಪ್ರಕಟಿಸಲಾಗಿದೆ. ಹಿಂದಿನ ಪ್ರಕಟಣೆಗಳಿಗಿಂತ ನಂತರದವು ಶುದ್ಧವಾಗಿರಬೇಕಲ್ಲವೆ? 1968ರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಗಿಂತ ಸರ್ಕಾರಿ ಸಂಪುಟ ಅಶುದ್ಧವಾಗಿದ್ದವು. ಇಂಥದು ಹಿರಿಯ ಸಾಹಿತಿಗಳ ಗಮನಕ್ಕೆ ಬರುವುದಿಲ್ಲವೆ?

ಸರ್ವಜ್ಞನ ವಚನ ಮುದ್ರಿಕೆ ಬದಲಾವಣೆ

ಈ ಹಿಂದೆ ಶ್ರೀ ಡಾ|| ಎಲ್.ಬಸವರಾಜು ಅವರು ಸರ್ವಜ್ಞನ ವಚನ ಮುದ್ರಿಕೆ ಬದಲಿಸಿ "ಪರಮಾರ್ಥ" ಎಂದು ಪ್ರಕಟಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದಲೇ ಅದು ಅದು ಪರಮಾರ್ಥನ ವಚನಗಳು ಎಂದು ಪ್ರಕಾಶನಗೊಂಡಿತ್ತು. ಸರ್ವಜ್ಞನ ವಚನಾಂಕಿತ ಬದಲಾವಣೆ ಹಿರಿ ಕಿರಿಯ ಸಾಹಿತಿಗಳ ಗಮನಕ್ಕೆ ಏಕೆ ಬರಲಿಲ್ಲ? ಸರ್ವಜ್ಞನು ಗರ್ವದಿಂದ ಆದವನಲ್ಲ; ಹೀಗಾಗಿ ಅವನು ತನ್ನ ಹೆಸರನ್ನು ಇಟ್ಟುಕೊಳ್ಳುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಡಾ|| ಎಲ್.ಬಸವರಾಜು ಸರ್ವಜ್ಞ ತೆಗೆದು "ಪರಮಾರ್ಥ" ಹಾಕಿದರು. ಆ ಪುಸ್ತಕ ಮುಟ್ಟುಗೋಲು ಹಾಕಲು ಏಕೆ ಹೋರಾಡಲಿಲ್ಲ? ಡಾ|| ಚಿದಾನಂದ ಮೂರ್ತಿಯವರು ತಾತ್ವಿಕವೂ ಅರ್ಥಗರ್ಭಿತವೂ ಆದ ಅಲ್ಲಮಪ್ರಭುದೇವರ ವಚನ ಮುದ್ರಿಕೆ "ಗುಹೇಶ್ವರ" ಎಂಬುದನ್ನು "ಗೊಗ್ಗೇಶ್ವರ" ಎಂದು ಬದಲಿಸಿದ್ದು ಪ್ರಭುದೇವರ ದಿವ್ಯ ಭವ್ಯ ದೇವರ ಕಲ್ಪನೆಗೆ ಚ್ಯುತಿ ತರುವಂತಿದೆ. ಈ ಬದಲಾವಣೆ ಬ್ರಹ್ಮಾಂಡದೊಡೆಯನ ಪರಿಕಲ್ಪನೆ ಕೊಡುವ ಗುಹೇಶ್ವರನನ್ನು ಗ್ರಾಮದೇವತೆ ಗೋಗ್ಗೇಶ್ವರನ (ಕೆಳ) ಮಟ್ಟಕ್ಕೆ ಇಳಿಸಿದ್ದು ಡಾ|| ಚಿ.ಮೂ ಮಾಡಿದ ತಾತ್ವಿಕ ಅಪಚಾರ

ವಲ್ಲವೆ? ಇದು ಚಿ.ಮೂರ ಸಂಶೋಧನೆ ಎಂದು ಒಪ್ಪಿಕೊಳ್ಳುವ ಸಾಹಿತಿಗಳ ವೃಂದ 'ಲಿಂಗದೇವ ಒಂದು ಸಂಶೋಧನೆ ಎಂದೇಕೆ ಒಪ್ಪಿಕೊಳ್ಳಬಾರದು?

ಕೂಡಲ ಸಂಗಮದೇವ ಕೃಷ್ಣಾ-ಮಲಾಪಹಾರಿಯರ ಸಂಗಮದಲ್ಲಿ ಇರುವ ಶಿವನ ಪ್ರತೀಕ. ಬಾಲ್ಯದಲ್ಲಿ ಅರ್ಚಕರಾಗಿ ಸೇವೆ ಮಾಡಿದ ಬಸವಣ್ಣನವರು ವಚನಗಳನ್ನು ಬರೆಯಲಾರಂಭಿಸಿವಾಗ ಕೂಡಲ ಸಂಗಮದೇವ ನಿರ್ದೇಶಿಸಿದ ಧ್ಯೇಯ ವಸ್ತು ಸಂಗಮೇಶ್ವರ.

ಹೊನ್ನ ಹಾವುಗೆಯ ಮೆಟ್ಟಿದವನ
ಮಿಡಿ ಮುಟ್ಟದ ಕೆಂಜೆಡೆಯವನ, ಕರದಲ್ಲಿ ಕಪಾಲ ಹಿಡಿದವನ
ಬಾಣನ ಬಾಗಿಲ ಕಾಯ್ದವನ, ಕೂಡಲ ಸಂಗಯ್ಯನೆಂಬವನ

ಗುರು ಬಸವಣ್ಣನವರು 21ನೆಯ ವಯಸ್ಸಿನಲ್ಲಿ ಸಾಕ್ಷಾತ್ಕಾರವಾಗಿ, ನಿರಾಕಾರ ದೇವನ ಉಪಾಸಕರಾಗಿ ಏಕದೇವೋಪಾಸನೆಗೆ ಬದ್ಧರಾಗಿ ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗದ ರೂಪದಲ್ಲಿ ಸಾಕಾರಗೊಳಿಸಿದರು. ನವ ಧರ್ಮ ದ್ರಷ್ಟಾರರಾಗುವ ಪೂರ್ವದಲ್ಲಿ ಬಸವಣ್ಣನವರು ಪೂಜಿಸುತ್ತಿದ್ದುದು ಸಂಗಮೇಶ್ವರನನ್ನು; ನಂತರ ಪೂಜಿಸಿದ್ದು, ಪೂಜಿಸಲು ಹೇಳಿದ್ದು ಸೃಷ್ಟಿಕರ್ತ ಲಿಂಗದೇವನನ್ನು, ಇಷ್ಟಲಿಂಗ ರೂಪದಲ್ಲಿ, ಆದ್ದರಿಂದ ಶಿವೋಪಾಸನೆಯ ವಚನಗಳಲ್ಲಿ ಕೂಡಲ ಸಂಗಮ ಮುದ್ರಿಕೆಯನ್ನು ಹಾಗೆಯೇ ಇಡಲಾಗಿದೆ; ಇನ್ನುಳಿದ ವಚನಗಳಲ್ಲಿ ವಚನ ಮುದ್ರಿಕೆಯನ್ನಾಗಿ ಲಿಂಗದೇವ ಬಳಸಲಾಗಿದೆ. ತಾತ್ವಿಕ ಖಚಿತತೆ, ಸುಸಂಬದ್ಧತೆಗಾಗಿ ಈ ಮಹತ್ತರ ಬದಲಾವಣೆ ಮಾಡಲಾಗಿದೆ ಎಂಬುದನ್ನು ಪ್ರಾಜ್ಞರು ಅರಿಯಬೇಕು.

ಉದಯ ಟಿ.ವಿ. ಸಂದರ್ಶನ

ದಿ.31-7-2008 ರಂದು ಉದಯ ಟಿ.ವಿ.ಯವರು ಮಧ್ಯಾಹ್ನ 4 ರಿಂದ 5ರವರೆಗೆ ವಿಚಾರ -ವಿವಾದ ಶೀರ್ಷಿಕೆಯಡಿಯಲ್ಲಿ ಸಂದರ್ಶನ ಮಾಡಿದರು. ನಿರೂಪಕರು ಶ್ರೀ.ಬಿ.ಎಸ್.ಸತ್ಯನಾರಾಯಣ, ಭಾಗವಹಿಸಿದವರು ನಾನು, ನಿವೃತ್ತ ಶ್ರೀ ಪ್ರೊ.ಮರುಳ ಸಿದ್ಧಯನವರು ಮತ್ತು ಶ್ರೀ ಬಂಜಗೆರೆ ಜಯಪ್ರಕಾಶರು. ಆಗ ನಡೆದ ಪ್ರಶ್ನೋತ್ತರಗಳಲ್ಲಿ ಕೆಲವನ್ನು ಬರೆಯುತ್ತೇನೆ.

1. ಲಿಂಗದೇವ - ವಚನಾಂಕಿತ ಬದಲಾವಣೆಯನ್ನು ಬಸವಣ್ಣನವರೇ ಮಾಡಬಹುದಿತ್ತಲ್ಲ? (ಬಂಜಗೆರೆ ಜಯಪ್ರಕಾಶ್)

ಉ: ಅಹುದು. ಅವರು ಮಾಡಿರಲೇ ಬೇಕು. 12ನೆಯ ಶತಮಾನದಲ್ಲಿ ಸೃಷ್ಟಿಯಾದ ವಚನ ಸಾಹಿತ್ಯ ಕಲ್ಯಾಣ ಕ್ರಾಂತಿಯ ನಂತರ ಅರಣ್ಯವನ್ನು ಸೇರಿತು. ನಂತರ ಅದು ಬೆಳಕಿಗೆ ಬಂದುದು 15ನೆಯ ಶತಮಾನದಲ್ಲಿ. ಆ ಸಂದರ್ಭದಲ್ಲಿ ಶೈವವಾದ, ವೀರಶೈವವಾದವು ಒಳ ಸೇರಿತು. ಬಸವಣ್ಣನವರು ಲಿಂಗದೇವ ಬಳಸಿದ್ದರೂ ಅದನ್ನು ತೆಗೆದು ಕೂಡಲ ಸಂಗಮದೇವ ಇಟ್ಟಿರಬಹುದೆಂದು ನನ್ನ ಖಚಿತ ನಂಬಿಕೆ.

2. ಮ.ಸಿ: 12ನೆಯ ಶತಮಾನದಿಂದ ಈವರೆಗೂ ಯಾರಿಗೂ ಹೊಳೆಯದಿದ್ದ ಲಿಂಗದೇವ ಪದವು ನಿಮಗೆ ಮಾತ್ರ ಏಕೆ ಹೊಳೆಯಿತು?

ಉ: ಅದು ಪ್ರತಿಭೆಗೆ ಸಂಬಂಧಿಸಿದ ವಿಷಯ. ನನಗೆ ಹೊಳೆಯಿತಲ್ಲ ಎಂದು ಹೆಮ್ಮೆ ಪಡಿರಿ. ಈ ಮೊದಲು ಸಹ ಬಸವಣ್ಣನವರ ಸಿದ್ಧಾಂತಕ್ಕೆ ಕೂಡಲ ಸಂಗಮದೇವ ತಾತ್ವಿಕವಾಗಿ ಹೊಂದದು ಎಂಬ ಆಲೋಚನೆ, ಲಿಂ|| ಶರಣ. ಕರ್ನಾಟಕದ ಗಾಂಧಿ ಎಂದು ಖ್ಯಾತಿಹೊತ್ತ ಶ್ರೀ ಹರ್ಡೇಕರ್ ಮಂಜಪ್ಪನವರಿಗೆ ಬಂದಿದೆ. ಅವರು ಬಸವ ಬೋಧಾಮೃತ ಎಂಬ ಗ್ರಂಥ ರಚಿಸಿದ್ದು, ಬಸವಣ್ಣನವರ 108 ವಚನಗಳನ್ನು ಸಂಗ್ರಹಿಸಿ ಅವುಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಪ್ರಥಮ ಆವೃತ್ತಿ ಬಿಡುಗಡೆಯಾಗಿರುವುದು ದಿ.13-6-1927. ನನಗೆ ಸಿಕ್ಕಿರುವ ಪ್ರತಿ 1951ರಲ್ಲಿ ಮುದ್ರಣಗೊಂಡಿದ್ದು. ಇದರಲ್ಲಿ ಶರಣ. ಹರ್ಡೇಕರ್ ಮಂಜಪ್ಪನವರು ಮೂಲ ವಚನದಲ್ಲಿ ಕೂಡಲ ಸಂಗಮದೇವ ಎಂದು ಇರುವ ಸ್ಥಳದಲ್ಲಿ ವ್ಯಾಖ್ಯಾನ ಮಾಡುವಾಗ ಲಿಂಗದೇವ ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ. ಇದು ಅವರ ಆಲೋಚನಾ ಸರಣಿಯನ್ನು ಬಿಂಬಿಸುತ್ತದೆ.

3. ನಿಜ, ಆದರೆ ಅವರು ವಚನಾಂಕಿತ ಬದಲಿಸಿಲ್ಲ. (ಮರುಳ ಸಿದ್ಧಯ್ಯ) (ಇದಕ್ಕೆ ನಾನು ಉತ್ತರ ಕೊಡಬೇಕೆಂಬುವಷ್ಟರಲ್ಲಿ ಯಾರೋ ವಿಷಯಾಂತರ ಮಾಡಿದರು.)

ಉ: ಬಹುಶಃ ಸಮಾಜವನ್ನು ಎದುರು ಹಾಕಿಕೊಳ್ಳುವ ಮನಸ್ಥಿತಿ ಅವರಲ್ಲಿ ನಿರ್ಮಾಣವಾಗಿರಲಿಕ್ಕಿಲ್ಲ. ಇದಕ್ಕೆ ಬಹಳ ಧೈರ್ಯಬೇಕು. ಇವತ್ತು ಮಠಾಧೀಶರು, ಸಾಹಿತಿಗಳು ಮತ್ತೆ ಕೆಲವರು ಕೊಡುವ ಕಿರುಕುಳ ನೋಡಿದರೆ ತಿಳಿಯುವುದಿಲ್ಲವೆ?

4. ಗುರುಗಳಾದ ಪೂಜ್ಯ ಲಿಂಗಾನಂದ ಸ್ವಾಮಿಗಳು ನಿಧನರಾದ ನಂತರ ಮಾತಾಜಿ ಲಿಂಗದೇವ ಪದಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಇದು ಅವರ ಗುರುಗಳ ಮಹತ್ವ ಹೆಚ್ಚಿಸಲು ಎಂಬ ಆರೋಪವಿದೆಯಲ್ಲ. (ಬಿ.ಎಸ್.ಸತ್ಯನಾರಾಯಣ)

ಉ: ಲಿಂಗದೇವ ವಚನಾಂಕಿತ ನಾನು ಬಳಸಿರುವುದು 1995ರಲ್ಲೇ. ಬಸವ ಧರ್ಮ ಸಂಸ್ಕಾರಗಳು ಎಂಬ ಮಹತ್ವಪೂರ್ಣ ಪುಸ್ತಕವನ್ನು ನಾನು ಬರೆದಿದ್ದು ಅದರಲ್ಲಿ ಹುಟ್ಟಿನಿಂದ ಸಾವಿನವರೆಗೆ ಮಾಡಬೇಕಾದ ಧಾರ್ಮಿಕ ವಿಧಿ ವಿಧಾನಗಳ ನಿರೂಪಣೆಯಿದೆ. ಆಗಿನ್ನೂ ಪೂಜ್ಯ ಗುರುಗಳು ಇದ್ದರು. ಅದರಲ್ಲೇ ವಚನಾಂಕಿತವಾಗಿ ಲಿಂಗದೇವವನ್ನು ಬಳಸಿದ್ದೇನೆ. ನಾನು ಗುರು ಬಸವಣ್ಣನವರ 800ನೆಯ ಲಿಂಗೈಕ್ಯ ಸಂಸ್ಮರಣೆಗಾಗಿ ಅವರ ಸಮಗ್ರ ವಚನಗಳನ್ನು ಬಸವ ವಚನ ದೀಪ್ತಿ ಗ್ರಂಥದ ಮೂಲದ ಪ್ರಕಾಶಿಸಿದಾಗ ಲಿಂಗದೇವ ವಚನಾಂಕಿತದ ವಿರುದ್ಧ ವಿವಾದ ಆರಂಭವಾಯಿತು. ಅಲ್ಲದೆ ಲಿಂಗದೇವ ಮತ್ತು ಲಿಂಗಾನಂದ ಪದಗಳ ವ್ಯತ್ಯಾಸ ಸ್ಪಷ್ಟವಾಗಿದೆ. ನಾವು ಕಟ್ಟಿಕೊಳ್ಳುವ ದೇವರು ಲಿಂಗದೇವರು, ಲಿಂಗಾಯತ ಧರ್ಮದ ದೇವರು ಲಿಂಗದೇವರು.

5. ಪ್ರಚಾರ, ಪ್ರಸಿದ್ಧಿ ಪಡೆಯಲು ಮಾತೆಯವರು ಇಂಥ (ವಚನಾಂಕಿತ ಬದಲಾವಣೆಯಂತಹ) ಕೆಲಸ ಮಾಡುತ್ತಾರೆ ಎಂಬ ಮಾತೂ ಕೇಳಿ ಬರುತ್ತಿದೆ. (ಮರುಳುಸಿದ್ದಯ್ಯ)

ಉ: ನಮಗೆ ಸಿಗಬೇಕಾದ ಪ್ರಚಾರ, ಪ್ರಸಿದ್ಧಿ ಎಲ್ಲ ಸಿಕ್ಕಿಯಾಗಿದೆ. ಅದಕ್ಕಾಗಿ ವಚನಾಂಕಿತ ಬದಲಾಯಿಸುವುದನ್ನಾಗಲೀ, ಬಂಜಗೆರೆಯವರ ವಿರುದ್ಧ ಹೋರಾಡುವುದನ್ನಾಗಲಿ ಮಾಡುವಷ್ಟು ಕೆಳಮಟ್ಟದವರು ನಾವಲ್ಲ. ನನ್ನ ಉದ್ದೇಶ ಬಸವಣ್ಣನವರ ತತ್ವ-ಸಿದ್ಧಾಂತಗಳಿಗೆ ತಾತ್ವಿಕ ಖಚಿತತೆ ತಂದುಕೊಡುವುದು. ಅದನ್ನು ವಿಶ್ವಧರ್ಮವಾಗಿ ಪ್ರಚಾರ ಮಾಡುವುದು.

6. ನಿಜ, ಮಾತೆಯವರು ಸತ್ಯದ ದರ್ಶನ ಮಾಡಿಸುತ್ತಿದ್ದಾರೆಂದು ಒಪ್ಪಬಹುದು. ಆದರೆ ಹಿಡಿದ ದಾರಿ ತಪ್ಪಿದೆ. (ಬಂಜಗೆರೆ ಜಯಪ್ರಕಾಶ್)

ಉ: ತಪ್ಪೋ ಒಪ್ಪೋ ಎನ್ನುವುದನ್ನು ಇತಿಹಾಸವು ಖಚಿತಪಡಿಸುತ್ತದೆ.

ಲಿಂಗದೇವ ಸತ್ಯ: ಮಾತಾಜಿ ನಿಲುವಿಗೆ ರಾಷ್ಟ್ರೀಯ ಬಸವ ದಳ ಬದ್ಧ

ಬಸವ ಧರ್ಮ ಪೀಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ವಿಶ್ವಗುರು ಬಸವಣ್ಣನವರ ಸಮಗ್ರ ವಚನಗಳನ್ನು ಸಂಗ್ರಹಿಸಿ, ಶುದ್ಧೀಕರಿಸಿ "ಬಸವ ವಚನ ದೀಪ್ತಿ" ಎಂಬ ಪವಿತ್ರ ಗ್ರಂಥವನ್ನು 12 ವರ್ಷಗಳ ಹಿಂದೆ ಬಿಡುಗಡೆ ಮಾಡಿದ್ದಾರೆ. ಆ ಗ್ರಂಥದಲ್ಲಿ ಮಾಡಿರುವ ಪ್ರಮುಖ ಬದಲಾವಣೆ ಎಂದರೆ ಗುರು ಬಸವಣ್ಣನವರ ವಚನಗಳಲ್ಲಿ "ಲಿಂಗದೇವ" ವಚನಾಂಕಿತ ಸೇರಿಸಿರುವುದು. ದೇವ ಸಾಕ್ಷಾತ್ಕಾರಕ್ಕೂ ಮುಂಚೆ ಶ್ರೀ ಗುರು ಬಸವಣ್ಣನವರು ಯೋಗಿ ಶಿವನ ಕುರುಹಾದ ಸ್ಥಾವರಲಿಂಗ ಅಥವಾ ಕೂಡಲ ಸಂಗಮದೇವನನ್ನು ಪೂಜಿಸಿದ್ದು ನಿಜ. ಆದರೆ ಸೃಷ್ಟಿಕರ್ತ, ನಿರಾಕಾರ ನಿರ್ಗುಣ ಪರಮಾತ್ಮನ ಸಾಕ್ಷಾತ್ಕಾರದ ನಂತರ ಇಷ್ಟಲಿಂಗವನ್ನು ಕಂಡು ಹಿಡಿದು ಅವರು ಆ ದೇವನಿಗೆ ಲಿಂಗದೇವಾ ಎಂದು ಕರೆದರು. ಲಿಂಗಾಯತರು ಇಷ್ಟಲಿಂಗ ಧರಿಸಿ-ಲಿಂಗದೇವನನ್ನೇ ಪೂಜಿಸ ಬೇಕೆಂಬುದು ಪೂಜ್ಯ ಮಾತಾಜಿಯವರ ಸಂಶೋಧನೆಯ ಹಿಂದಿರುವ ಸತ್ಯ ಹಾಗೂ ಕಳಕಳಿ. ಆದ್ದರಿಂದ ರಾಷ್ಟ್ರೀಯ ಬಸವ ದಳವು ಇದಕ್ಕೆ ಬದ್ಧವಾಗಿದೆ ಮತ್ತು ಲಿಂಗದೇವ ಅಂಕಿತವನ್ನು ಬಲವಾಗಿ ಸಮರ್ಥಿಸಿಕೊಳ್ಳುವುದಾಗಿ ರಾಷ್ಟ್ರೀಯ ಬಸವ ದಳ ದಿ.7-8-2008ರಂದು ಘೋಷಿಸಿದೆ.

ಈ ನಿರ್ಣಯವನ್ನು ಬೆಂಗಳೂರು ಮಹಾನಗರದ ಬಸವ ಮಂಟಪದಲ್ಲಿ ನಡೆದ ರಾಷ್ಟ್ರೀಯ ಬಸವ ದಳದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಕೈಗೊಳ್ಳಲಾಯಿತು. ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ಪ್ರಧಾನ ಸಂಚಾಲಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ಪಡೆಯಲು ಹೋರಾಟ ತೀವ್ರಗೊಳಿಸುವ ಬಗ್ಗೆ ನಿರ್ಣಯಿಸಲಾಯಿತು.

ಶರಣ ಭಾಷೆಯಾದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಮಾನ ಪಡೆಯುವುದು, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯವೆಂದು ಹೆಸರಿಡಲು ಒತ್ತಾಯಿಸುವುದು. ಬಿಜಾಪುರದಲ್ಲಿ ರೂಪುಗೊಂಡಿರುವ ಮಹಿಳಾ ವಿಶ್ವವಿದ್ಯಾಲಯಕ್ಕೆ ಜಗನ್ಮಾತಾ ಅಕ್ಕಮಹಾದೇವಿಯವರ ಹೆಸರಿಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವುದು ಮತ್ತು ಭಾರತ ದೇಶದಾದ್ಯಂತ ರಾಷ್ಟ್ರೀಯ ಬಸವ ದಳದ ಶಾಖೆಗಳನ್ನು ರಚಿಸಿ ವ್ಯಾಪಕ ಸಂಘಟನೆ ಮಾಡುವುದು. ಚನ್ನಬಸವಣ್ಣನವರ ಕ್ಷೇತ್ರ ಉಳವಿಯನ್ನು ಅಭಿವೃದ್ಧಿ ಪಡಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸುವುದು. ಧರ್ಮ ವಂಚಿತರಿಗೆಲ್ಲ ದೀಕ್ಷಾ ಸಂಸ್ಕಾರದ ವ್ಯವಸ್ಥೆ ಮಾಡುವುದು. ಮಾತ್ರವಲ್ಲ ಎಲ್ಲಾ ವರ್ಗಗಳ ಜನತೆಗೂ ಬಸವ ತತ್ವ ಪರಿಚಯಿಸುವುದು. ಸೇರಿದಂತೆ ಇನ್ನೂ ವಿವಿಧ ನಿರ್ಣಯಗಳನ್ನು ಈ ಸಭೆಯಲ್ಲಿ ಕೈಗೊಳ್ಳಲಾಯಿತು.

ಪೂಜ್ಯ ಮಾತಾಜಿಯವರು ಅಕ್ಕಮಹಾದೇವಿಯವರ ವಚನಾಂಕಿತವನ್ನು ತಿದ್ದಿದ್ದಾರೆ ಎಂದು ಕೆಲವರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಆದರೆ ಪೂಜ್ಯ ಮಾತಾಜಿಯವರು ವಚನಾಂಕಿತ ಬದಲಾಯಿಸಿಲ್ಲ. ಅಕ್ಕಮಹಾದೇವಿಯವರ ಸಗುಣೋಪಾಸನೆಯ ವಚನಗಳಲ್ಲಿ ಚನ್ನಮಲ್ಲಿಕಾರ್ಜುನ-ವಿದೆ. ನಿರ್ಗುಣೋಪಾಸನೆಯ ವಚನಗಳಲ್ಲಿಯೂ ಅದನ್ನೇ ಉಳಿಸಿಕೊಂಡು ಅದರ ಮುಂದೆ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿವರಣೆ ನೀಡಿದ್ದಾರೆ. ಈ ಬಗ್ಗೆ ಅಪಾರ್ಥ ಮಾಡುವ ಅಗತ್ಯವಿಲ್ಲ ಎಂದು ರಾಷ್ಟ್ರೀಯ ಬಸವ ದಳ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಭೆಯಲ್ಲಿ ಮಹಾರಾಷ್ಟ್ರದ ಅಲ್ಲಮಗಿರಿಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ, ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷರಾದ ಶರಣ.ಕೆ.ವೀರಣ್ಣ ಕೊರ್ಲಹಳ್ಳಿ, ಹಾಗೂ ಪ್ರಮುಖರಾದ ಗುಲ್ಬರ್ಗಾದ ಆರ್.ಜಿ.ಶೆಟಗಾರ, ಬೀದರಿನ ಶಿವರಾಜ್ ಪಾಟೀಲ ಅತಿವಾಳ್, ಬೆಂಗಳೂರಿನ ಶ್ರೀಕಂಠಮೂರ್ತಿ, ವೀರೇಶ್, ಮೈಸೂರಿನ ರತ್ನಮ್ಮ ಜಯಣ್ಣ, ವೀರಣ್ಣ, ಗುಲ್ಬರ್ಗಾದ ನಾಗರಾಜ ನಿಂಬರಗಿ, ಶಾಂತಪ್ಪ ಪಾಟೀಲ್, ತಮಿಳು ನಾಡಿನ ಬಸವರಸ, ಬಳ್ಳಾರಿಯ ಬಸವ ಪ್ರಭು, ಚಿಕ್ಕಮಗಳೂರಿನ ಬಾಣೂರು ಚನ್ನಪ್ಪ, ಶಿವಮೊಗ್ಗದ ಹಿರಣ್ಣಯ್ಯ, ಭದ್ರಾವತಿಯ ಶಾರದಾ ಬಸವರಾಜ್, ರಾಯಚೂರಿನ ಬಸವನಗೌಡ ಪಾಟೀಲ್, ಯುವ ಧುರೀಣರಾದ ಸುರೇಶ್ ಮರೂರ್‌ಕರ್, ನ್ಯಾಯವಾದಿ ಕರಿಬಸಪ್ಪ ಕೋರಿಶೆಟ್ಟರ್ ಇನ್ನೂ ಅನೇಕ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವರದಿ: ಮಹಾರುದ್ರ ಪಾಕುಳಗಿ, ಬೆಂಗಳೂರು



ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಏಳನೆಯ

ಕಲ್ಯಾಣ ಪರ್ವ

2008ರ ಅಕ್ಟೋಬರ್ 12, 13 ಮತ್ತು 14 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 21ನೆಯ ಶರಣ ಮೇಳವು ಇದೇ 2008ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು, ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2008ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 7ನೆಯ ಕಲ್ಯಾಣ ಪರ್ವವನ್ನು 2008 ರ ಅಕ್ಟೋಬರ್ 12, 13 ಮತ್ತು 14 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ ಶರಣ ಗಣವು

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 11ರ ರಾತ್ರಿಯಿಂದ ಅಕ್ಟೋಬರ್ 15 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 300 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (*F.D*) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ
ಬಸವ ಮಹಾಮನೆ, ಬಸವ ಕಲ್ಯಾಣ -585327, ಜಿಲ್ಲೆ-ಬೀದರ್
☎:08482 -251921/252856

ವಚನ ದುಂದುಭಿ -17

- ಶರಣ ಸಚ್ಚಿದಾನಂದ ಚಟನಳ್ಳಿ

1. "ಶರಣ ಲೋಕದಿಚ್ಛೆಯ ನಡೆಯ; ಲೋಕದಿಚ್ಛೆಯ ನುಡಿಯ" ಇದು ಯಾವ ಶರಣರ ಹೇಳಿಕೆ.
2. "ಲಕ್ಷಕೊಬ್ಬ ಶರಣ ಕೋಟಿಗೊಬ್ಬ ಭಕ್ತ" ಇದು ಯಾರ ವಚನದಲ್ಲಿರುವ ನುಡಿ.
3. "ಒಲ್ಲೆನೆಂಬುದು ವೈರಾಗ್ಯ ಒಲಿದೆನೆಂಬುದು ಕಾಯಗುಣ." ಇದು ಯಾರ ವಚನ ?
4. ಪರಮಾತ್ಮನ ಮೂರು ಸಾಕಾರ ರೂಪಗಳು ಯಾವುವು ?
5. ಷಡೂರ್ಮಿಗಳು ಯಾವುವು?
6. ಕುಂಭಿಪಾತಕ ಎಂದರೇನು ?
7. ಬ್ರಹ್ಮರಂಧ್ರದಲ್ಲಿ ಅರಿವರತ ಶಿವಯೋಗಿ ಎಂದು ಅಲ್ಲಮಪ್ರಭುದೇವರು ಯಾರನ್ನು ಕರೆದಿದ್ದಾರೆ?
8. "ಕಾಯವೆ ಪೀಠಿಕೆ ಪ್ರಾಣವೆ ಲಿಂಗವಾಗಿರಲು ಬೇರೆ ಮತ್ತೆ ಕುರುಹೇಕಯ್ಯಾ?" ಎಂದು ಯಾರು ಯಾರಿಗೆ ಕೇಳಿದರು.
9. ಭಕ್ತರ ಭಾವದಲ್ಲಿ ಸುಳಿವ ಸುಳುಹು; ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ ಎಂದು ಯಾರು ಯಾರಿಗೆ ಹೇಳಿದರು?
10. ಸದಾಚಾರ ಎಂದರೇನು ?
11. ಹೇಮಗಲ್ಲ ಹಂಪಣ್ಣನವರ ವಚನಾಂಕಿತ ಯಾವುದು ?
12. "ಎಲೆ ನಮ್ಮ ಕೂಡಲಚನ್ನ ಸಂಗಮದೇವಯ್ಯ" ಇದು ಯಾರ ವಚನ ?
13. ಆವ ಕುಲವಾದಡೇನು ಲಿಂಗವಿದ್ದವನೆ ಕುಲಜನು...... ಗುರು ಬಸವಣ್ಣನವರ ಈ ವಚನವನ್ನು ಪೂರ್ಣಗೊಳಿಸಿ
14. ಮನದ ಮೈಲಿಗೆ ತೊಳೆಯಲು ವ್ಯಕ್ತಿಯು ಮಾಡಬೇಕಾದ ಕ್ರಿಯೆ ಯಾವುದು?
15. ಮಹೇಶ್ವರ ಸ್ಥಲವನ್ನಾಚರಿಸುವ ಭಕ್ತನ ಪ್ರಮುಖ ಲಕ್ಷಣ ಯಾವುದು ?

ವಚನ ದುಂದುಭಿ -16ರ ಸರಿ ಉತ್ತರಗಳು

1. ಅಂತರಂಗದಲ್ಲಾಗುವ ಚಂಚಲತೆ
2. ಅಕ್ಕಮಹಾದೇವಿ
3. ಸಿದ್ಧರಾಮೇಶ್ವರರು
4. ಶರೀರದೊಳಗಿರುವ ಆತ್ಮನಿಗೆ
5. ಎನ್ನ ಕಂಗಳ ಮುಂದಣ ಕಾಮವ ಕಳೆದು; ನಿಮ್ಮ ಮಂಗಳ ಸ್ವರೂಪವ ತೋರಿಸಯ್ಯ ದೇವಾ ಎನ್ನ ಮನದ ಮುಂದಣ ಆಸೆಯ ಬಿಡಿಸಿ; ನಿಮ್ಮ ಮಂತ್ರದ ನೆನಹ ನೆಲೆಗೊಳಿಸಯ್ಯಾ ದೇವಾ ಎನ್ನ ತನುವ ಮುಸುಕಿದ ತಾಮಸವ ಕಳೆದು; ನಿಮ್ಮ ಭಕ್ತಿಯ ಆನುವ ತೋರಿಸಿ ಬದುಕಿದೆನಯ್ಯಾದೇವಾ ಅಖಂಡೇಶ್ವರಾ.
6. ಮಾರಾರಿ ಎಂದರೆ ಕಾಮನ ವೈರಿಯಾದವನು
7. ವೈದಿಕರು ಪ್ರಾಯಶ್ಚಿತ್ತಕ್ಕೆ ಬಳಸುವ ಐದು ವಸ್ತುಗಳನ್ನು ಪಂಚಗವ್ಯಗಳೆಂದು ಕರೆಯುವರು.
   1. ಹಸುವಿನ ಹಾಲು, ಮೊಸರು, ತುಪ್ಪ ಗಂಜಲ, ಸಗಣಿ
8. ಚೆನ್ನಬಸವಣ್ಣನವರು ಅಲ್ಲಮ ಪ್ರಭುದೇವರಿಗೆ
9. ಏಕಾಗ್ರಚಿತ್ತದಿಂದ ಮಾಡುವ ಧ್ಯಾನ
10. ಹಿತೈಷಿಗಳು/ ಸಹೃದಯವಂತರು
11. ಪ್ರತಿಸ್ಪರ್ಧಿ/ ಎದುರಾಳಿ
12. ದೇವರು -ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ
13. ಹಿರಿಯೂರು
14. ಅಲ್ಲಮಪ್ರಭುದೇವರು
15. ಮೆರೆಮಿಂಡಯ್ಯ

ವಚನ ದುಂದುಭಿ -16ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ್, ಬೆಂಗಳೂರು
2. ಹೆಚ್ ಚಂದ್ರಿಕಾ, ಭದ್ರಾವತಿ
3. ಚನ್ನಬಸವಣ್ಣ,ಬಿ.ಸಿ., ಬೆಂಡರವಾಡಿ
4. ವಚನ ಶ್ರೀ, ಬೆಂಗಳೂರು
5. ಮಹಾರುದ್ರ, ಬೆಂಗಳೂರು



ನೀಲಾಂಬಿಕಾ ಷಷ್ಠಿಯ ನಿಮಿತ್ತ ಸಾಮೂಹಿಕ ಇಷ್ಟಲಿಂಗ ಪೂಜೆ









ಪುಷ್ಪಾಲಂಕೃತವಾದ ಪೂಜ್ಯ ಮತಾಜಿಯವರ ಕರದಿಷ್ಟಲಿಂಗ.



'ಬಸವ ಪಂಚಮಿ' ನಿಮಿತ್ತ ಹೊರಟ ಬಸವ ಭಾವಚಿತ್ರ ಮೆರವಣಿಗೆಗೆ ಪೂಜ್ಯ ಮಾತಾಜಿಯವರಿಂದ ಚಾಲನೆ









ಬಸವ ಪಂಚಮಿಯಂದು ಯುವ ರಾಷ್ಟ್ರೀಯ ಬಸವ ದಳದವರಿಂದ ಆಸ್ಪತ್ರೆಯಲ್ಲಿ ಹಣ್ಣು-ಹಾಲು